# www.karunaduexams.com

ಪ್ರಚಲಿತ ವಿದ್ಯಮಾನ ಮತ್ತು ಸಾಮಾನ್ಯ ಜ್ಞಾನ ಕ್ವಿಜ್ ನವೆಂಬರ್

www.karunaduexams.com

1. ಉದ್ದೇಶಿತ “ಸಿರುವಣಿ ನದಿ (Siruvani river) ಅಣೆಕಟ್ಟು ಯೋಜನೆ ಯಾವ ಎರಡು ರಾಜ್ಯಗಳ ನಡುವಿನ ವಿವಾದತ್ಮಕ ಯೋಜನೆಯಾಗಿದೆ?

ಅ) ಕೇರಳ ಮತ್ತು ತಮಿಳುನಾಡು

ಆ) ಮಹಾರಾಷ್ಟ್ರ ಮತ್ತು ಗೋವಾ

ಇ) ಆಂಧ್ರಪ್ರದೇಶ ಮತ್ತು ತೆಲಂಗಣ

ಈ) ತೆಲಂಗಣ ಮತ್ತು ಒಡಿಶಾ

ಕೇರಳ ಮತ್ತು ತಮಿಳುನಾಡು

ಸಿರುವಣಿ ನದಿ ಕಾವೇರಿ ನದಿಯ ಉಪನದಿಯ ಉಪನದಿ. ಸಿರುವಣಿ ನದಿಯು ತಮಿಳುನಾಡಿನ ಕೊಯಮತ್ತೂರು ಜಿಲ್ಲೆ ಹಾಗೂ ಕೇರಳದ ಪಾಲಕ್ಕಡ್ ಜಿಲ್ಲೆಯಲ್ಲಿ ಹರಿಯುವ ಪ್ರಮುಖ ನದಿ. ಕೇರಳ ಸರ್ಕಾರ ಈ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸಲು ಮುಂದಾಗಿದ್ದು, ತಮಿಳುನಾಡು ಸರ್ಕಾರ ಇದಕ್ಕೆ ತೀವ್ರವಾಗಿ ವಿರೋದಿಸುತ್ತಿದೆ. 1970ರ ದಶಕದಲ್ಲಿ ಅಣೆಕಟ್ಟು ನಿರ್ಮಾಣಕ್ಕೆ ಕೇರಳ ಸರ್ಕಾರ ಮುಂದಾಗಿತ್ತಾದರೂ, ತಮಿಳುನಾಡು ವಿರೋಧ ವ್ಯಕ್ತಪಡಿಸಿದ ಕಾರಣ ಯೋಜನೆ ಸ್ಥಗಿತಗೊಳಿಸಲಾಗಿತ್ತು. ಆದರೆ ಇದೀಗ ಕೇರಳ ಸರ್ಕಾರ ಯೋಜನೆಯನ್ನು ಪುನರ್ ನಿರ್ಮಿಸಲು ಮುಂದಾಗಿರುವುದು, ಉಭಯ ರಾಜ್ಯಗಳ ನಡುವೆ ವಿವಾದಕ್ಕೆ ಎಡೆಮಾಡಿದೆ.

2. ಈ ಕೆಳಗಿನ ಯಾವ ರಾಜ್ಯಗಳನ್ನ ಗಮನಿಸಿ:

I) ಕರ್ನಾಟಕ

II) ಚತ್ತೀಸ ಘರ್

III) ಹರಿಯಾಣ

IV) ಕೇರಳ

ಮೇಲಿನ ಯಾವ ರಾಜ್ಯಗಳಲ್ಲಿ ನವೆಂಬರ್ 1 ರಂದು ರಾಜ್ಯ ಸಂಸ್ಥಾಪನ ದಿನವನ್ನು ಆಚರಿಸಲಾಗುತ್ತದೆ?

ಅ) I & II

ಆ) II, III & IV

ಇ) I, II & III

ಈ) I, II, III & IV

I, II, III & IV

www.karunaduexams.com

ಕರ್ನಾಟಕ, ಕೇರಳ, ಹರಿಯಾಣ, ಚತ್ತೀಸಘರ್ ಮತ್ತು ಮಧ್ಯ ಪ್ರದೇಶದಲ್ಲಿ ನವೆಂಬರ್ 1 ರಂದು ರಾಜ್ಯ ಸಂಸ್ಥಾಪನ ದಿನವನ್ನಾಗಿ ಆಚರಿಸಲಾಗುತ್ತದೆ. ಕರ್ನಾಟಕದಲ್ಲಿ ನವೆಂಬರ್ 1 ರಂದು ಕನ್ನಡ ರಾಜ್ಯೋತ್ಸವವನ್ನಾಗಿ ಆಚರಿಸಲಾಗುವುದು. ಕೇರಳದಲ್ಲಿ ನವೆಂಬರ್ 1 ರಂದು ಕೇರಳ ಪಿರವಿ ದಿನವೆಂದು ಆಚರಿಸಲಾಗುವುದು. ಚತ್ತೀಸಘರ್ ರಾಜ್ಯವನ್ನು ನವೆಂಬರ್ 1, 2000 ರಲ್ಲಿ ಮಧ್ಯ ಪ್ರದೇಶ ರಾಜ್ಯದಿಂದ ಬೇರ್ಪಡಿಸಿ ಸ್ಥಾಪಿಸಲಾಗಿದೆ. ಹರಿಯಾಣ ರಾಜ್ಯ ನವೆಂಬರ್ 1, 1966 ರಲ್ಲಿ ಅಸ್ಥಿತ್ವಕ್ಕೆ ಬಂದಿದೆ. ಪೂರ್ವ ಪಂಜಾಬ್ ನಿಂದ ವಿಭಜಿಸಿ ಹರಿಯಾಣ ರಾಜ್ಯವನ್ನು ಸ್ಥಾಪಿಸಲಾಗಿದೆ. ಮಧ್ಯ ಪ್ರದೇಶ ಭಾರತದ ಆರನೇ ಅತಿ ದೊಡ್ಡ ರಾಜ್ಯವಾಗಿದ್ದು, ನವೆಂಬರ್ 1, 1956 ರಲ್ಲಿ ಸ್ಥಾಪಿಸಲಾಗಿದೆ.

3. 2016ನೇ ಸಾಲಿನ ಐಎಫ್ಎಫ್ಐ ಶತಮಾನೋತ್ಸವ ಪ್ರಶಸ್ತಿಗೆ ಯಾರನ್ನುಆಯ್ಕೆಮಾಡಲಾಗಿದೆ?

ಅ) ಅಮಿತಾಬ್ ಬಚ್ಚನ್

ಆ) ಎಸ್.ಪಿ. ಬಾಲಸುಬ್ರಮಣ್ಯಂ

ಇ) ಆರ್. ಎಸ್. ರಾಜಮೌಳಿ

ಈ) ರೇಖಾ

ಎಸ್.ಪಿ. ಬಾಲಸುಬ್ರಮಣ್ಯಂ

ಖ್ಯಾತ ಗಾಯಕ ಎಸ್.ಪಿ. ಬಾಲಸುಬ್ರಹ್ಮಣ್ಯಂಅವರಿಗೆ ಕೇಂದ್ರ ಸರ್ಕಾರ 2016ನೇ ಸಾಲಿನ ಐಎಫ್ಎಫ್ಐ ಶತಮಾನೋತ್ಸವ ಪ್ರಶಸ್ತಿ ಘೋಷಿಸಿದೆ. ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವಎಂ. ವೆಂಕಯ್ಯನಾಯ್ಡು ಅವರು ಪತ್ರಿಕಾಗೋಷ್ಠಿಯಲ್ಲಿಈ ಘೋಷಣೆ ಮಾಡಿದ್ದಾರೆ. ಗೋವಾದಲ್ಲಿ ನಡೆಯಲಿರುವ ಭಾರತೀಯ ಅಂತರರಾಷ್ಟ್ರೀಯ 47ನೇ ಚಲನಚಿತ್ರೋತ್ಸವ (ಐಎಫ್ಎಫ್ಐ) ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

4. ಇದೇ ಮೊದಲ ಬಾರಿಗೆ ನಡೆಯುತ್ತಿರುವ ಮಹಿಳೆಯರ ವೃತ್ತಿಪರ ಗಾಲ್ಫ್ ಟೂರ್ನಿಯನ್ನು ಯಾವ ನಗರದಲ್ಲಿ ಆಯೋಜಿಸಲಾಗುತ್ತಿದೆ?

ಅ) ಅಬು ದಾಬಿ

ಆ) ಬರ್ಲಿನ್

www.karunaduexams.com

ಇ) ಮಾಸ್ಕೋ

ಈ) ಬೆಂಗಳೂರು

ಅಬು ದಾಬಿ

ಮೊಟ್ಟ ಮೊದಲ ಬಾರಿಗೆ ಮಹಿಳೆಯರ ವೃತ್ತಿಪರ ಗಾಲ್ಫ್ ಟೂರ್ನಿಯಲ್ಲಿ ಆಡಲಿರುವ ಅದಿತಿ ಅಶೋಕ್ ಇದೇ ವಾರ ಆರಂಭವಾಗುವ ಫಾತಿಮಾ ಮುಬಾರಕ್ ಲೇಡಿಸ್ ಓಪನ್‌ನಲ್ಲಿ ತಮ್ಮ ಸವಾಲು ಒಡ್ಡಲಿದ್ದಾರೆ. 'ಪುರುಷ ಗಾಲ್ಫ್ ಆಟಗಾರರಿಗೇ ಹೆಚ್ಚು ಟೂರ್ನಿಗಳು ಆಯೋಜನೆ ಗೊಳ್ಳುತ್ತಿವೆ. ಆದರೆ ಇದೇ ಮೊದಲ ಬಾರಿಗೆ ಅಬು ದಬಿಯಲ್ಲಿ ಮಹಿಳೆಯರ ವೃತ್ತಿಪರ ಗಾಲ್ಫ್ ಟೂರ್ನಿ ನಡೆಯುತ್ತಿದೆ. ಈ ಟೂರ್ನಿಯಲ್ಲಿ ಪಾಲ್ಗೊಂಡು ಉತ್ತಮವಾಗಿ ಆಡುವುದು ನನ್ನ ಮುಂದಿರುವ ಗುರ. ಅಲ್ಲಿ ಉತ್ತಮ ಫಲಿತಾಂಶ ನೀಡಲಿದ್ದೇನೆ' ಎಂದು ಅದಿತಿ ಹೇಳಿದ್ದಾರೆ.

5. "ಟೈಮ್ಸ್ ನೌ"ಇಂಗ್ಲಿಷ್ ಸುದ್ದಿ ವಾಹಿನಿಗೆ ರಾಜೀನಾಮೆ ನೀಡಿದ ಜನಪ್ರಿಯ ನಿರೂಪಕ ಮತ್ತು ಪತ್ರಕರ್ತ ____?

ಅ) ಮಹೇಶ್ ಜೈನ್

ಆ) ಕಾರ್ತಿಕ್ ಸುದರ್ಶನ್

ಇ) ಅರ್ನಬ್ ಗೋಸ್ವಾಮಿ

ಈ) ಮಧುಕರ್ ಭಂಡಾರಿ

ಅರ್ನಬ್ ಗೋಸ್ವಾಮಿ

ಟೈಮ್ಸ್ ನೌ' ಇಂಗ್ಲಿಷ್ ಸುದ್ದಿ ವಾಹಿನಿಯ ಜನಪ್ರಿಯ ನಿರೂಪಕ ಮತ್ತು ಪತ್ರಕರ್ತ ಆರ್ನಬ್ ಗೋಸ್ವಾಮಿ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಅರ್ನಬ್ ಗೋಸ್ವಾಮಿ ಟೈಮ್ಸ್ ನೌ ಮತ್ತು ಇಟಿ ನೌ ವಾಹಿನಿಗಳ ಅಧ್ಯಕ್ಷ ಮತ್ತು ಪ್ರಧಾನ ಸಂಪಾದಕ ಹುದ್ದೆಯಲ್ಲಿದ್ದರು. 2006ರಲ್ಲಿ ಆರಂಭಗೊಂಡ ಟೈಮ್ಸ್ ನೌ ವಾಹಿನಿಯನ್ನು ಒಂದು ವರ್ಷದೊಳಗೆ ನಂಬರ್ ಒನ್ ಸ್ಥಾನಕ್ಕೆ ತಲುಪಿಸಿದ ಖ್ಯಾತಿ ಆರ್ನಬ್ ಅವರದ್ದಾಗಿದೆ. ಪ್ರತಿರಾತ್ರಿ ಒಂಬತ್ತು ಗಂಟೆಗೆ ಪ್ರಸಾರವಾಗುವ 'ನ್ಯೂಸ್ ಅವರ್' ಕಾರ್ಯಕ್ರಮದ ನಿರೂಪಣಾ ಶೈಲಿ 'ಆರ್ನಬ್ ಶೈಲಿ'ಯೆಂದೇ ಹೆಸರಾಗಿದೆ. ಅವರ ಸಂದರ್ಶನ ಆಧಾರಿತ ಕಾರ್ಯಕ್ರಮ 'ಫ್ರಾಂಕ್ಲಿ ಸ್ಪೀಕಿಂಗ್ ವಿದ್ ಆರ್ನಬ್' ಕೂಡಾ ಭಾರತೀಯ ಇಂಗ್ಲಿಷ್ ವಾಹಿನಿಗಳಲ್ಲಿ ಪ್ರಸಾರವಾಗುವ ಜನಪ್ರಿಯ ಕಾರ್ಯಕ್ರಮಗಳಲ್ಲಿ ಒಂದು.

www.karunaduexams.com

6. ಇತ್ತೀಚೆಗೆ ಯಾವ ರಾಜ್ಯದಲ್ಲಿ ಪ್ರಧಾನಿ ಮೋದಿ ರವರು “ಸೌರ ಸುಲಭ್ ಯೋಜನೆ”ಗೆ ಚಾಲನೆ ನೀಡಿದರು?

ಅ) ಮಧ್ಯ ಪ್ರದೇಶ

ಆ) ಚತ್ತೀಸಘರ್

ಇ) ಜಾರ್ಖಂಡ್

ಈ) ಹರಿಯಾಣ

ಚತ್ತೀಸಘರ್

ರೈತರಿಗೆ ಸಬ್ಸಿಡಿ ದರದಲ್ಲಿ ಸೌರ ವಿದ್ಯುತ್ ಚಾಲಿತ ಕೃಷಿ ಪಂಪ್ ವಿತರಿಸುವ ಚತ್ತೀಸಘರ್ ನ “ಸೌರ ಸುಲಭ್ ಯೋಜನೆಗೆ” ಚಾಲನೆ ನೀಡಿದರು. ಈ ಯೋಜನೆಯನ್ನು ಜಾರಿಗೆ ತಂದ ಮೊದಲ ರಾಜ್ಯ ಚತ್ತೀಸಘರ್. ಯೋಜನೆಯಡಿ 3 ಹೆಚ್.ಪಿ ಮತ್ತು 5 ಹೆಚ್.ಪಿ ಸಾಮರ್ಥ್ಯದ ಸೌರ ವಿದ್ಯುತ್ ಚಾಲಿಯ ಪಂಪುಗಳನ್ನು ರೈತರಿಗೆ ಸಬ್ಸಿಡಿ ದರದಲ್ಲಿ ವಿತರಿಸಲಾಗುವುದು.

7. ಫುಟ್ಬಾಲ್ ವೃತ್ತಿ ಜೀವನಕ್ಕೆ ವಿದಾಯ ಹೇಳಿದ “ಮಿರೋಸ್ಲವ್ ಕ್ಲೋಸ್” ರವರು ಯಾವ ದೇಶದವರು?

ಅ) ಸ್ಪೇನ್

ಆ) ಫ್ರಾನ್ಸ್

ಇ) ಜರ್ಮನಿ

ಈ) ಜಪಾನ್

ಜರ್ಮನಿ

ಫುಟ್ಬಾಲ್ ಜಗತ್ತಿನ ಸಾರ್ವಕಾಲಿಕ ಶ್ರೇಷ್ಠ ಸ್ಕೋರರ್ , ಜರ್ಮನಿಯ ವಿಶ್ವಕಪ್ ಹೀರೋ ಮಿರೊಸ್ಲಾವ್ ಕ್ಲೋಸ್ ಅವರು ತಮ್ಮ ವೃತ್ತಿ ಬದುಕಿಗೆ ವಿದಾಯ ಹೇಳಿದ್ದಾರೆ. ವಿಶ್ವಕಪ್ನಲ್ಲಿ ಒಟ್ಟು 16 ಗೋಲುಗಳನ್ನು ಬಾರಿಸಿ ಟಾಪ್ ಸ್ಕೋರರ್ ಎನಿಸಿಕೊಂಡಿರುವ ಕ್ಲೋಸ್ ಅವರು ಜರ್ಮನಿಯ ಪರ 137 ಅಂತಾರಾಷ್ಟ್ರೀಯ ಪಂದ್ಯಗಳನ್ನು ಆಡಿ ಒಟ್ಟು 71 ಗೋಲುಗಳನ್ನು ಬಾರಿಸಿದ್ದಾರೆ. ಇದು ಜರ್ಮನಿ ದೇಶದ ಪರ ಗರಿಷ್ಠ ಸ್ಕೋರ್ ದಾಖಲೆಯಾಗಿದೆ.38ರ ಹರೆಯದ ಕ್ಲೋಸ್(Klose) ಅವರು 2014ರಲ್ಲಿ ಜರ್ಮನಿ ತಂಡ ವಿಶ್ವ ಚಾಂಪಿಯನ್ ಆಗಿ ಹೊರಹೊಮ್ಮಿದ ಸಂದರ್ಭದಲ್ಲಿ ಅಂತಾರಾಷ್ಟ್ರೀಯ ಫುಟ್ಬಾಲ್ನಿಂದ ನಿವೃತ್ತಿ ಘೋಷಿಸಿದ್ದರು. ಆದರೆ, ಕ್ಲಬ್ ಗಳಲ್ಲಿ ಆಡುತ್ತಿದ್ದರು.

www.karunaduexams.com

8. “2016 ಮಿಸ್ ಇಂಟರ್ನ್ಯಾಶನಲ್” ಕಿರೀಟ ಮುಡಿಗೇರಿಸಿಕೊಂಡ “ಕೈಲೀ ವೆರ್ಝೋರ್ಸ (Kylie Verzosa)” ಯಾವ ದೇಶದವರು?

ಅ) ಫಿಲಿಫೈನ್ಸ್

ಆ) ಜಪಾನ್

ಇ) ವೆನೆಜುವೆಲ

ಈ) ಆಸ್ಟ್ರೇಲಿಯಾ

ಫಿಲಿಫೈನ್ಸ್

ಫಿಲಿಫೈನ್ಸ್ ನ ಕೈಲೀ ವೆರ್ಝೋರ್ಸ ರವರು 2016 ಮಿಸ್ ಇಂಟರ್ನ್ಯಾಶನಲ್ ಕಿರೀಟವನ್ನು ಗೆದ್ದುಕೊಂಡಿದ್ದಾರೆ. ಜಪಾನ್ ನ ಟೊಕಿಯೋದಲ್ಲಿ ಈ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ವೆರ್ಝೋರ್ಸ ಅವರು ಮಿಸ್ ಇಂಟರ್ನ್ಯಾಶನಲ್ ಕಿರೀಟ ಗೆದ್ದ ಫಿಲಿಫೈನ್ಸ್ ನ ಆರನೇಯವರು.

9. “ವಿಶ್ವ ನಗರಗಳ ದಿನ (World Cities Day)” ಈ ದಿನದಂದು ಆಚರಿಸಲಾಗುತ್ತದೆ ______?

ಅ) ಅಕ್ಟೋಬರ್ 30

ಆ) ಅಕ್ಟೋಬರ್ 31

ಇ) ನವೆಂಬರ್ 1

ಈ) ನವೆಂಬರ್ 2

ಅಕ್ಟೋಬರ್ 31

ವಿಶ್ವ ನಗರಗಳ ದಿನವನ್ನು ಪ್ರತಿ ವರ್ಷ ಅಕ್ಟೋಬರ್ 31 ರಂದು ಆಚರಿಸಲಾಗುತ್ತದೆ. ಹೆಚ್ಚುತ್ತಿರುವ ನಗರೀಕರಣದಿಂದಾಗಿ ಯೋಜಿತ ಮತ್ತು ಸುಸ್ಥಿರ ನಗರ ನಿರ್ಮಾಣಕ್ಕೆ ಕರೆ ನೀಡುವುದು ಈ ದಿನದ ಮಹತ್ವ. Inclusive Cities Shared Development ಇದು ಈ ವರ್ಷದ ಧ್ಯೇಯವಾಕ್ಯ.

10. ಚೀನಾದಲ್ಲಿ ನಡೆದ ರೋಲರ್ ಸ್ಕೇಟಿಂಗ್ ಏಷ್ಯನ್ ಚಾಂಪಿಯನ್ ಷಿಪ್ ನಲ್ಲಿ ಭಾರತ ಯಾವ ಪದಕವನ್ನು ಗೆದ್ದುಕೊಂಡಿತು?

ಅ) ಚಿನ್ನ

ಆ) ಬೆಳ್ಳಿ

ಇ) ಕಂಚು

ಈ) ಅ & ಇ

ಕಂಚು

ಚೀನಾದಲ್ಲಿ ನಡೆದ ರೋಲರ್ ಸ್ಕೇಟಿಂಗ್ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಕಂಚಿನ ಪದಕ ಜಯಿಸಿದೆ. ಭಾರತದ ವಿಕ್ರಮ್ ಇಂಗಳೆ, ಟಿ. ನಿಖಿಲೇಶ್ ಮತ್ತು ಬೆಂಗಳೂರಿನ ಧನುಷ್ ಬಾಬು ಅವರನ್ನು ಒಳಗೊಂಡ ಪುರುಷರ ತಂಡ 3000 ಮೀಟರ್ಸ್ ರಿಲೇ ವಿಭಾಗದಲ್ಲಿ

www.karunaduexams.com

ಗಮನಾರ್ಹ ಪ್ರದರ್ಶನ ನೀಡಿ ಕಂಚು ತನ್ನದಾಗಿಸಿಕೊಂಡಿತು. ಈ ಚಾಂಪಿಯನ್‌ಷಿಪ್‌ನ ಚೀನಾದ ಲಿಷುಯಿ ಎಂಬಲ್ಲಿ ನಡೆಯುತ್ತಿದೆ. ಈ ವಿಭಾಗದಲ್ಲಿ ದಕ್ಷಿಣ ಕೊರಿಯಾ ಚಿನ್ನ ಜಯಿಸಿದರೆ, ಆತಿಥೇಯ ಚೀನಾ ಬೆಳ್ಳಿ ಪದಕಕ್ಕೆ ಮುತ್ತಿಕ್ಕಿತು. ರೋಲರ್ ಸ್ಕೇಟಿಂಗ್ ವಿಭಾಗದಲ್ಲಿ ಭಾರತ ಪದಕ ಜಯಿಸಿದ್ದು ಇದೇ ಮೊದಲು. 2010ರ ಕೂಟದಲ್ಲಿ ಆರ್ಟಿಸ್ಟಿಕ್ ರೋಲರ್ ಸ್ಕೇಟಿಂಗ್‌ನಲ್ಲಿ ಅನೂಪ್ ಕುಮಾರ್ ಕಂಚು ಪಡೆದಿದ್ದರು.

11. ಇತ್ತೀಚೆಗೆ ಅಂಟಾರ್ಟಿಕದ ಯಾವ ಸಮುದ್ರವನ್ನು ವಿಶ್ವದ ಅತಿ ದೊಡ್ಡ ಕಡಲ ಸಂರಕ್ಷಿತ ಪ್ರದೇಶವೆಂದು ಘೋಷಿಸಲಾಗಿದೆ?
ಅ) ಡೇವಿಸ್ ಸಮುದ್ರ
ಆ) ರಾಸ್ ಸಮುದ್ರ
ಇ) ಸ್ಕಾಟಿಯಾ ಸಮುದ್ರ
ಈ) ಮಾವ್ಸನ್ ಸಮುದ್ರ
ರಾಸ್ ಸಮುದ್ರ
ಅಂಟಾರ್ಟಿಕದ ರಾಸ್ ಸಮುದ್ರವನ್ನು ವಿಶ್ವದ ಅತಿ ದೊಡ್ಡ ಕಡಲ ಸಂರಕ್ಷಿತ ಪ್ರದೇಶ (Marine Protect Area)ವೆಂದು ಘೋಷಿಸಲಾಗಿದೆ. ಆಸ್ಟ್ರೇಲಿಯಾದ ಹೊಬರ್ಟ್ ನಲ್ಲಿ ನಡೆದ ಅಂತಾರಾಷ್ಟ್ರೀಯ ಅಂಟಾರ್ಟಿಕ ಸಾಗರ ಜೀವ ಸಂಪನ್ಮೂಲ (CCAMLR) ಸಂರಕ್ಷಣೆ ಆಯೋಗದ ಸಭೆಯಲ್ಲಿ 24 ರಾಷ್ಟ್ರಗಳು ಮತ್ತು ಐರೋಪ್ಯ ಒಕ್ಕೂಟದ ನಡುವಿನ ಐತಿಹಾಸಿಕ ಒಪ್ಪಂದ ಮೂಡುವ ಮೂಲಕ ರಾಸ್ ಸಮುದ್ರವನ್ನು ವಿಶ್ವದ ಅತಿ ದೊಡ್ಡ ಕಡಲ ಸಂರಕ್ಷಿತ ಪ್ರದೇಶವೆಂದು ಘೋಷಿಸಲಾಯಿತು.

12. ಡಿಸೆಂಬರ್ ನಲ್ಲಿ ನಡೆಯಲಿರುವ "ದುಬೈ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ"ದಲ್ಲಿ ಯಾರಿಗೆ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಲಾಗುವುದು?
ಅ) ವಿದ್ಯಾ ಬಾಲನ್
ಆ) ರೇಖಾ
ಇ) ಅಕ್ಷಯ್ ಕುಮಾರ್
ಈ) ಐಶ್ವರ್ಯ ರೈ
ರೇಖಾ
ಬಾಲಿವುಡ್ ನಟಿ ರೇಖಾ ಅವರಿಗೆ ದುಬೈ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ"ದಲ್ಲಿ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು. ದುಬೈ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ" ಡಿಸೆಂಬರ್ 7 ರಿಂದ 14 ರವರೆಗೆ ನಡೆಯಲಿದೆ. ನಟಿ ರೇಖಾ ಅವರು ತಮ್ಮ ನಾಲ್ಕು ದಶಕಗಳ ಸಿನಿಮಾ ಬದುಕಿನಲ್ಲಿ 180 ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಕನ್ನಡದ

www.karunaduexams.com

ಮೇರುನಟ ಡಾ.ರಾಜ್ ಕುಮಾರ್ ಅಭಿನಯದ 1969 ರಲ್ಲಿ ತೆರೆಕಂಡ ಆಪರೇಷನ್ ಸಿಐಡಿ 999 ರೇಖಾ ಅವರ ಮೊದಲ ಚಿತ್ರ.

13. ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಸ್ಮಾರ್ಟ್ ಗವರ್ನಮೆಂಟ್ ಕೇಂದ್ರ ಕಚೇರಿ ಎಲ್ಲದೆ?

ಅ) ಬೆಂಗಳೂರು

ಆ) ಹೈದ್ರಾಬಾದ್

ಇ) ಚೆನ್ನೈ

ಈ) ನವದೆಹಲಿ

ಹೈದ್ರಾಬಾದ್

ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಸ್ಮಾರ್ಟ್ ಗವರ್ನಮೆಂಟ್ ಕೇಂದ್ರ ಕಚೇರಿ ಹೈದ್ರಾಬಾದ್ ನಲ್ಲಿದೆ. ಭಾರತ ಸರ್ಕಾರ, ಆಂಧ್ರಪ್ರದೇಶ ಸರ್ಕಾರ ಮತ್ತು ನಾಸ್ಕಾಂ ಈ ಸಂಸ್ಥೆಯನ್ನು 2002 ರಲ್ಲಿ ಹುಟ್ಟುಹಾಕಿದೆ. ಇ-ಗವರ್ನೆನ್ಸ್ಗೆ ಸಂಬಂಧಿಸಿದ ಹೊಸ ಶೋಧನೆ ಮತ್ತು ಯೋಜನೆ ಜಾರಿಗೆ ಶ್ರಮಿಸುತ್ತಿರುವ ಸಂಸ್ಥೆ ಇದಾಗಿದೆ.

14. ದಕ್ಷಿಣ ಕೊರಿಯಾದ ನೂತನ ಪ್ರಧಾನಿಯಾಗಿ ಯಾರನ್ನು ನೇಮಕ ಮಾಡಲಾಗಿದೆ?

ಅ) ಕಿಮ್ ಬ್ಯೊಂಗ್ ಜೂನ್

ಆ) ಹ್ವಾಂಗ್ ಕ್ಯೊ ಅಹ್ನ

ಇ) ಪಾರ್ಕ್ ಗ್ವೀನ್ ಹೈ

ಈ) ಕಿಮ್ ಜಂಗ್ ಹ್ಯೂಂಗ್

ಕಿಮ್ ಬ್ಯೊಂಗ್ ಜೂನ್

ದಕ್ಷಿಣ ಕೊರಿಯಾದ ಪ್ರಧಾನಿ ಮತ್ತು ಹಣಕಾಸು ಸಚಿವರನ್ನು ಬದಲಾಯಿಸಿ ಅಧ್ಯಕ್ಷೆ ಪಾರ್ಕ್ ಗ್ವೀನ್ ಹೈ ಆದೇಶ ಹೊರಡಿಸಿದ್ದಾರೆ. ಹಾಲಿ ಪ್ರಧಾನಿ ಹ್ವಾಂಗ್ ಕ್ಯೊ ಅಹ್ನ ಅವರನ್ನು ಬದಲಾಯಿಸಿ ಕಿಮ್ ಬ್ಯೊಂಗ್ ಜೂನ್ ಅವರನ್ನು ಹೊಸ ಪ್ರಧಾನಿಯನ್ನಾಗಿ ನೇಮಿಸಲಾಗಿದೆ. ದಕ್ಷಿಣ ಕೊರಿಯಾದಲ್ಲಿ ಪ್ರಧಾನಿ ಹುದ್ದೆ ಕೇವಲ ಸಾಂಕೇತಿಕವಾಗಿದ್ದು, ಎಲ್ಲ ಅಧಿಕಾರವನ್ನು ಅಧ್ಯಕ್ಷರೇ ಹೊಂದಿದ್ದಾರೆ. ಪ್ರಧಾನಿ ನೇಮಕಾತಿಗೆ ಸಂಸತ್ ಅನುಮೋದನೆ ಪಡೆಯುವುದು ಅಗತ್ಯವಾಗಿದೆ.

15. ಇತ್ತೀಚೆಗೆ ನಗರದ ಎಂ.ಎನ್. ರಾಯ್ ರವರು ಯಾವ ನಗರದ ಮೊದಲ ಮುಖ್ಯ ವಾಸ್ತುಶಿಲ್ಪಿ?

ಅ) ಲಕ್ನೋ

ಆ) ಚಂಡೀಘರ್

ಇ) ಮೈಸೂರು

ಈ) ಕೊಲ್ಕತ್ತಾ



www.karunaduexams.com

ಚಂಡೀಘರ್

ಚಂಡೀಘರ್ ನಗರದ ಮೊದಲ ಪ್ರಮುಖ ವಾಸ್ತುಶಿಲ್ಪಿ ಎಂ,ಎನ್.ರಾಯ್ ನಿಧನರಾದರು. ರಾಯ್ ರವರು ಇತ್ತೀಚೆಗೆ "ಮೇಕಿಂಗ್ ಆಫ್ ಚಂಡೀಘರ್: ಲಿ ಕೊರ್ಬಸ್ಸೈಯರ್ ಅಂಡ್ ಆಫ್ಟರ್ (Making of Chandigarh: Le Corbusier and After)" ಪುಸ್ತಕವನ್ನು ಬರೆದಿದ್ದರು. ಖ್ಯಾತ ಫ್ರೆಂಚ್ ಶಿಲ್ಪಿ ಲಿ ಕೊರ್ಬಸ್ಸೈಯರ್ ಜೊತೆ ಕೆಲಸ ಮಾಡಿದ ಅನುಭವವನ್ನು ಹೊಂದಿದ್ದರು. ರಾಯ್ ಅವರಿಗೆ ಅನೇಕ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದರು.

16. ಇತ್ತೀಚೆಗೆ ಯಾವ ರಾಜ್ಯ "ಪರಿಪ್ಪಿದ ಮಿಷನ್ (Paripidda Mission)" ಹೆಸರಿನ ವಸತಿ ಯೋಜನೆಯನ್ನು ಜಾರಿಗೊಳಿಸಿದೆ?

ಅ) ಕೇರಳ

ಆ) ಮಹಾರಾಷ್ಟ್ರ

ಇ) ಗೋವಾ

ಈ) ತೆಲಂಗಣ

ಕೇರಳ

ಕೇರಳ ಸರ್ಕಾರ ರಾಜ್ಯದ ಪ್ರತಿಯೊಬ್ಬ ವಸತಿ ರಹಿತರಿಗೆ ವಸತಿ ಸೌಕರ್ಯ ಕಲ್ಪಿಸಲು "ಪರಿಪ್ಪಿದ ಮಿಷನ್" ಯೋಜನೆಯನ್ನು ಜಾರಿಗೊಳಿಸಿದೆ. ಕೇರಳ ಸಂಸ್ಥಾಪನ ದಿನವಾದ ನವೆಂಬರ್ 1 ರಂದು ಈ ಯೋಜನೆಗೆ ಚಾಲನೆ ನೀಡಲಾಗಿದೆ.

17. "2016 ಮಿಸ್ ಈರ್ಥ್" ಕಿರೀಟವನ್ನು ಗೆದ್ದ "ಕ್ಯಾಥರೀನ್ ಎಸ್ಪಿನ್" ಯಾವ ದೇಶದವರು?

ಅ) ಕೊಲಂಬಿಯಾ

ಆ) ಈಕ್ವಾಡರ್

ಇ) ವೆನೆಜುವೆಲಾ

ಈ) ಫಿಲಿಫೈನ್ಸ್

ಈಕ್ವಾಡರ್

ಈಕ್ವಾಡರ್ ನ ಕ್ಯಾಥರೀನ್ ಎಸ್ಪಿನ್ ಅವರು 2016 ಮಿಸ್ ಈರ್ಥ್ ಕಿರೀಟವನ್ನು ಮುಡಿಗೇರಿಸಿಕೊಂಡಿದ್ದಾರೆ. 2016 ಮಿಸ್ ಈರ್ಥ್ ಸ್ಪರ್ಧೆಯನ್ನು ಫಿಲಿಫೈನ್ಸ್ ನ ಮಾಲ್ ಆಫ್ ಏಷ್ಯಾ ಅರೆನಾದಲ್ಲಿ ಆಯೋಜಿಸಲಾಗಿತ್ತು. ಜಗತ್ತಿನ ವಿವಿಧ ದೇಶಗಳ 83 ಸ್ಪರ್ಧಿಗಳ ಪೈಕಿ ಎಸ್ಪಿನ್ ಕಿರೀಟವನ್ನು ತಮ್ಮದಾಗಿಸಿಕೊಂಡರು.

www.karunaduexams.com

18. ರಾಮ್ ನಾಥ್ ಗೋಯೆಂಕಾ ಪ್ರಶಸ್ತಿಯನ್ನು ಯಾವ ಕ್ಷೇತ್ರದ ಸಾಧಕರಿಗೆ ನೀಡಲಾಗುತ್ತದೆ?

ಅ) ಪತ್ರಿಕೋದ್ಯಮ

ಆ) ಆಟೋಮೊಬೈಲ್ ಉದ್ದಿಮೆ

ಇ) ಬ್ಯಾಂಕಿಂಗ್ ಮತ್ತು ಹಣಕಾಸು

ಈ) ಸಿನಿಮಾ

ಪತ್ರಿಕೋದ್ಯಮ

ಗೋಯೆಂಕಾ ಪ್ರಶಸ್ತಿಯನ್ನು ಪತ್ರಿಕೋದ್ಯಮ ಕ್ಷೇತ್ರದಲ್ಲಿ ಸಾದನೆ ಮಾಡಿದವರಿಗೆ 28 ವಿಭಾಗಗಳಲ್ಲಿ ಕೊಡಲಾಗುತ್ತದೆ. ಪತ್ರಿಕೋದ್ಯಮ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆ ಮಾಡಿದ್ದ ರಾಮ್ ನಾಥ್ ಗೊಯೆಂಕಾ ಅವರ ಸ್ಮರಣಾರ್ಥ 2005 ರಿಂದ ಪತ್ರಿಕೋದ್ಯಮ ಈ ಪ್ರಶಸ್ತಿ ನೀಡಲಾಗುತ್ತಿದೆ.

19. ಇತ್ತೀಚೆಗೆ ನಿಧನರಾದ ಫಿಫಾ ವಿಶ್ವಕಪ್ ಟ್ರೋಫಿಯ ವಿನ್ಯಾಸಗಾರ "ಸಿಲ್ವಿಯೊ ಗರ್ಝ್ನಿಗ" ಯಾವ ದೇಶದವರು?

ಅ) ಫ್ರಾನ್ಸ್

ಆ) ಜರ್ಮನಿ

ಇ) ಇಟಲಿ

ಈ) ಸ್ಪೇನ್

ಇಟಲಿ

ಇಟಲಿಯ ಪ್ರಖ್ಯಾತ ಶಿಲ್ಪಿ "ಸಿಲ್ವಿಯೊ ಗರ್ಝ್ನಿಗ" ಇಟಲಿಯ ಮಿಲನ್ ನಗರದಲ್ಲಿ ನಿಧನರಾದರು. ಸಿಲ್ವಿಯೊ ಅವರು 1971 ರಲ್ಲಿ ಫಿಫಾ ವಿಶ್ವಕಪ್ ಟ್ರೋಫಿಯನ್ನು ವಿನ್ಯಾಸಗೊಳಿಸಿ ತಯಾರಿಸಿದ್ದರು. ಸಿಲ್ವಿಯೊ ಅವರು "ಮಿಸ್ಟರ್ ಕಪ್" ಎಂದೇ ಖ್ಯಾತರಾಗಿದ್ದರು. ಫಿಫಾ ವಿಶ್ವಕಪ್ ಟ್ರೋಫಿ 18 ಕ್ಯಾರೆಟ್ ಗಟ್ಟಿ ಚಿನ್ನದಿಂದ ಮಾಡಲಾಗಿದ್ದು, 6 ಕೆ.ಜಿ ತೂಕವಿದೆ.

20. ಇತ್ತೀಚೆಗೆ ಬಿಡುಗಡೆಗೊಂಡ ಫೋರ್ಬ್ಸ್ ಫ್ಯಾಬ್ 40 ಪಟ್ಟಿಯಲ್ಲಿ ಭಾರತದ ಅತ್ಯಂತ ಮೌಲ್ಯಯುತ ಕ್ರೀಡಾಪಟು ಯಾರು?

ಅ) ವಿರಾಟ್ ಕೊಹ್ಲಿ

ಆ) ಮಹೇಂದ್ರ ಸಿಂಗ್ ಧೋನಿ

ಇ) ಪಿ ವಿ ಸಿಂಧು

ಈ) ದೀಪಾ ಕರ್ಮಕರ್

ಮಹೇಂದ್ರ ಸಿಂಗ್ ಧೋನಿ

www.karunaduexams.com

ಭಾರತ ಏಕದಿನ ಕ್ರಿಕೆಟ್ ತಂಡದ ನಾಯಕ ಮಹೇಂದ್ರ ಸಿಂಗ್ ಧೋನಿ ಅವರು ಫೋರ್ಬ್ಸ್ ಫ್ಯಾಬ್ 40 ಪಟ್ಟಿಯಲ್ಲಿ ಭಾರತ ಅತ್ಯಂತ ಮೌಲ್ಯಯುತ ಕ್ರೀಡಾಪಟು ಆಗಿ ಹೊರಹೊಮ್ಮಿದ್ದಾರೆ. ಸ್ವಿಸ್ ಟೆನ್ನಿಸ್ ದಂತಕತೆ ರೋಜರ್ ಫೆಡರರ್ ಅವರು ವಿಶ್ವದ ಅತ್ಯಂತ ಮೌಲ್ಯಯುತ ಕ್ರೀಡಾಪಟು ಎನಿಸಿದ್ದಾರೆ.

21. ಯಾವ ರಾಜ್ಯ ದೇಶದಲ್ಲೆ ಮೊದಲ ಬಾರಿಗೆ ಎಲ್ಲಾ ಜಿಲ್ಲೆಗಳಲ್ಲಿ ಸೈಬರ್ ಪೊಲೀಸ್ ಠಾಣೆಯನ್ನು ಸ್ಥಾಪಸಲಿದೆ?

ಅ) ಕೇರಳ

ಆ) ಮಹಾರಾಷ್ಟ್ರ

ಇ) ಗುಜರಾತ್

ಈ) ಬಿಹಾರ್

ಮಹಾರಾಷ್ಟ್ರ

ಮಹಾರಾಷ್ಟ್ರ ಸರ್ಕಾರ ರಾಜ್ಯದ 36 ಜಿಲ್ಲೆಗಳಲ್ಲಿ ಸೈಬರ್ ಪೊಲೀಸ್ ಠಾಣೆಯನ್ನು ಸ್ಥಾಪಿಸಲಿದೆ. ಆ ಮೂಲಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸೈಬರ್ ಪೊಲೀಸ್ ಠಾಣೆಯನ್ನು ಸ್ಥಾಪಿಸದ ಮೊದಲ ರಾಜ್ಯ ಗೌರವಕ್ಕೆ ಪಾತ್ರವಾಗಲಿದೆ. ರಾಜ್ಯದಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ 42 ಸೈಬರ್ ಕ್ರೈಂ ಲ್ಯಾಬ್ ಗಳನ್ನು ಪೊಲೀಸ್ ಠಾಣೆಗಳನ್ನಾಗಿ ಪರಿವರ್ತಿಸಲಾಗುವುದು. ಮಹಾರಾಷ್ಟ್ರದಲ್ಲಿ ಸೈಬರ್ ಅಪರಾಧಗಳು ಎಗ್ಗಿಲ್ಲದೇ ಹೆಚ್ಚುತ್ತಿರುವ ಕಾರಣ ಈ ಕ್ರಮಕ್ಕೆ ಮುಂದಾಗಿದೆ.

22. ಇತ್ತೀಚೆಗೆ "ಮೈಕೆಲ್ ಅಹೌನ್ (Michael Aoun)" ಅವರು ಯಾವ ದೇಶದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ?

ಅ) ಲೆಬಾನನ್

ಆ) ಸೈಪ್ರಸ್

ಇ) ಕ್ಯೂಬಾ

ಈ) ನಮೀಬಿಯಾ

ಲೆಬಾನನ್

ಮಾಜಿ ಸೇನಾ ಕಮಾಂಡರ್ ಮೈಕಲ್ ಅಹೌನ್ ಅವರನ್ನು ಲೆಬಾನನ್ ಅಧ್ಯಕ್ಷರಾಗಿ ಲೆಬಾನನ್ ಸಂಸತ್ತು ಆಯ್ಕೆಮಾಡಿದೆ. ಅಧ್ಯಕ್ಷ ಚುನಾವಣೆಯಲ್ಲಿ ಮೈಕಲ್ ಅವರ ಪರವಾಗಿ 83 ಸದಸ್ಯರು ಮತ ಹಾಕುವ ಮೂಲಕ ಅಧ್ಯಕ್ಷರಾಗುವ ಹಾದಿಯನ್ನು ಸುಗಮಗೊಳಿಸಿದರು. ಅಧ್ಯಕ್ಷರಾಗಲು 65 ಮತಗಳು ಮಾತ್ರ ಅವಶ್ಯವಿತ್ತು.

www.karunaduexams.com

23. ಸರಕು ಮತ್ತು ಸೇವಾ ಮಂಡಳಿ ನಾಲ್ಕು ಸ್ತರಗಳಲ್ಲಿ ತೆರಿಗೆಯನ್ನು ವಿಧಿಸಲು ನಿರ್ಧರಿಸಿರುವ ಸರಿಯಾದ ಶೇಕಡಾ ದರವನ್ನು ಗುರುತಿಸಿ?

ಅ) 6, 12, 18, 24

ಆ) 5, 12, 18, 28

ಇ) 6, 12, 18, 25

ಈ) 5, 10, 18, 28

5, 12, 18, 28

5,12,18 ಮತ್ತು 28 ಶೇಕಡಾ ದರಗಳ ನಾಲ್ಕು ಸ್ತರಗಳಲ್ಲಿ ಸರಕು ಹಾಗೂ ಸೇವಾ ತೆರಿಗೆಯನ್ನು ವಿಧಿಸಲು ಜಿಎಸ್ಟಿ ಮಂಡಳಿಯು ನಿರ್ಧರಿಸಿದೆ. ಅಗತ್ಯ ವಸ್ತುಗಳಿಗೆ ಕಡಿಮೆ ತೆರಿಗೆಯಿದ್ದರೆ, ಐಷಾರಾಮಿ ವಸ್ತುಗಳಿಗೆ ಹೆಚ್ಚಿನ ತೆರಿಗೆ ವಿಧಿಸಲಾಗುವುದು,ಜೊತೆಗೆ ಹೆಚ್ಚುವರಿ ಸೆಸ್ನ ಹೊರೆಯೂ ಇರುತ್ತದೆ. ಸರಕುಗಳಿಗೆ ಶೇ.5ರ ಕನಿಷ್ಠ ತೆರಿಗೆಯನ್ನು ವಿಧಿಸಲಾಗುತ್ತದೆ. ಎರಡು ದಿನಗಳ ಜಿಎಸ್ಟಿ ಮಂಡಳಿಯ ಮೊದಲ ದಿನದ ಸಭೆಯಲ್ಲಿ ಕೈಗೊಳ್ಳಲಾದ ನಿರ್ಧಾರಗಳನ್ನು ಪ್ರಕಟಿಸಿದ ವಿತ್ತಸಚಿವ ಅರುಣ್ ಜೇಟ್ಲಿ ಅವರು, ಪ್ರಸ್ತುತ ಶೇ.30-31ರ ತೆರಿಗೆ(ಅಬಕಾರಿ ಸುಂಕ ಮತ್ತು ವ್ಯಾಟ್ ಸೇರಿ)ಯಿರುವ ಸರಕುಗಳಿಗೆ ಅತ್ಯಧಿಕ ತೆರಿಗೆ ಸ್ತರ(ಶೇ.28)ವು ಅನ್ವಯವಾಗಲಿದೆ ಎಂದರು. ಜಿಎಸ್ಟಿ 2017 ಎಪ್ರಿಲ್ 1ರಿಂದ ಜಾರಿಗೊಳ್ಳಲಿದೆ.

24. "ಮೌಂಟ್ ಕಾಂಗ್ಟೊ (Mt. Kangto)" ಯಾವ ರಾಜ್ಯದ ಅತಿ ಎತ್ತರದ ಶಿಖರ?

ಅ) ಅರುಣಾಚಲ ಪ್ರದೇಶ

ಆ) ಅಸ್ಸಾಂ

ಇ) ತ್ರಿಪುರ

ಈ) ಸಿಕ್ಕಿಂ

ಮೌಂಟ್ ಕಾಂಗ್ಟೋ ಅರುಣಾಚಲ ಪ್ರದೇಶದ ಅತಿ ಎತ್ತರದ ಶಿಖರ. ಇದರ ಎತ್ತರ 7,042 ಮೀಟರ್ ನಷ್ಟಿದೆ. ವರ್ಷ ಪೂರ್ತಿ ಹಿಮದಿಂದ ಆವೃತ್ತವಾಗಿರುವ ಈ ಶಿಖರವು ಪಾಚುಕ್ ನದಿಯ ಉಗಮ ಸ್ಥಾನವಾಗಿದೆ. ಪಾಚುಕ್ ನದಿ ಕಮೆಂಗ್ ನದಿಯ ಪ್ರಮುಖ ಉಪನದಿ.

25. 2016 ಇಂಟರ್ನ್ಯಾಷನಲ್ ಫಿಲ್ಮ್ ಫೆಸ್ಟಿವಲ್ ಆಫ್ ಇಂಡಿಯಾ (ಐಎಫ್ಎಫ್ಐ) ಜೀವಮಾನ ಸಾಧನೆ ಪ್ರಶಸ್ತಿಗೆ ಆಯ್ಕೆಯಾಗಿರುವ ಕ್ವೋನ್ ಟೇಕ್ ಇಮ್ (Kwon Taek Im) ಯಾವ ದೇಶದವರು?

ಅ) ಚೀನಾ

ಆ) ದಕ್ಷಿಣ ಕೊರಿಯಾ

ಇ) ರಷ್ಯಾ

www.karunaduexams.com

ಈ) ಇಸ್ರೇಲ್

ದಕ್ಷಿಣ ಕೊರಿಯಾ

ದಕ್ಷಿಣ ಕೊರಿಯಾ

26. 6ನೇ ಭಾರತೀಯ ಭಾಷಾ ಉತ್ಸವ (Indian Language Festival)ದ ಧ್ಯೇಯ ವಾಕ್ಯ ______?

ಅ) Languages for Communications

ಆ) Language as Public Action

ಇ) Languages for Unity

ಈ) One India Many Languages

Language as Public Action

6ನೇ ಭಾರತೀಯ ಭಾಷಾ ಉತ್ಸವ "ಸಮನ್ವಯ" ನವದೆಹಲಿಯಲ್ಲಿ ಆರಂಭಗೊಂಡಿದೆ. ಎಂಬ ಖ್ಯಾತ ಗಾಂಧಿವಾದಿ ಇಳಾ ಭಟ್ ಉದ್ಘಾಟನಾ ಭಾಷಣದೊಂದಿಗೆ ಉತ್ಸವಕ್ಕೆ ಚಾಲನೆ ನೀಡಿದ್ದಾರೆ. ಇಂಡಿಯಾ ಹೆರಿಟೇಜ್ ಸೆಂಟರ್ನಲ್ಲಿ ಮೂರು ದಿನಗಳ ಕಾಲ ನಡೆಯುವ ಈ ವಾರ್ಷಿಕ ಕಾರ್ಯಕ್ರಮವು 'ಸಂಭಾಷಣೆಯ ಮಾಧ್ಯಮ ನೆಲೆಯನ್ನು ಸೃಷ್ಟಿಸಲು ಬಯಸಿದೆ' ಹಾಗೂ ಉರ್ದು, ತೆಲುಗು, ಗುಜರಾತಿ, ಸಂತಾಲಿ ಹಾಗೂ ಖಾಸಿಗಳಂತಹ ವಿವಿಧ ಭಾಷೆಗಳ ಮೇಲೆ ಬೆಳಕು ಚೆಲ್ಲಲಿದೆ. ಸಾರ್ವಜನಿಕ ಕ್ರಮವಾಗಿ ಭಾಷೆ (Language as Public Action) ಇದು ಈ ವರ್ಷದ ಧ್ಯೇಯವಾಕ್ಯ.

27. 2016 ಬಹರೇನ್ ಅಂತರರಾಷ್ಟ್ರೀಯ ಚಾಲೆಂಜ್ ಬ್ಯಾಡ್ಮಿಂಟನ್ ಪ್ರಶಸ್ತಿಯನ್ನು ಗೆದ್ದುಕೊಂಡ ಭಾರತದ ಆಟಗಾರ ಯಾರು?

ಅ) ಪ್ರತುಲ್ ಜೋಶಿ

ಆ) ಅತುಲ್ ಕಶ್ಯಪ್

ಇ) ಸುದೀಂದ್ರ ಚಾವ್ಹಣ್

ಈ) ನರೇಂದ್ರ ಭಾಟಿಯ

ಪ್ರತುಲ್ ಜೋಶಿ

ಉದಯೋನ್ಮುಖ ಆಟಗಾರ ಪ್ರತುಲ್ ಜೋಶಿ ಅವರು ಬಹರೇನ್ ಅಂತರರಾಷ್ಟ್ರೀಯ ಚಾಲೆಂಜ್ ಬ್ಯಾಡ್ಮಿಂಟನ್ ಪ್ರಶಸ್ತಿಯನ್ನು ಗೆದ್ದು ಕೊಂಡರು. ಅಂತರರಾಷ್ಟ್ರೀಯ ಮಟ್ಟದಲ್ಲಿ ಇದು ಅವರ ಚೊಚ್ಚಲ ಪ್ರಶಸ್ತಿಯಾಗಿದೆ. ಸೆಗಯ್ಯಾದಲ್ಲಿ ನಡೆದ ಫೈನಲ್ನಲ್ಲಿ ಜೋಶಿ ಅವರು 21-17, 12-21, 21-15ರಿಂದ ಆದಿತ್ಯ ಅವರ ವಿರುದ್ಧ ಗೆದ್ದರು.

28. "ಚಿಲ್ಡ್ರನ್ ಟ್ರಾಫಿಕ್ ಎಜುಕೇಷನ್ ಪಾರ್ಕ್ (Children Traffic Education Park)" ಯಾವ ನಗರದಲ್ಲಿದೆ?

www.karunaduexams.com

ಅ) ಭೂಪಾಲ್

ಆ) ನೊಯ್ಡಾ

ಇ) ನಾಸಿಕ್

ಈ) ಪುಣೆ

ನಾಸಿಕ್

ಚಿಲ್ಡ್ರನ್ ಟ್ರಾಫಿಕ್ ಎಜುಕೇಷನ್ ಪಾರ್ಕ್ ಮಹಾರಾಷ್ಟ್ರದ ನಾಸಿಕ್ ನಲ್ಲಿದೆ. ಇತ್ತೀಚೆಗೆ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ಈ ಪಾರ್ಕ್ ನಲ್ಲಿ "ನಾಲೆಡ್ಜ್ ಹಬ್" ಗೆ ಚಾಲನೆ ನೀಡಿದರು. ಆ ಮೂಲಕ ಯುವಕರಲ್ಲಿ ಟ್ರಾಫಿಕ್ ನಿಯಮಗಳು, ನಿರ್ವಹಣೆಯ ಬಗ್ಗೆ ಅರಿವು ಮೂಡಿಸಲಾಗುವುದು.

29. "ಸ್ವಚ್ಛ ರೈಲ್ವೆ ಮಿಷನ್"ನ ರಾಯಭಾರಿಯಾಗಿ ಯಾರನ್ನು ನೇಮಕ ಮಾಡಲಾಗಿದೆ?

ಅ) ಸಾನಿಯಾ ಮಿರ್ಜಾ

ಆ) ಕಮಲ್ ಹಾಸನ್

ಇ) ಬಿಂದೇಶ್ವರ್ ಪಾಠಕ್

ಈ) ಶ್ರೀಧರನ್

ಬಿಂದೇಶ್ವರ್ ಪಾಠಕ್

ಸುಲಭ್ ಇಂಟರ್ನ್ಯಾಶನಲ್ ಸಂಸ್ಥಾಪಕ ಬಿಂದೇಶ್ವರ್ ಪಾಠಕ್ ಅವರನ್ನು ಸ್ವಚ್ಛ ರೈಲ್ವೆ ಮಿಷನ್ ರಾಯಭಾರಿಯನ್ನಾಗಿ ನೇಮಕಮಾಡಲಾಗಿದೆ. ಸುಲಭ್ ಇಂಟರ್ನ್ಯಾಶನಲ್ ನೈರ್ಮಲ್ಯತೆ ಮತ್ತು ಪರಿಸರ ಕ್ಷೇತ್ರದಲ್ಲಿ ಗಮನಾರ್ಹ ಕೆಲಸವನ್ನು ಮಾಡುತ್ತಿದೆ.

30. ಬಿತರ್ಕಾನಿಕ ರಾಷ್ಟ್ರೀಯ (Bhitarkanika National Park) ಉದ್ಯಾನವನ ಯಾವ ರಾಜ್ಯದಲ್ಲಿದೆ?

ಅ) ಕೇರಳ

ಆ) ಬಿಹಾರ

ಇ) ಒಡಿಶಾ

ಈ) ಪಶ್ಚಿಮ ಬಂಗಾಳ

ಒಡಿಶಾ

ಬಿತರ್ಕಾನಿಕ ರಾಷ್ಟ್ರೀಯ ಉದ್ಯಾನವನ ಒಡಿಶಾದಲ್ಲಿದೆ. ಈ ಉದ್ಯಾನವನ್ನು ಯುನೆಸ್ಕೋ ಪಾರಂಪರಿಕ ಪಟ್ಟಿಗೆ ಸೇರ್ಪಡೆಗೊಳಿಸಲು ರಾಜ್ಯ ಸರ್ಕಾರ ಹಲವು ವರ್ಷಗಳಿಂದ ಪ್ರಯತ್ನಿಸುತ್ತಿದೆ. ಇತ್ತೀಚೆಗೆ ಯುನೆಸ್ಕೋ ನಿಯೋಜಿಸಿದ ಐಯುಸಿಎನ್ ನ ದ್ವಿಸದಸ್ಯ ತಾಂತ್ರಿಕ ತಂಡ ಉದ್ಯಾನವನಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತ್ತು.

www.karunaduexams.com

31. ಇತ್ತೀಚೆಗೆ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಂತಾರಾಷ್ಟ್ರೀಯ ಕಾನೂನು ಆಯೋಗಕ್ಕೆ ಆಯ್ಕೆಯಾದ ಮೊದಲ ಭಾರತೀಯ ಯಾರು?

ಅ) ನೀರಜ್ ಗೌರವ್

ಆ) ಅನಿರುದ್ಧ ರಜಪೂತ್

ಇ) ಕೇಶವ್ ಜಿಂದಾಲೆ

ಈ) ರಾಮ್ ನಾರಾಯಣ್

ಅನಿರುದ್ಧ ರಜಪೂತ್

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಂತಾರಾಷ್ಟ್ರೀಯ ಕಾನೂನು ಆಯೋಗಕ್ಕೆ ನಡೆದ ತೀವ್ರ ಹಣಾಹಣಿಯ ಚುನಾವಣೆಯಲ್ಲಿ ಭಾರತೀಯ ವಕೀಲ ಅನಿರುದ್ಧ ರಜಪೂತ್(33) ಭರ್ಜರಿ ಜಯ ಗಳಿಸಿದ್ದಾರೆ. ಏಶ್ಯಾ-ಪೆಸಿಫಿಕ್ ಗುಂಪಿನಲ್ಲಿ ಅನಿರುದ್ಧ ಅವರಿಗೆ ಅತೀ ಹೆಚ್ಚು ಮತಗಳು ಲಭಿಸಿವೆ. ವಿಶ್ವಸಂಸ್ಥೆಯ ಸಾಮಾನ್ಯ ಸಭೆಗೆ ಆಯ್ಕೆಯಾದ 34 ಸದಸ್ಯರ ಪೈಕಿ ಇವರು ಅತೀ ಕಿರಿಯ ಕಾನೂನು ತಜ್ಞ ಹಾಗೂ ಮೊದಲ ಭಾರತೀಯ ಅಭ್ಯರ್ಥಿಯಾಗಿದ್ದಾರೆ. ವಿಶ್ವಸಂಸ್ಥೆಯ ಅಂತಾರಾಷ್ಟ್ರೀಯ ಕಾನೂನು ಆಯೋಗವು ಅಂತಾರಾಷ್ಟ್ರೀಯ ಕಾನೂನು ಮತ್ತು ಅದರ ಸಂಕೇತಿಕರಣದ ಪ್ರಗತಿಪರ ಬೆಳವಣಿಗೆಯ ಗುರುತರ ಜವಾಬ್ದಾರಿ ಹೊಂದಿದೆ. ನೂತನವಾಗಿ ಆಯ್ಕೆಯಾಗಿರುವ 34 ಸದಸ್ಯರು ಐರು ವರ್ಷಗಳ ಕಾಲ ಸೇವೆಯಲ್ಲಿರುವರು. ವಿಶ್ವಸಂಸ್ಥೆಯ ಅಂತಾರಾಷ್ಟ್ರೀಯ ಕಾನೂನು ಆಯೋಗದ ಕೇಂದ್ರ ಕಾರ್ಯಾಲಯವು ಜಿನೇವಾದಲ್ಲಿದೆ.

32. ಇತ್ತೀಚೆಗೆ ನಿಧನರಾದ ಪಂಡಿತ್ ಅಮರದೇವ ರವರು ಯಾವ ದೇಶದ ಪ್ರಸಿದ್ಧ ಗಾಯಕ ಮತ್ತು ಸಂಗೀತ ನಿರ್ದೇಶಕರು?

ಅ) ಶ್ರೀಲಂಕಾ

ಆ) ನೇಪಾಳ

ಇ) ಮಾರಿಷಸ್

ಈ) ಸಿಂಗಾಪುರ

ಶ್ರೀಲಂಕಾ

ಶ್ರೀಲಂಕಾದ ಖ್ಯಾತ ಗಾಯಕ ಹಾಗೂ ಸಂಗೀತ ನಿರ್ದೇಶಕ ಪಂಡಿತ್ ಅಮರದೇವ ಹೃದಯಾಘಾತದಿಂದ ನಿಧನರಾದರು ಅವರು ಭಾರತೀಯ ಶಾಸ್ತ್ರೀಯ ರಾಗಗಳು ಹಾಗೂ ಶ್ರೀಲಂಕಾದ ಶ್ರೀಮಂತ ಜನಪದ ಸಂಗೀತ ಪರಂಪರೆಗಳಿಂದ ಸ್ಪೂರ್ತಿ ಪಡೆದಿದ್ದರು. ಸಿಂಹಳ ಸಂಗೀತಕ್ಕೆ ಅವರು ನೀಡಿರುವ ದೇಣಿಗೆ ಅಪ್ರತಿಮ ಎಂಬುದಾಗಿ ಪರಿಗಣಿಸಲಾಗಿದೆ. ಫಿಲಿಪ್ಪೀನ್ಸ್ನ ರಾಮೊನ್ ಮ್ಯಾಗ್ಸೇಸೆ ಪ್ರಶಸ್ತಿ (2001), ಪದ್ಮಶ್ರೀ ಪ್ರಶಸ್ತಿ (2002), ಶ್ರೀಲಂಕಾದ ಅಧ್ಯಕ್ಷರ ಕಲಾ ಕೀರ್ತಿ ಪ್ರಶಸ್ತಿ (1986) ಮತ್ತು ದೇಶಮಾನ್ಯ ಪ್ರಶಸ್ತಿ (1998)ಗಳು ಅವರಿಗೆ ಲಭಿಸಿದ್ದವು.

www.karunaduexams.com

33. ಟ್ರಸ್ಟ್ ರಿಸರ್ಚ್ ಅಡ್ವೈಸರಿ (TRA) ಸಮೀಕ್ಷೆ ಪ್ರಕಾರ ಭಾರತದ ಅತ್ಯಂತ ಆಕರ್ಷಕ ಇಂಟರ್ನೆಟ್ ಬ್ರಾಂಡ್ ಯಾವುದು?

ಅ) ಫೇಸ್ ಬುಕ್

ಆ) ಗೂಗಲ್

ಇ) ಅಮೆಜಾನ್

ಈ) ಫ್ಲಿಪ್ ಕಾರ್ಟ್

ಅಮೆಜಾನ್

ಅಮೆರಿಕ ಮೂಲದ ಆನ್ಲೈನ್ ಮಾರಾಟ ಮಳಿಗೆ ಅಮೆಝಾನ್ ಭಾರತದ ಅತ್ಯಂತ ಆಕರ್ಷಕ ಇಂಟರ್ನೆಟ್ ಬ್ರಾಂಡ್ ಆಗಿ ಹೊರಹೊಮ್ಮಿದೆ. ತನ್ನ ಪ್ರತಿಸ್ಪರ್ಧಿಗಳಾದ ಫ್ಲಿಪ್ಕಾರ್ಟ್ ಮತ್ತು ಸ್ನಾಪ್ಡೀಲ್ ಹಾಗೂ ಸರ್ಚ್ ಇಂಜಿನ್ ಗೂಗಲ್ ಅನ್ನು ಹಿಂದಿಕ್ಕಿ ಭಾರತದ ಅತ್ಯಂತ ಆಕರ್ಷಕ ಇಂಟರ್ನೆಟ್ ಬ್ರಾಂಡ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಗೂಗಲ್ ಭಾರತದ ಎರಡನೇ ಅತ್ಯಂತ ಆಕರ್ಷಕ ಇಂಟರ್ನೆಟ್ ಬ್ರಾಂಡ್ ಆಗಿ ಹೊರಹೊಮ್ಮಿದ್ದರೆ ನಂತರದ ಸ್ಥಾನಗಳಲ್ಲಿ ಫ್ಲಿಪ್ಕಾರ್ಟ್, ಸ್ನಾಪ್ಡೀಲ್ ಮತ್ತು ಫೇಸ್ಬುಕ್ ಇವೆ. ದೇಶಾದ್ಯಂತ 16 ನಗರಗಳ ಸುಮಾರು 3,000 ಬಳಕೆದಾರರನ್ನು ಸಮೀಕ್ಷೆಗೊಳಪಡಿಸಲಾಗಿತ್ತು.

34. ಈ ಕೆಳಗಿನ ಯಾವ ಸಂಸ್ಥೆ ದೇಶದಾದ್ಯಂತ ಸ್ಮಾರಕಗಳ ವಾಸ್ತವ ಪ್ರವಾಸ (Virtual Tour) ಕ್ಕಾಗಿ ಭಾರತದ ಪುರಾತತ್ವ ಸಮೀಕ್ಷೆ ಇಲಾಖೆಯೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ?

ಅ) ಗೂಗಲ್

ಆ) ಮೈಕ್ರೊಸಾಫ್ಟ್

ಇ) ಫೇಸ್ ಬುಕ್

ಈ) ಯಾಹೂ

ಗೂಗಲ್

ಟೆಕ್ ದಿಗ್ಗಜ್ ಗೂಗಲ್ ಸಂಸ್ಥೆ ದೇಶದ 280 ಸ್ಮಾರಕಗಳ 360 ಡಿಗ್ರಿ ವಾಸ್ತವ ಪ್ರವಾಸಕ್ಕಾಗಿ ಭಾರತೀಯ ಪುರಾತತ್ವ ಸಮೀಕ್ಷೆ ಇಲಾಖೆಯೊಂದಿಗೆ ಸಹಿ ಹಾಕಿದೆ. 280 ಸ್ಮಾರಕಗಳ ಪೈಕಿ 30 ಸ್ಮಾರಕಗಳು ಪಶ್ಚಿಮ ಬಂಗಾಳದಲ್ಲಿವೆ. ತಾಜ್ ಮಹಲ್, ವಿಕ್ಟೋರಿಯಾ ಮೆಮೊರಿಯಲ್, ಹಂಪಿ ಮುಂತಾದ ಪ್ರಮುಖ ಸ್ಮಾರಕಗಳು ಈ ಪಟ್ಟಿಯಲ್ಲಿವೆ.

35. ಸೇನಾ ನೆಲೆಯ ಸೂಕ್ಷ್ಮ ಮಾಹಿತಿಯನ್ನು ಪ್ರಸಾರ ಮಾಡಿದ ಹಿನ್ನಲೆಯಲ್ಲಿ ಯಾವ ವಾರ್ತಾವಾಹಿನಿಯ ಮೇಲೆ ಒಂದು ದಿನದ ನಿರ್ಬಂಧವನ್ನು ಹೇರಲಾಗಿದೆ?

ಅ) ಆಜ್ ತಕ್

ಆ) ಎನ್ಡಿಟಿವಿ ಇಂಡಿಯಾ

ಇ) ಜೀ ನ್ಯೂಸ್

ಈ) ಟೈಮ್ಸ್ ನೌ

ಎನ್ಡಿಟಿವಿ ಇಂಡಿಯಾ

ಪಠಾಣ್ಕೋಟ್ ವಾಯುನೆಲೆ ಮೇಲೆ ನಡೆದ ಉಗ್ರರ ದಾಳಿ ಸುದ್ದಿ ಪ್ರಸಾರ ಮಾಡುವಾಗ ಸೇನಾ ನೆಲೆಯ ಕೆಲವು ಸೂಕ್ಷ್ಮ ಮಾಹಿತಿಯನ್ನು ಬಿತ್ತರಿಸಿದ ಕಾರಣಕ್ಕೆ ಹಿಂದಿ ವಾರ್ತಾವಾಹಿನಿ 'ಎನ್ಡಿಟಿವಿ ಇಂಡಿಯಾ' ಪ್ರಸಾರದ ಮೇಲೆ ಒಂದು ದಿನ ನಿರ್ಬಂಧ ಹೇರಲು ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಅಂತರ್ ಸಚಿವಾಲಯ ಸಮಿತಿ ಶಿಫಾರಸು ಮಾಡಿದೆ. ವಾಯುನೆಲೆ ಮಹತ್ವದ ಮಾಹಿತಿಯನ್ನು ವಾಹಿನಿ ಪ್ರಸಾರ ಮಾಡಿದೆ. ಇದನ್ನು ಪಡೆದ ಉಗ್ರರು ಇನ್ನಷ್ಟು ದಾಳಿ ನಡೆಸುವ ಸಾಧ್ಯತೆ ಇತ್ತು. ರಾಷ್ಟ್ರದ ಭದ್ರತೆ ಅಲ್ಲದೆ ನಾಗರಿಕ ಹಿತದೃಷ್ಟಿ ಹಾಗೂ ಸೇನಾ ಯೋಧರಿಗೆ ಅಪಾಯವಾಗುವ ಸಾಧ್ಯತೆ ಇತ್ತು' ಎಂದು ಸಚಿವಾಲಯ ಹೇಳಿದೆ.

36. "ಕ್ಲಿಫ್ಟನ್ ಕ್ರೋನಿಕಲ್ಸ್ (Clifton Chronicles)" ಸರಣಿ ಪುಸ್ತಕಗಳ ಲೇಖಕರು _____?

ಅ) ಜೆ.ಕೆ.ರೌಲಿಂಗ್

ಆ) ಜೆಫ್ರೆ ಆರ್ಚರ್

ಇ) ಸ್ಟೀವನ್ ಸ್ಮಿತ್

ಈ) ಅರ್ನಾಲ್ಡ್ ಬೂಕರ್

ಜೆಫ್ರೆ ಆರ್ಚರ್

ಜೆಫ್ರೆ ಆರ್ಚರ್ ಅವರು ಪ್ರಸಿದ್ದ ಪುಸ್ತಕ ಸರಣಿ "ಕ್ರಿಫ್ಟನ್ ಕ್ರೋನಿಕಲ್ಸ್" ನ ಲೇಖಕರು. ಈ ಪುಸಕ್ತ ಸರಣಿಯ ಏಳನೇ ಹಾಗೂ ಅಂತಿಮ ಪುಸ್ತಕ ಇತ್ತೀಚೆಗೆ ಬಿಡುಗಡೆಗೊಂಡಿದೆ. ಕ್ರಿಫ್ಟನ್ ಕ್ರೋನಿಕಲ್ಸ್, ದಿಸ್ ವಾಸ್ ಎ ಮ್ಯಾನ್ ಇದು ಏಳನೇ ಪುಸ್ತಕದ ಹೆಸರು. "ಒನ್ಲಿ ಟೈಮ್ ವಿಲ್ ಟೆಲ್ ಯು" ಸರಣಿಯ ಮೊದಲ ಪುಸ್ತಕವಾಗಿದೆ.

37. "ಜಪಾನೀಸ್ ಎನ್ಸೆಪಾಲಿಟಿಸ್ (Japanese Encephalitis)" ಸೋಂಕು ಯಾವುದರ ಮೂಲಕ ಹರಡುತ್ತದೆ?

ಅ) ಸೊಳ್ಳೆ

ಆ) ಕಲುಷಿತ ನೀರು

ಇ) ಜಾನುವಾರುಗಳು

ಈ) ಮಂಗ

ಸೊಳ್ಳೆ

ಜಪಾನೀಸ್ ಎನ್ಸೆಪಾಲಿಟಿಸ್ ಕಾಯಿಲೆ ಜಪಾನೀಸ್ ಎನ್ಸೆಪಾಲಿಟಿಸ್ ವೈರಸ್ ನಿಂದ ಸೊಳ್ಳೆಗಳ ಮೂಲಕ ಹರಡುತ್ತದೆ. ಡೆಂಗ್ಯೂ, ಚಿಕನ್ ಗೂನ್ಯ ಮತ್ತು ಹಳದಿ ಜ್ವರ ಹರಡುವ ಕ್ಯೂಲೆಕ್ಸ್ ಜಾತಿ ಸೊಳ್ಳೆ ಈ ಕಾಯಿಲೆಯ ಹರಡುವಿಕೆಗೆ ಪ್ರಮುಖ ಕಾರಣವಾಗಿದೆ. ಒಡಿಶಾದ ಬುಡಕಟ್ಟು ಜನಾಂಗ ಪ್ರಬಲ ಜಿಲ್ಲೆ ಮಲ್ಕನ್ಗಿರಿಯ 505 ಹಳ್ಳಿಗಳಲ್ಲಿ ಈ ಕಾಯಿಲೆಯಿಂದ 75 ಜನರು

www.karunaduexams.com

ಮರಣಹೊಂದಿದ್ದಾರೆ. ದೇಶದ ಅತಿ ಹೆಚ್ಚು ಜಪಾನೀಸ್ ಎನ್ಸೆಪಾಲಿಟಿಸ್ ಪ್ರಕರಣ ಈ ಜಿಲ್ಲೆಯಲ್ಲಿ ವರದಿಯಾಗಿದೆ.

38. ಯಾವ ದೇಶದಲ್ಲಿ ತಂಬಾಕು ನಿಯಂತ್ರಣ ಸದಸ್ಯ ರಾಷ್ಟ್ರಗಳ 7ನೇ ಅಧಿವೇಶನ (Conference of Parties on Tobacco Control) ಜರುಗಲಿದೆ?

ಅ) ಭಾರತ

ಆ) ಶ್ರೀಲಂಕಾ

ಇ) ಪಾಕಿಸ್ತಾನ

ಈ) ಚೀನಾ

ಭಾರತ

ತಂಬಾಕು ನಿಯಂತ್ರಣ ಸದಸ್ಯ ರಾಷ್ಟ್ರಗಳ 7ನೇ ಅಧಿವೇಶನದ ಆತಿಥ್ಯವನ್ನು ಈ ಬಾರಿ ಭಾರತ ವಹಿಸಿಕೊಂಡಿದ್ದು, ಉತ್ತರ ಪ್ರದೇಶದ ಗೇಟರ್ ನೊಯ್ಡಾದಲ್ಲಿ ನವೆಂಬರ್ 7-12 ರವರೆಗೆ ನಡೆಯಲಿದೆ. 180 ರಾಷ್ಟ್ರಗಳಿಂದ 1500 ಕ್ಕೂ ಹೆಚ್ಚು ಪ್ರತಿನಿಧಿಗಳು ಅಧಿವೇಶನದಲ್ಲಿ ಭಾಗವಹಿಸಲಿದ್ದಾರೆ. ತಂಬಾಕು ಬಳಕೆ ನಿಯಂತ್ರಣಕ್ಕೆ ಭಾರತ ಸೇರಿದಂತೆ ವಿವಿಧ ರಾಷ್ಟ್ರಗಳು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಅಧಿವೇಶನದಲ್ಲಿ ಚರ್ಚಿಸಲಾಗುವುದು.

39. ನವೆಂಬರ್ 5 ರಂದು ಆಚರಿಸಲಾಗುತ್ತಿರುವ ಮೊದಲ ವಿಶ್ವ ಸುನಾಮಿ ಜಾಗೃತಿ ದಿನದ ಧ್ಯೇಯವಾಕ್ಯ ____?

ಅ) Awareness and Alert

ಆ) Education and Evacuation Drills

ಇ) A Step to Rescue

ಈ) Tsunami No more Causalities

Education and Evacuation Drills

ವಿಶ್ವ ಸುನಾಮಿ ಜಾಗೃತಿ ದಿನವನ್ನು ಇದೇ ಮೊದಲ ಬಾರಿಗೆ ನವೆಂಬರ್ 5 ರಂದು ಆಚರಿಸಲಾಗುತ್ತಿದೆ. ಡಿಸೆಂಬರ್ 2015 ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆ ನವೆಂಬರ್ 5 ರಂದು ವಿಶ್ವ ಸುನಾಮಿ ಜಾಗೃತಿ ದಿನವೆಂದು ಆಚರಿಸಲು ನಿರ್ಣಯ ಕೈಗೊಂಡಿತ್ತು. ವಿಶ್ವ ಸುನಾಮಿ ಜಾಗೃತಿ ದಿನ ಜಪಾನಿನ ಕನಸಿನ ಕೂಸು ಎನ್ನಲಾಗಿದೆ. Education and Evacuation Drills ಈ ವರ್ಷದ ಧ್ಯೇಯವಾಕ್ಯ.

www.karunadu exams.com

40. ಏಷ್ಯಾದ ಅತಿ ದೊಡ್ಡ ಮಾನವ ನಿರ್ಮಿತ “ಜಂಗಲ್ ಸಫಾರಿ” ಭಾರತದ ಯಾವ ರಾಜ್ಯದಲ್ಲಿದೆ?

ಅ) ಕೇರಳ

ಆ) ಮಧ್ಯ ಪ್ರದೇಶ

ಇ) ಚತ್ತೀಸಘರ್

ಈ) ಜಾರ್ಖಂಡ್

ಚತ್ತೀಸಘರ್

ಏಷ್ಯಾದ ಅತಿ ದೊಡ್ಡ ಮಾನವ ನಿರ್ಮಿತ ಜಂಗಲ್ ಸಫಾರಿಯನ್ನು ಪ್ರಧಾನಿ ಮೋದಿ ಅವರು ಚತ್ತೀಸಘರ್ ದ ನಯಾ ರಾಯ್ಪುರದಲ್ಲಿ ಉದ್ಘಾಟಿಸಿದರು. ಇದರ ವಿಸ್ತೀರ್ಣ ಸರಿಸುಮಾರು 800 ಎಕರೆಯಷ್ಟಿದೆ. 8 ವಿಭಾಗಗಳಲ್ಲಿ ವಿಂಗಡಿಸಲಾಗಿದ್ದು, ವನ್ಯಮೃಗಗಳು ಸಲೀಸಾಗಿ ಒಡಾಡಬಹುದಾಗಿದೆ. ಪರಿಸರ ಸ್ನೇಹಿ ವಾಹನಗಳ ಮೂಲಕ ಪ್ರವಾಸಿಗರು ವನ್ಯಜೀವಿಗಳನ್ನು ಕಣ್ತುಂಬಿಕೊಳ್ಳಬಹುದಾಗಿದೆ. ಹುಲಿ, ಚಿರತೆ, ಸಿಂಹ, ಕರಡಿ ಮುಂತಾದ ವನ್ಯಜೀವಿಗಳನ್ನು ಇಲ್ಲಿ ಕಾಣಬಹುದು.

41. ಭಾರತದ ಮೊಟ್ಟ ಮೊದಲ ಟೈಟಾನೀಯಂ ಯೋಜನೆಯ ಪ್ರಯೋಗಾರ್ಥ ಉತ್ಪಾದನೆ ಯಾವ ರಾಜ್ಯದಲ್ಲಿ ಆರಂಭಗೊಂಡಿತು?

ಅ) ಒಡಿಶಾ

ಆ) ಬಿಹಾರ

ಇ) ಜಾರ್ಖಂಡ್

ಈ) ಪಶ್ಚಿಮ ಬಂಗಾಳ

ಒಡಿಶಾ

ಭಾರತದ ಮೊದಲ ಟೈಟಾನೀಯಂ ಯೋಜನೆಯ ಪ್ರಯೋಗಾರ್ಥ ಉತ್ಪಾದನೆ ಒಡಿಶಾದ ಗಂಜಂನಲ್ಲಿ ಆರಂಭಗೊಂಡಿತು. ಸರಫ್ ಗ್ರೂಫ್ ಈ ಯೋಜನೆಯನ್ನು ಪ್ರಾರಂಭಿಸಿದೆ. ಇದು ದೇಶದ ಮೊದಲ ಹಾಗೂ ಏಕೈಕ ಟೈಟಾನೀಯಂ ಉತ್ಪಾದನೆ ಘಟಕವಾಗಿದೆ.

42. ಸ್ವಿಟ್ಜರ್ಲ್ಯಾಂಡ್ ಪ್ರವಾಸೋದ್ಯಮಕ್ಕೆ ಭಾರತದ ರಾಯಭಾರಿಯಾಗಿ ಆಯ್ಕೆಯಾಗಿರುವ ಬಾಲಿವುಡ್ ನಟ ಯಾರು?

ಅ) ಶಾರೂಖ್ ಖಾನ್

ಆ) ಅಮಿತಾಬ್ ಬಚ್ಚನ್

ಇ) ರಣವೀರ್ ಸಿಂಗ್

ಈ) ಸಲ್ಮಾನ್ ಖಾನ್

www.karunaduexams.com

ರಣವೀರ್ ಸಿಂಗ್

ಭೂಲೋಕದ ಸ್ವರ್ಗ ಸೀಮೆ ಸ್ವಿಟ್ಜರ್ಲ್ಯಾಂಡ್ ಪ್ರವಾಸೋದ್ಯಮಕ್ಕೆ ಬಾಲಿವುಡ್ ನಟ ರಣವೀರ್ ಭಾರತದ ರಾಯಭಾರಿಯಾಗಿ ಆಯ್ಕೆಯಾಗಿದ್ದಾರೆ. 2017ರ ಸ್ವಿಟ್ಜರ್ಲ್ಯಾಂಡ್ ಪ್ರವಾಸೋದ್ಯಮ ಆಂದೋಲನ ಪ್ರವರ್ತನೆಗಾಗಿ ರಣವೀರ್‌ನನ್ನು ಇಂಡಿಯನ್ ಅಂಬಾಸಿಡರ್ ಆಗಿ ನೇಮಕ ಮಾಡಲಾಗಿದೆ. `ನೇಚರ್ ವಾಂಟ್ಸ್ ಯು ಬ್ಯಾಕ್' ಎಂಬುದು ಪ್ರವಾಸೋದ್ಯಮ ಪ್ರಚಾರಾಂದೋಲನದ ಧ್ಯೇಯವಾಕ್ಯವಾಗಿದೆ.

43. 4ನೇ ಏಷ್ಯನ್ ಚಾಂಪಿಯನ್‌ಷಿಪ್ ಟೂರ್ನಿಯಲ್ಲಿ ಭಾರತ ವನಿತೆಯರ ತಂಡ ಯಾವ ದೇಶವನ್ನು ಮಣಿಸುವ ಮೂಲಕ ಪ್ರಶಸ್ತಿಯನ್ನು ಗೆದ್ದುಕೊಂಡಿತು?

ಅ) ಪಾಕಿಸ್ತಾನ

ಆ) ಚೀನಾ

ಇ) ಜಪಾನ್

ಈ) ಮಲೇಷಿಯಾ

ಚೀನಾ

ಭಾರತದ ವನಿತೆಯರ ತಂಡವು 2–1 ಗೋಲುಗಳಿಂದ ಚೀನಾ ತಂಡವನ್ನು ಮಣಿಸುವ ಮೂಲಕ ಇದೇ ಮೊದಲ ಬಾರಿ. 4ನೇ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಗೆದ್ದುಕೊಂಡಿದೆ. ವನಿತೆಯರ ತಂಡವು 2013ರಲ್ಲಿ ಫೈನಲ್ ತಲುಪಿತ್ತು. ಆದರೆ, ಜಪಾನ್ ಎದುರು ಸೋತಿತ್ತು. 2010ರಲ್ಲಿ ನಡೆದಿದ್ದ ಮೊಟ್ಟಮೊದಲ ಟೂರ್ನಿಯಲ್ಲಿ ಭಾರತ ತಂಡವು ಮೂರನೇ ಸ್ಥಾನ ಪಡೆದಿತ್ತು.

44. ವಿಶ್ವ ಷೇರು ವಿನಿಮಯ ಕೇಂದ್ರಗಳ ಒಕ್ಕೂಟದ (WFE) ಅಧ್ಯಕ್ಷರಾಗಿ ಯಾರು ನೇಮಕಗೊಂಡಿದ್ದಾರೆ?

ಅ) ಚಿತ್ರಾ ರಾಮಕೃಷ್ಣ

ಆ) ಜೋಸೆಫ್ ಸೈಮನ್

ಇ) ಸುಮನ ಚಂದ್ರಭಾಗ್

ಈ) ಕಾರ್ತಿಕ್ ಶೆಣೈ

ಚಿತ್ರಾ ರಾಮಕೃಷ್ಣ

ರಾಷ್ಟ್ರೀಯ ಷೇರು ವಿನಿಮಯ ಕೇಂದ್ರದ (ಎನ್‌ಎಸ್‌ಇ) ವ್ಯವಸ್ಥಾಪಕ ನಿರ್ದೇಶಕಿ ಚಿತ್ರಾ ರಾಮಕೃಷ್ಣ ಅವರನ್ನು ವಿಶ್ವ ಷೇರು ವಿನಿಮಯ ಕೇಂದ್ರಗಳ ಒಕ್ಕೂಟದ (ಡಬ್ಲ್ಯುಎಫ್‌ಇ) ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ಕೊಲಂಬಿಯದ ಕಾರ್ಟಜೆನಾದಲ್ಲಿ ನಡೆದ 'ಡಬ್ಲ್ಯುಎಫ್‌ಇ'ಯ 56ನೇ ವಾರ್ಷಿಕ ಮಹಾಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ವಿವಿಧ ದೇಶಗಳ 200ಕ್ಕೂ ಹೆಚ್ಚು ಷೇರು ವಿನಿಮಯ ಕೇಂದ್ರಗಳು 'ಡಬ್ಲ್ಯುಎಫ್‌ಇ' ಒಕ್ಕೂಟದ



www.karunaduexams.com

ಸದಸ್ಯತ್ವ ಹೊಂದಿವೆ. ಪ್ರತಿ ಎರಡು ವರ್ಷಗಳಿಗೆ ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡಲಾಗುತ್ತದೆ.

45. "ಸಂಪ್ರಿತಿ-2016" ಮಿಲಿಟರಿ ಅಭ್ಯಾಸ ಭಾರತ ಮತ್ತು ಯಾವ ದೇಶದ ನಡುವೆ ಇತ್ತೀಚೆಗೆ ಆರಂಭಗೊಂಡಿತು?

ಅ) ಮಲೇಷಿಯಾ

ಆ) ಮ್ಯಾನ್ಮಾರ್

ಇ) ಬಾಂಗ್ಲದೇಶ

ಈ) ಭೂತಾನ್

ಬಾಂಗ್ಲದೇಶ

ಭಾರತ ಮತ್ತು ಬಾಂಗ್ಲದೇಶ ನಡುವಿನ ಸಂಪ್ರಿತಿ-2016 ಜಂಟಿ ಮಿಲಿಟರಿ ಅಭ್ಯಾಸ ತಂಗಿಲ್, ಡಾಕಾ, ಬಾಂಗ್ಲದೇಶದಲ್ಲಿ ನವೆಂಬರ್ 5 ರಿಂದ ಆರಂಭಗೊಂಡಿದ್ದು, 18 ವರೆಗೆ ನಡೆಯಲಿದೆ. ಸಂಪ್ರಿತಿ ಮಿಲಿಟರಿ ಅಭ್ಯಾಸ ಭಾರತ ಮತ್ತು ಬಾಂಗ್ಲದೇಶ ನಡುವಿನ ಮಹತ್ವದ ದ್ವಿಪಕ್ಷೀಯ ರಕ್ಷಣಾ ಸಹಕಾರವಾಗಿದೆ. ಉಭಯ ದೇಶಗಳು ಪರ್ಯಾಯವಾಗಿ ಈ ಸಮರಾಭ್ಯಾಸವನ್ನು ಆಯೋಜಿಸುತ್ತಿದ್ದು, ಇದು ಆರನೇ ಆವೃತ್ತಿಯದಾಗಿದೆ.

46. "ಯಾನ್ ಎರ ಆಫ್ ಡಾರ್ಕನೆಸ್: ದಿ ಬ್ರಿಟಿಷ್ ಎಂಪೈರ್ ಇನ್ ಇಂಡಿಯಾ (An Era of Darkness: The British Empire in India)" ಪುಸ್ತಕದ ಲೇಖಕರು ಯಾರು?

ಅ) ಜೈರಾಮ್ ರಮೇಶ್

ಆ) ಶಶಿ ಥರೂರ್

ಇ) ಪಿ ಚಿದಂಬರಂ

ಈ) ರೊಮೆಶ್ ದತ್ತ್

ಶಶಿ ಥರೂರ್

ಲೋಕಸಭಾ ಸದಸ್ಯ ಶಶಿ ಥರೂರ್ ಅವರು "ಯಾನ್ ಎರ ಆಫ್ ಡಾರ್ಕನೆಸ್: ದಿ ಬ್ರಿಟಿಷ್ ಎಂಪೈರ್ ಇನ್ ಇಂಡಿಯಾ" ಪುಸ್ತಕರದ ಲೇಖಕರು. ಬ್ರಿಟಿಷ್ ಆಳ್ವಿಕೆಯಲ್ಲಿ ಭಾರತದ ಲೂಟಿ, ಹಿಂಸೆ, ಸಾವುಗಳ ಬಗ್ಗೆ ವಿವರಿಸಲಾಗಿದೆ.

www.karunaduexams.com

47. ಪ್ರಪ್ರಥಮ ಅಂತಾರಾಷ್ಟ್ರೀಯ ಕೃಷಿ-ಜೀವ ವೈವಿಧ್ಯತೆ ಕಾಂಗ್ರೆಸ್ (International Agro-Biodiversity Congress) ಯಾವ ನಗರದಲ್ಲಿ ಆರಂಭಗೊಂಡಿದೆ?

ಅ) ನವದೆಹಲಿ

ಆ) ನ್ಯೂ ಯಾರ್ಕ್

ಇ) ಬರ್ಲಿನ್

ಈ) ಬೀಜಿಂಗ್

ನವದೆಹಲಿ

ಪ್ರಪ್ರಥಮ ಅಂತಾರಾಷ್ಟ್ರೀಯ ಕೃಷಿ-ಜೀವ ವೈವಿಧ್ಯತೆ ಕಾಂಗ್ರೆಸ್ ಭಾರತದ ನವದೆಹಲಿಯಲ್ಲಿ ನವೆಂಬರ್ 6 ರಂದು ಆರಂಭಗೊಂಡಿತು. ನಾಲ್ಕು ದಿನಗಳ ಕಾಲ ನಡೆಯಲಿರುವ ಈ ಕಾಂಗ್ರೆಸ್ ಅನ್ನು ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸಿದರು. 60 ದೇಶಗಳ 900 ಪ್ರತಿನಿಧಿಗಳು ಈ ಕಾಂಗ್ರೆಸ್ ನಲ್ಲಿ ಭಾಗವಹಿಸಲಿದ್ದಾರೆ.

48. ವಿಶ್ವ ಪುರುಷರ ಸಿಂಗಲ್ಸ್ ಟೆನ್ನಿಸ್ ಶ್ರೇಯಾಂಕದಲ್ಲಿ ನಂ.1 ಸ್ಥಾನವನ್ನು ಪಡೆದುಕೊಂಡ ಆಟಗಾರ ಯಾರು?

ಅ) ಆಯಂಡಿ ಮರೆ

ಆ) ನೊವಾಕ್ ಜೊಕೊವಿಕ್

ಇ) ಮಿಲೊಸ್ ರೊಮೊನಿಕ್

ಈ) ರೋಜರ್ ಫೆಡರರ್

ಆಯಂಡಿ ಮರೆ

ಸ್ಕಾಟ್ ಟೆನಿಸ್ ತಾರೆ ಆಂಡಿ ಮರ್ರೆ ವಿಶ್ವ ಪುರುಷರ ಸಿಂಗಲ್ಸ್ ಟೆನಿಸ್ ಶ್ರೇಯಾಂಕ ಪಟ್ಟಿಯಲ್ಲಿ ನಂ.1 ಆಗಿ ಹೊರ ಹೊಮ್ಮಿದ್ದಾರೆ. ಪ್ಯಾರಿಸ್ ಮಾಸ್ಟರ್ಸ್ ಟೆನಿಸ್ ಟೂರ್ನಿಯಲ್ಲಿ ಫೈನಲ್ ಪ್ರವೇಶಿಸುವ ಮೂಲಕ ಮರ್ರೆ ಈ ಸಾಧನೆ ಮಾಡಿದರು. ಪ್ಯಾರಿಸ್ ಮಾಸ್ಟರ್ಸ್ ಫೈನಲ್ ಪ್ರವೇಶಿಸುವ ಮೂಲಕ ಅಗ್ರಸ್ಥಾನದಲ್ಲಿದ್ದ ನೊವಾಕ್ ಜೊಕೊವಿಚ್ ಅವರನ್ನು ಹಿಂದಿಕ್ಕಿ ಅಗ್ರಸ್ಥಾನಕ್ಕೇರಿದ ಮೊದಲ ಬ್ರಿಟಿಷ್ ಆಟಗಾರ ಮರ್ರೆ ಎನಿಸಿಕೊಂಡರು. ಮೂರು ಗ್ರ್ಯಾನ್ ಸ್ಲಾಮ್ ಹಾಗೂ ಎರಡು ಬಾರಿ ಒಲಿಂಪಿಕ್ಸ್ ಚಾಂಪಿಯನ್ ಆಗಿರುವ 29 ವರ್ಷದ ಮರ್ರೆ 43 ವರ್ಷಗಳ ಬಳಿಕ ವರ್ಲ್ಡ್ ನಂ.1 ಸ್ಥಾನಕ್ಕೇರಿದ್ದಾರೆ.

49. ವಿಶ್ವಸಂಸ್ಥೆಯ ಬಜೆಟ್ ಹಾಗೂ ಆಡಳಿತ ಸಲಹಾ ಸಮಿತಿಗೆ ಆಯ್ಕೆಯಾದ ಭಾರತೀಯ ಯಾರು?

ಅ) ಅನಿರುದ್ಧ ರಜಪೂತ್

ಆ) ಮಹೇಶ್ ಕುಮಾರ್

www.karunaduexams.com

ಇ) ಸೃಜನ್ ಸಿಂಗ್

ಈ) ರಮೇಶ್ ಬಾದೊಲ್

ಮಹೇಶ್ ಕುಮಾರ್

ವಿಶ್ವಸಂಸ್ಥೆಯ ಬಜೆಟ್ ಹಾಗೂ ಆಡಳಿತ ಸಲಹಾ ಸಮಿತಿಗೆ ಭಾರತೀಯರಾದ ಮಹೇಶ್ ಕುಮಾರ್ ಆಯ್ಕೆಯಾಗಿದ್ದಾರೆ. ವಿಶ್ವಸಂಸ್ಥೆಗೆ ಭಾರತದ ಖಾಯಂ ನಿಯೋಗದ ಮುಖ್ಯ ಕಾರ್ಯದರ್ಶಿಯಾದ ಮಹೇಶ್ ಕುಮಾರ್ ಶುಕ್ರವಾರ ವಿಶ್ವಸಂಸ್ಥೆಯ ಆಡಳಿತಾತ್ಮಕ ಹಾಗೂ ಆಯವ್ಯಯ ಪ್ರಶ್ನೆಗಳ (ಎಸಿಎಬಿಕ್ಯೂ) ಕುರಿತ ಸಲಹಾ ಸಮಿತಿಗೆ ಆಯ್ಕೆಯಾಗಿದ್ದಾರೆ.ಈ ಸಮಿತಿಯು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಐದನೆ ಸಮಿತಿಗೆ ನೆರವಾಗುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ವಿಶ್ವಸಂಸ್ಥೆಯ ಬಜೆಟ್ ಮತ್ತಿತರ ಆಡಳಿತಾತ್ಮಕ ಉಪಕ್ರಮಗಳನ್ನು ಆದು ಪರಿಶೀಲಿಸುತ್ತದೆ. ಸಮಿತಿಯ ಸದಸ್ಯರಾಗಿ ಮಹೇಶ್ ಕುಮಾರ್ ಜೊತೆಗೆ ಜಪಾನ್ನ ತಾಕೇಶಿ ಅಕಮಾತ್ಸು ಹಾಗೂ ಚೀನಾದ ಯೆ ಕ್ಸಿನಾಂಗ್ ಆಯ್ಕೆಯಾಗಿದ್ದಾರೆ. ಇವರ ಸೇವಾವಧಿಯು ಮೂರು ವರ್ಷಗಳಾಗಿದ್ದು, 2017ರ ಜನವರಿಯಿಂದ ಆರಂಭಗೊಳ್ಳಲಿದೆ.

50. ಟಾಟಾ ಲಿಟರೇಚರ್ ಲೈವ್ ಜೀವಮಾನ ಸಾಧನೆ ಪ್ರಶಸ್ತಿ-2016 (Tata Literature Live! Lifetime Achievement Award) ಗೆ ಯಾರನ್ನು ಆಯ್ಕೆಮಾಡಲಾಗಿದೆ?

ಅ) ಚೇತನ್ ಭಗತ್

ಆ) ಅಮಿತವ್ ಘೋಷ್

ಇ) ಕಿರಣ್ ನಗರ್ಕರ್

ಈ) ವಿ ಎಸ್ ನೈಪಾಲ್

ಅಮಿತವ್ ಘೋಷ್

ಪ್ರಖ್ಯಾತ ಭಾರತ ಅಮೆರಿಕ ಕಾದಂಬರಿಕಾರ ಅಮಿತವ್ ಘೋಷ್ ಅವರನ್ನು ಪ್ರತಿಷ್ಠಿತ ಟಾಟಾ ಲಿಟರೇಚರ್ ಲೈವ್ ಜೀವಮಾನ ಸಾಧನೆ ಪ್ರಶಸ್ತಿ-2016 ಗೆ ಆಯ್ಕೆಮಾಡಲಾಗಿದೆ. ಭಾರತೀಯ ಸಾಹಿತ್ಯ ಕ್ಷೇತ್ರಕ್ಕೆ ಘೋಷ್ ನೀಡಿರುವ ಅಪರಿಮಿತ ಕೊಡುಗೆಯನ್ನು ಗಮನಿಸಿ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ನವೆಂಬರ್ 20 ರಂದು ಮುಂಬೈನಲ್ಲಿ ನಡೆಯಲಿರುವ ಟಾಟಾ ಲಿಟರೇಚರ್ ಲೈವ್ ಸಮಾರಂಭದಲ್ಲಿ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು. ಘೋಷ್ ಅವರ “ಇಬಿಸ್ ಟ್ರಿಲಾಜಿ-ಸೀ ಆಫ್ ಪಾಪ್ಪಿಸ್”, “ರೀವರ್ ಆಫ್ ಸ್ಮೋಕ್”, “ಪ್ಲಡ್ ಆಫ್ ಫೈರ್”, “ದಿ ಸರ್ಕಲ್ ಆಫ್ ರೀಸನ್”, “ದಿ ಶಾಡೋ ಲೈನ್ಸ್” ಸಾಹಿತ್ಯ ಪ್ರಶಸ್ತಿ ಲಭಿಸಿದೆ.

www.karunaduexams.com

51. ಭಾರತೀಯ ರಿಸರ್ವ್ ಬ್ಯಾಂಕ್ ನ ಕಾರ್ಯನಿರ್ವಾಹಕ ನಿರ್ದೇಶಕರಾಗಿ (Executive Director) ಯಾರು ನೇಮಕಗೊಂಡಿದ್ದಾರೆ?

ಅ) ಸತೀಶ್ ಚಂದ್ರ

ಆ) ರಾಜೇಶ್ವರ್ ರಾವ್

ಇ) ಸುದೀಪ್ ಕುಲಕರ್ಣಿ

ಈ) ಪ್ರಮೋದ್ ರಂಜನ್

ರಾಜೇಶ್ವರ್ ರಾವ್

ಎಂ ರಾಜೇಶ್ವರ್ ರಾವ್ ಅವರನ್ನು ಭಾರತೀಯ ರಿಸರ್ವ್ ಬ್ಯಾಂಕ್ ನ ಕಾರ್ಯನಿರ್ವಾಹಕ ನಿರ್ದೇಶಕರಾಗಿ ನೇಮಕ ಮಾಡಲಾಗಿದೆ. ಈ ಮುಂಚೆ ಈ ಹುದ್ದೆಯಲ್ಲಿದ್ದ ಜಿ ಮಹಾಲಿಂಗಂ ರವರು ಸ್ವಯಂ ನಿವೃತ್ತಿ ಪಡೆದುಕೊಂಡ ಕಾರಣ ಈ ಹುದ್ದೆ ತೆರವಾಗಿತ್ತು. ರಾವ್ ರವರು ಸಂಖ್ಯಾಶಾಸ್ತ್ರ ಮತ್ತು ಮಾಹಿತಿ ಆಡಳಿತ ವಿಭಾಗದ ಮೇಲುಸ್ತುವಾರಿ ನೋಡಿಕೊಳ್ಳಲಿದ್ದಾರೆ.

52. "ಆಸ್ಟ್ರೇಲಿಯಾದ ವರ್ಷದ ವ್ಯಕ್ತಿ" ಪ್ರಶಸ್ತಿಗೆ ಪಾತ್ರರಾದ ಭಾರತ ಮೂಲದ ವ್ಯಕ್ತಿ ಯಾರು?

ಅ) ತೇಜಿಂದರ್ ಪಾಲ್ ಸಿಂಗ್

ಆ) ಶುಭಾ ಮುದ್ಗಲ್

ಇ) ಗುರ್ಜಿತ್ ಸಿಂಗ್ ಬಾದಲ್

ಈ) ಪ್ರಣೀತ್ ಕುಮಾರ್

ತೇಜಿಂದರ್ ಪಾಲ್ ಸಿಂಗ್

ಭಾರತೀಯ ಮೂಲದ ಸಿಖ್ ವ್ಯಕ್ತಿ ತೇಜಿಂದರ್ ಪಾಲ್ ಸಿಂಗ್ ಅವರು ವರ್ಷದ ಆಸ್ಟ್ರೇಲಿಯನ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಆಸ್ಟ್ರೇಲಿಯದಲ್ಲಿ ಸಿಖ್ ಸಮುದಾಯಕ್ಕೆ ಸಲ್ಲಿಸಿದ ಸೇವೆ ಹಾಗೂ ಎಲ್ಲ ಬಣ್ಣಗಳ ಜನರ ಬದುಕನ್ನು ಧನಾತ್ಮಕವಾಗಿ ಪ್ರಭಾವಿತಗೊಳಿಸಿರುವುದಕ್ಕಾಗಿ ತೇಜಿಂದರ್ ಪಾಲ್ ಸಿಂಗ್ರಿಗೆ 'ವರ್ಷದ ಆಸ್ಟ್ರೇಲಿಯನ್' ಪ್ರಶಸ್ತಿಯನ್ನು ನೀಡಲಾಗಿದೆ. ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಜನವರಿ 25ರಂದು ನಡೆಯಲಿರುವುದು. 'ವರ್ಷದ ಆಸ್ಟ್ರೇಲಿಯನ್' ಪ್ರಶಸ್ತಿಯುಲ್ಲಿ ನಾಲ್ಕು ವಿಭಾಗಗಳಿವೆ. ಅವುಗಳ ಪೈಕಿ ಒಂದು 'ಆಸ್ಟ್ರೇಲಿಯದ ಲೋಕಲ್ ಹೀರೊ'. ಈ ಪ್ರಶಸ್ತಿಯನ್ನು ತೇಜಿಂದರ್ ಪಡೆದುಕೊಂಡಿದ್ದಾರೆ.

www.karunaduexams.com

53. "ಗೇಮ್ಸ್ ಗೋಸ್ ಆನ್ (Games Goes On) ಪುಸ್ತಕದ ಲೇಖಕರು ____?

ಅ) ಗ್ಯಾರಿ ಕ್ರಿಸ್ಟನ್

ಆ) ಅಲನ್ ಮ್ಯಾಗಿಲ್ ರೇ

ಇ) ಸ್ಟುವರ್ಟ್ ಬರ್ಡನ್

ಈ) ಅನಿಲ್ ಕುಂಬ್ಳೆ

ಅಲನ್ ಮ್ಯಾಗಿಲ್ ರೇ

ಗೇಮ್ಸ್ ಗೋಸ್ ಆನ್ ಪುಸ್ತಕವನ್ನು ಆಸ್ಟ್ರೇಲಿಯಾದ ನಿರೂಪಕ ಅಲನ್ ಮ್ಯಾಗಿಲ್ ರೇ ಬರೆದಿದ್ದಾರೆ. ಕ್ರಿಕಟ್ ಆಟದೊಂದಿಗೆ ಸರಿಸುಮಾರು ಐವತ್ತು ವರ್ಷಗಳಿಂದ ಒಡನಾಟ ಹೊಂದಿರುವ ಅನುಭವವನ್ನು ಅಲನ್ ಅವರು ಪುಸ್ತಕದಲ್ಲಿ ಹಂಚಿಕೊಂಡಿದ್ದಾರೆ.

54. 39ನೇ ಜಮ್ನಲಾಲ್ ಬಜಾಜ್ ಫೌಂಡೇಷನ್ ಪ್ರಶಸ್ತಿಗೆ ಆಯ್ಕೆಯಾಗಿರುವ "ಶೇಕ್ ರಚೆದ್ ಘನೌಚಿ" ರವರು ಯಾವ ದೇಶದವರು?

ಅ) ಟುನೇಷಿಯಾ

ಆ) ಅಲ್ಜೀರಿಯಾ

ಇ) ಮ್ಯಾನ್ಮಾರ್

ಈ) ಮಲೇಷಿಯಾ

ಟುನೇಷಿಯಾ

ಪ್ರಸಿದ್ದ ಗಾಂಧೀವಾದಿ ಮತ್ತು ಟುನೇಷಿಯಾದ ಎನ್ನಹದ ಪಕ್ಷದ ಅಧ್ಯಕ್ಷ ಶೇಕ್ ರಚೆದ್ ಘನೌಚಿ ಅವರನ್ನು 2016 ಜಮ್ನಲಾಲ್ ಬಜಾಜ್ ಫೌಂಡೇಷನ್ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಈ ಬಾರಿಯ ಪ್ರಶಸ್ತಿಗೆ ಒಟ್ಟು ನಾಲ್ಕು ಜನರನ್ನು ಆಯ್ಕೆಮಾಡಲಾಗಿದ್ದು, ಘನೌಚಿ ಸಹ ಒಬ್ಬರು.

55. ಗರ್ಭಿಣಿ ಸ್ತ್ರೀಯರಿಗೆ ಉಚಿತ ಆರೋಗ್ಯ ತಪಾಸಣೆ ಸೌಲಭ್ಯ ನೀಡುವ ಸಲುವಾಗಿ ಕೇಂದ್ರ ಸರ್ಕಾರ ಯಾವ ಯೋಜನೆಯನ್ನು ಇತ್ತೀಚೆಗೆ ಜಾರಿಗೊಳಿಸಿದೆ?

ಅ) ಮಾತೃತ್ವ ಸಹಭಾಗಿತ್ವ ಯೋಜನೆ

ಆ) ಸುರಕ್ಷಿತ ಮಾತೃತ್ವ ಅಭಿಯಾನ

ಇ) ಸುರಕ್ಷಿತ ಮಹಿಳಾ ಅಭಿಯಾನ

ಈ) ಮಾತೃತ್ವ ಆರೋಗ್ಯ ಅಭಿಯಾನ

ಸುರಕ್ಷಿತ ಮಾತೃತ್ವ ಅಭಿಯಾನ

ಗರ್ಭಿಣಿ ಸ್ತ್ರೀಯರಿಗೆ ಉಚಿತ ಆರೋಗ್ಯ ತಪಾಸಣೆ ಸೌಲಭ್ಯ ನೀಡುವ ಸಲುವಾಗಿ ಕೇಂದ್ರ ಸರ್ಕಾರ ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ ಜಾರಿಗೊಳಿಸಿದೆ. ಕೇಂದ್ರ ಆರೋಗ್ಯ

www.karunaduexams.com

ಸಚಿವ ಜೆ ಪಿ ನಡ್ಡಾ ಅವರು ಈ ಯೋಜನೆಗೆ ನವದೆಹಲಿಯಲ್ಲಿ ಚಾಲನೆ ನೀಡಿದರು. ಇದರಡಿ ಸರ್ಕಾರಿ ಆರೋಗ್ಯ ಕೇಂದ್ರ ಮತ್ತು ಆಸ್ಪತ್ರೆಗಳಲ್ಲಿ ಗರ್ಭಿಣಿ ಸ್ತ್ರೀಯರಿಗೆ ಉಚಿತ ಆರೋಗ್ಯ ತಪಾಸಣೆ ಮಾಡಲಾಗುವುದು.

56. 2016 ಬಿಎನ್ ಪಿ ಪರಿಬಾಸ್ ಮಾಸ್ಟರ್ಸ್ ಪುರುಷರ ಡಬ್ಬಲ್ಸ್ ನಲ್ಲಿ ಪ್ರಶಸ್ತಿ ಗೆದ್ದ ಜೋಡಿ ಯಾವುದು?

ಅ) ಹೆನ್ರಿ ಕೊಂಟಿನೇನ್ ಮತ್ತು ಜಾನ್ ಪೀರ್ಸ್

ಆ) ಪೈರಿ ಹ್ಯೂಗೆಸ್ ಹರ್ಬಟ್ ಮತ್ತು ನಿಕೋಲಸ್ ಮಹುತ್

ಇ) ಹೆನ್ರಿ ಕೊಂಟಿನೇನ್ ಮತ್ತು ನಿಕೋಲಸ್ ಮಹುತ್

ಈ) ಜಾನ್ ಪೀರ್ಸ್ ಮತ್ತು ಪೈರಿ ಹ್ಯೂಗೆಸ್ ಹರ್ಬಟ್

ಹೆನ್ರಿ ಕೊಂಟಿನೇನ್ ಮತ್ತು ಜಾನ್ ಪೀರ್ಸ್

ಹೆನ್ರಿ ಕೊಂಟಿನೇನ್ ಮತ್ತು ಜಾನ್ ಪೀರ್ಸ್ ಜೋಡಿ 2016 ಬಿ ಎನ್ ಪಿ ಪರಿಬಾಸ್ ಮಾಸ್ಟರ್ಸ್ ಟೂರ್ನಿಯ ಪುರುಷರ ಡಬ್ಬಲ್ಸ್ ವಿಭಾಗದಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಅಗ್ರ ಶ್ರೇಯಾಂಕಿತ ಜೋಡಿ ಪೈರಿ ಹ್ಯೂಗೆಸ್ ಹರ್ಬಟ್ ಮತ್ತು ನಿಕೋಲಸ್ ಮಹುತ್ ಸೋಲಿಸುವ ಮೂಲಕ ಪ್ರಶಸ್ತಿ ಪಡೆದುಕೊಂಡಿತು.

57. ಇತ್ತೀಚೆಗೆ "ಐಐಟಿ ಖರಗ್ ಪುರ" ವಿಜ್ಞಾನಿಗಳು ಪುರಾಣದಲ್ಲಿ ಉಲ್ಲೇಖವಾಗಿರುವ "ಚಂದ್ರಭಾಗ" ನದಿ ಯಾವ ರಾಜ್ಯದಲ್ಲಿ ಅಸ್ತಿತ್ವದಲ್ಲಿತ್ತು ಎಂದು ಪತ್ತೆಹಚ್ಚಿದ್ದಾರೆ?

ಅ) ಕೇರಳ

ಆ) ಬಿಹಾರ

ಇ) ಒಡಿಶಾ

ಈ) ಪಶ್ಚಿಮ ಬಂಗಾಳ

ಒಡಿಶಾ

ಐಐಟಿ ಖರಗ್ ಪುರ" ವಿಜ್ಞಾನಿಗಳು ಪುರಾಣದಲ್ಲಿ ಉಲ್ಲೇಖವಾಗಿರುವ "ಚಂದ್ರಭಾಗ" ನದಿಯು ಅಸ್ತಿತ್ವದಲ್ಲಿತ್ತು ಎಂದು ಹೇಳಿದ್ದಾರೆ. ಒಡಿಶಾದ ಪ್ರಸಿದ್ದ ಸೂರ್ಯ ದೇವಸ್ಥಾನದಿಂದ ಎರಡು ಕಿ.ಮೀ ದೂರದಲ್ಲಿ ಈ ನದಿ ಹರಿಯುತ್ತಿತ್ತು ಎನ್ನಲಾಗಿದೆ. ಉಪಗ್ರಹ ಆಧರಿತ ಚಿತ್ರಗಳನ್ನು ವಿಶ್ಲೇಷಿಸಿ ನದಿ ಕುರುಹನ್ನು ಪತ್ತೆಹಚ್ಚಲಾಗಿದೆ.

58. 2016 ಬಿಟ್ಬರ್ಗರ್ ಓಪನ್ ಬ್ಯಾಡ್ಮಿಂಟನ್ ಪ್ರಶಸ್ತಿಯನ್ನು ಗೆದ್ದವರು ಯಾರು?

ಅ) ಆದಿತ್ಯಾ ಮೆಹ್ತಾ

ಆ) ಶಿ ಯೂಕಿ

ಇ) ಸೌರಭ್ ವರ್ಮಾ

www.karunaduexams.com

ಈ) ಯೂ ಥಾಂಟ್

ಶಿ ಯೂಕಿ

ಚೀನಾದ ಶಿ ಯೂಕಿ ರವರು ಭಾರತದ ಸೌರಭ್ ವರ್ಮಾ ರವರನ್ನು ಮಣಿಸುವ ಮೂಲಕ ಬಿಟ್ಬರ್ಗರ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಫ್ರೆಂಚ್ ಓಪನ್ ಸೂಪರ್ ಸರಣಿ ಗೆದ್ದುಕೊಂಡಿದ್ದ ಚೀನಾದ ಆಟಗಾರನಿಗೆ ಇದು ಎರಡನೇ ಪ್ರಶಸ್ತಿಯಾಗಿದೆ. ವಿಶ್ವ ರ್ಯಾಂಕಿಂಗ್ನಲ್ಲಿ 57ನೇ ಸ್ಥಾನದಲ್ಲಿರುವ ಸೌರಭ್ ಮೂರನೇ ಟೂರ್ನಿಯಲ್ಲಿ ರನ್ನರ್ ಅಪ್ ಆಗಿದ್ದಾರೆ. ಬೆಲ್ಜಿಯಂ, ಪೋಲೆಂಡ್ ಬ್ಯಾಡ್ಮಿಂಟನ್ ಚಾಂಪಿ ಯನ್ಶಿಪ್ ಗಳಲ್ಲಿ ಅವರು ಎರಡನೇ ಸ್ಥಾನ ಪಡೆದಿದ್ದರು.

59. ಆಫ್ರಿಕಾದ “ಪೆಂಬಾ” ಮತ್ತು “ಜಂಜೀಬರ್” ದ್ವೀಪ್ರ ಪ್ರದೇಶಗಳು ಈ ಕೆಳಗಿನ ಯಾವುದರ ಬೇಸಾಯಕ್ಕೆ ಪ್ರಸಿದ್ದಿ ಹೊಂದಿವೆ?

ಅ) ಕಬ್ಬು

ಆ) ತಂಬಾಕು

ಇ) ಲವಂಗ

ಈ) ಕಾಫಿ

ಲವಂಗ

60. ದೇಶದ ಮೊದಲ “ದ್ರುವೀಕೃತ ನೈಸರ್ಗಿಕ ಅನಿಲ (CNG)” ಚಾಲಿತ ಬಸ್ ಸೇವೆಗೆ ಯಾವ ರಾಜ್ಯದಲ್ಲಿ ಚಾಲನೆ ನೀಡಲಾಯಿತು?

ಅ) ಕೇರಳ

ಆ) ಮಧ್ಯ ಪ್ರದೇಶ

ಇ) ಮಹಾರಾಷ್ಟ್ರ

ಈ) ಗುಜರಾತ್

ಕೇರಳ

ದೇಶದ ಮೊದಲ “ದ್ರುವೀಕೃತ ನೈಸರ್ಗಿಕ ಅನಿಲ” ಚಾಲಿತ ಬಸ್ ಸೇವೆ ಕೇರಳದ ತಿರುವಂತಪುರಂನಲ್ಲಿ ಚಾಲನೆ ನೀಡಲಾಯಿತು. ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಧರ್ಮೇಂದ್ರ ಪ್ರಧಾನ್ ಮತ್ತು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಈ ಬಸ್ಸುಗಳ ಪ್ರಯೋಗಾರ್ಥ ಚಾಲನೆಯನ್ನು ಉದ್ಘಾಟಿಸಿದರು. ಪೆಟ್ರೋನೆಟ್ ಎಲ್ಎನ್ ಜಿ, ಇಂಡಿಯನ್ ಆಯಿಲ್ ಕಾರ್ಪೋರೇಶನ್ ಮತ್ತು ಟಾಟಾ ಮೋಟಾರ್ಸ್ ಲಿಮಿಟೆಡ್ ಈ ಬಸ್ಸ್ ಸೇವೆಯನ್ನು ಆರಂಭಿಸಿವೆ.

www.karunaduexams.com

61. 2016ನೇ ಸಾಲಿನ ದೇಶದ ಸಾವಿರ ಆಕರ್ಷಕ ಬ್ರ್ಯಾಂಡ್ಗಳ ಪಟ್ಟಿಯಲ್ಲಿ ಅತ್ಯಂತ ಆಕರ್ಷಕ ಬ್ರಾಂಡ್ ಸ್ಥಾನ ಯಾವ ಸಂಸ್ಥೆಗೆ ಲಭಿಸಿದೆ?

ಅ) ಎಲ್ ಜಿ

ಆ) ಟೈಟಾನ್

ಇ) ಸ್ಯಾಮ್ ಸಂಗ್

ಈ) ಡೆಲ್

ಎಲ್ ಜಿ

2016ನೇ ಸಾಲಿನ ದೇಶದ ಸಾವಿರ ಆಕರ್ಷಕ ಬ್ರ್ಯಾಂಡ್ಗಳ ಪಟ್ಟಿಯಲ್ಲಿ ದಕ್ಷಿಣ ಕೊರಿಯಾದ ಎಲ್ಜಿ, ಭಾರತದ ಅತ್ಯಂತ ಆಕರ್ಷಕ ಬ್ರ್ಯಾಂಡ್ ಎಂಬ ಹೆಗ್ಗಳಿಕೆ ಸಂಪಾದಿಸಿದೆ. ಕಳೆದ ವರ್ಷ ಎರಡನೇ ಸ್ಥಾನದಲ್ಲಿದ್ದ ಎಲ್ಜಿ ಪ್ರಸಕ್ತ ವರ್ಷ ಅಗ್ರ ಸ್ಥಾನಕ್ಕೇರಿದೆ. ಡೆಲ್, ಸೋನಾಟಾ, ಟೈಟಾನ್, ವಿಪ್ರೊ, ಕಿಂಗ್ಫಿಷರ್ ಸೇರಿದಂತೆ ಬೆಂಗಳೂರು ಮೂಲದ 10 ಬ್ರ್ಯಾಂಡ್ಗಳು ಸ್ಥಾನಗಳಿಸಿವೆ. ದೇಶದ 16 ಪ್ರಮುಖ ನಗರಗಳಲ್ಲಿ ಮುಂಬೈ ಮೂಲದ ಟಿಆರ್ಎ ಖಾಸಗಿ ಸಂಶೋಧನಾ ಸಂಸ್ಥೆ ನಡೆಸಿದ ಸಮೀಕ್ಷಾ ವರದಿ ಈ ವಿಷಯವನ್ನು ಬಹಿರಂಗಪಡಿಸಿದೆ. 'ಸ್ವತಂತ್ರ ಮತ್ತು ವೈಜ್ಞಾನಿಕವಾಗಿ ಸಂಸ್ಥೆ ನಡೆಸಿದ ಮೂರನೇ ಸಮೀಕ್ಷೆಯಲ್ಲಿ ವಿವಿಧ ಸ್ತರದ 2,338 ಜನರನ್ನು ಸಂಪರ್ಕಿಸಿ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ.

62. ಇತ್ತೀಚೆಗೆ ನಿಧನರಾದ "ಕನು ಭಾಯ್" ರವರು ____?

ಅ) ವಿಜ್ಞಾನಿ

ಆ) ಪತ್ರಕರ್ತ

ಇ) ಕ್ರೀಡಾಪಟು

ಈ) ಲೇಖಕ

ವಿಜ್ಞಾನಿ

ಖ್ಯಾತ ವಿಜ್ಞಾನಿ ಮತ್ತು ಮಹಾತ್ಮ ಗಾಂಧಿ ಅವರ ಮೊಮ್ಮಗ ಕನುಭಾಯ್ ಗಾಂಧಿ (87) ಅವರು ನಿಧನರಾದರು. ಕನುಭಾಯ್ ಅವರು ಗಾಂಧೀಜಿ ಅವರ ಮೂರನೇ ಮಗ ರಾಮದಾಸ್ ಗಾಂಧಿ ಅವರ ಮಗ.ನಾಸಾದಲ್ಲಿ ವಿಜ್ಞಾನಿಯಾಗಿ ಸೇವೆ ಸಲ್ಲಿಸಿದ್ದ ಕಾನುಭಾಯ್ ಅವರು, ಬಾಲಕನಾಗಿದ್ದಾಗ ಗುಜರಾತ್ನ ದಂಡಿಯಲ್ಲಿ ಉಪ್ಪಿನ ಸತ್ಯಾಗ್ರಹದ ನೇತೃತ್ವ ವಹಿಸಿದ್ದ ಮಹಾತ್ಮ ಗಾಂಧಿ ಅವರ ಊರುಗೋಲನ್ನು ಎಳೆಯುತ್ತಿರುವ ಪ್ರಸಿದ್ಧ ಚಿತ್ರದಲ್ಲಿ ಕಾಣಿಸಿಕೊಂಡಿದ್ದರು.

www.karunaduexams.com

63. ಈ ಕೆಳಗಿನ ಯಾವ ದೇಶಗಳು “ಗಿಬ್ರಾಲ್ಟರ್ ಜಲಸಂಧಿ” ಯಿಂದ ಬೇರ್ಪಟ್ಟಿವೆ?

ಅ) ಮೊರಾಕೊ ಮತ್ತು ಸ್ಪೇನ್

ಆ) ಪೋರ್ಚುಗಲ್ ಮತ್ತು ಸ್ಪೇನ್

ಇ) ಅಲ್ಜೀರಿಯಾ ಮತ್ತು ಸ್ಪೇನ್

ಈ) ಪೋರ್ಚುಗಲ್ ಮತ್ತು ಅಲ್ಜೀರಿಯಾ

ಮೊರಾಕೊ ಮತ್ತು ಸ್ಪೇನ್

ಗಿಬ್ರಾಲ್ಟರ್ ಜಲಸಂಧಿ ಅಟ್ಲಾಂಟಿಕ್ ಮತ್ತು ಮೆಡಿಟೇರಿಯನ್ ಸಮುದ್ರವನ್ನು ಸಂಪರ್ಕಿಸುತ್ತದೆ ಹಾಗೂ ಮೊರಾಕೊ ಮತ್ತು ಸ್ಪೇನ್ ಅನ್ನು ಬೇರ್ಪಡಿಸುವ ಜಲಸಂಧಿಯಾಗಿದೆ.

64. ಯಾವ ರಾಜ್ಯದಲ್ಲಿ ಭಾರತೀಯ ಸೇನೆ “ಆಪರೇಷನ್ ಸ್ಕೂಲ್ ಚಲೋ” ಕಾರ್ಯಾಚರಣೆ ಆರಂಭಿಸಿದೆ?

ಅ) ರಾಜಸ್ತಾನ

ಆ) ಜಮ್ಮು ಮತ್ತು ಕಾಶ್ಮೀರ

ಇ) ಗುಜರಾತ್

ಈ) ಹರಿಯಾಣ

ಜಮ್ಮು ಮತ್ತು ಕಾಶ್ಮೀರ

ಭಾರತೀಯ ಸೇನೆ ದಕ್ಷಿಣ ಕಾಶ್ಮೀರದಲ್ಲಿ ಆಪರೇಷನ್ ಸ್ಕೂಲ್ ಚಲೋ ಎಂಬ ವಿಶಿಷ್ಟ ಕಾರ್ಯಾಚರಣೆಯನ್ನು ಆರಂಭಿಸಿದೆ. ಆಯ್ದ ಪ್ರದೇಶಗಳಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಕೋಚಿಂಗ್ ನೀಡುವುದು ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸುವುದು ಈ ಕಾರ್ಯಾಚರಣೆಯ ಉದ್ದೇಶ.

65. 2016 WTA ಎಲೈಟ್ ಸಿಂಗಲ್ಸ್ ಟ್ರೋಫಿಯಲ್ಲಿ ಪ್ರಶಸ್ತಿ ಗೆದ್ದವರು ಯಾರು?

ಅ) ಎಲಿನಾ ಸ್ವಿಟೊಲಿನ

ಆ) ವಿಕ್ಟೋರಿಯ ಅಜೆರೆಂಕಾ

ಇ) ಪೆಟ್ರಾ ಕ್ವಿಟೊವಾ

ಈ) ಮಾರ್ಟಿನಾ ಹಿಂಗೀಸ್

ಪೆಟ್ರಾ ಕ್ವಿಟೊವಾ

ಚೆಝ್ ರಿಪಬ್ಲಿಕ್ ನ ಪೆಟ್ರಾ ಕ್ವಿಟೊವಾ ರವರು 2016 ಡ್ಬ್ಲುಟಿಎ ಎಲೈಟ್ ಸಿಂಗಲ್ಸ್ ಟ್ರೋಫಿಯಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಉಕ್ರೇನ್ ನ ಎಲಿನಾ ಸ್ವಿಟೊಲಿನ ಅವರನ್ನು 6-4, 6-2 ಸೆಟ್ ಗಳಿಂದ ಸೋಲಿಸಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

www.karunaduexams.com

66. ಕೃತಕ ಮಳೆ ಅಥವಾ ಮೋಡ ಬಿತ್ತನೆಯಲ್ಲಿ ಬಳಸುವ ರಾಸಾಯನಿಕ _____?

ಅ) ಸಿಲ್ವರ್ ಐಯೋಡೈಡ್

ಆ) ಪೋಟಾಷಿಯಂ ಬ್ರೊಮೈಟ್

ಇ) ಸಿಲ್ವರ್ ಆಕ್ಸೈಡ್

ಈ) ಪೊಟಾಷಿಯಂ ಪರ್ಮ್ಯಾಗ್ನೆಟ್

ಸಿಲ್ವರ್ ಐಯೋಡೈಡ್

ಸಿಲ್ವರ್ ಐಯೋಡೈಡ್ ಅಥವಾ ಸಾಲಿಡ್ ಕಾರ್ಬನ್ ಡೈಆಕ್ಸೈಡ್ ಅನ್ನು ಕೃತಕ ಮಳೆ ಸೃಷ್ಟಿಗೆ ಬಳಸಲಾಗುತ್ತದೆ.

67. ದೇಶದಲ್ಲೆ ಮೊದಲ ಬಾರಿಗೆ ಪೌರ ಕಾರ್ಮಿಕರಿಗೆ ಬಿಸಿಯೂಟ ನೀಡುವ ಯೋಜನೆಯನ್ನು ಜಾರಿಗೆ ತಂದ ರಾಜ್ಯ ಯಾವುದು?

ಅ) ಮಹಾರಾಷ್ಟ್ರ

ಆ) ಪಂಜಾಬ್

ಇ) ಕರ್ನಾಟಕ

ಈ) ತಮಿಳುನಾಡು

ಕರ್ನಾಟಕ

ಪೌರ ಕಾರ್ಮಿಕರಿಗೆ ಮಧ್ಯಾಹ್ನದ ಬಿಸಿಯೂಟ ನೀಡುವ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಲನೆ ನೀಡಿದರು. ದೇಶದಲ್ಲೇ ಮೊದಲ ಬಾರಿಗೆ ಇಂತಹ ಯೋಜನೆಗೆ ಬಿಬಿಎಂಪಿಯಲ್ಲಿ ಚಾಲನೆ ನೀಡಲಾಗಿದೆ. 32 ಸಾವಿರ ಪೌರ ಕಾರ್ಮಿಕರಿಗೆ ಬಿಸಿಯೂಟ ಒದಗಿಸುವ ಯೋಜನೆ ಇದಾಗಿದೆ.

68. ಮಧ್ಯಪ್ರದೇಶ ಸರ್ಕಾರ ನೀಡುವ ಪ್ರತಿಷ್ಠಿತ ರಾಷ್ಟ್ರೀಯ ಕಾಳಿದಾಸ ಸಮ್ಮಾನ್ ಪ್ರಶಸ್ತಿ 2016-17 ಯಾರಿಗೆ ನೀಡಲಾಗುತ್ತಿದೆ?

ಅ) ಬನ್ಸಿ ಕೌಲ್

ಆ) ಅನುಪಮ ಖೇರ್

ಇ) ಸಬಿತಾ ಸಿಂಗ್

ಈ) ಗುರ್ಬಿನ್ ಕಾಂತ್

ಬನ್ಸಿ ಕೌಲ್

ರಾಷ್ಟ್ರೀಯ ಕಾಳಿದಾಸ ಸಮ್ಮಾನ್ 2016-17ನೇ ಸಾಲಿನ ಪ್ರಶಸ್ತಿಯನ್ನು ಬನ್ಸಿ ಕೌಲ್ ರವರಿಗೆ ನೀಡಲಾಗುತ್ತಿದೆ. 2015-16ನೇ ಸಾಲಿನ ಪ್ರಶಸ್ತಿಯನ್ನು ರಾಜ್ ಬಿಸರಿಯ ರವರಿಗೆ ನೀಡಲಾಗುತ್ತಿದೆ. ಕಾಳಿದಾಸ ಸಮ್ಮಾನ್ ಪ್ರಶಸ್ತಿ ಮಧ್ಯಪ್ರದೇಶದ ಪ್ರತಿಷ್ಠಿತ ಪ್ರಶಸ್ತಿಯಾಗಿದ್ದು

www.karunaduexams.com

ವಾರ್ಷಿಕವಾಗಿ ನೀಡಲಾಗುತ್ತದೆ. ಪ್ರಶಸ್ತಿಯು ರೂ 2 ಲಕ್ಷ ನಗದು ಮತ್ತು ಫಲಕವನ್ನು ಒಳಗೊಂಡಿದೆ.

69. ವಿಶ್ವ ಆರೋಗ್ಯ ಸಂಸ್ಥೆಯ ತಂಬಾಕು ನಿಯಂತ್ರಣ ಚೌಕಟ್ಟು ಒಪ್ಪಂದ ಪಾಲುದಾರ ದೇಶಗಳ ಸಮಾವೇಶ ಯಾವ ದೇಶದಲ್ಲಿ ಆರಂಭಗೊಂಡಿದೆ?

ಅ) ಚೀನಾ

ಆ) ಅಮೆರಿಕ

ಇ) ಭಾರತ

ಈ) ರಷ್ಯಾ

ಭಾರತ

ವಿಶ್ವ ಆರೋಗ್ಯಸಂಸ್ಥೆಯ ತಂಬಾಕು ನಿಯಂತ್ರಣ ಚೌಕಟ್ಟು ಒಪ್ಪಂದದ ಪಾಲುದಾರ ದೇಶಗಳ ಸಮಾವೇಶದ (WHO Framework Convention on *Tobacco* Control (WHO FCTC)) ಏಳನೇ ಅಧಿವೇಶನವನ್ನು ಭಾರತ ಆಯೋಜಿಸಿದೆ. ಈ ಸಮಾವೇಶ ಆರಂಭವಾಗಿದ್ದು, ಎಫ್‌ಸಿಟಿಸಿ ಒಪ್ಪಂದಕ್ಕೆ ಸಹಿ ಮಾಡುವ ಎಲ್ಲ ದೇಶಗಳ ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗವಹಿಸಿದ್ದಾರೆ. ಎಫ್‌ಸಿಟಿಸಿ ಎನ್ನುವುದು ಒಂದು ಸ್ವಯಂಸೇವಾ ಸಂಸ್ಥೆಯಾಗಿದ್ದು, ಇದು ತಂಬಾಕು ವಿರೋಧಿ ಹೋರಾಟದಲ್ಲಿ ಮುಂಚೂಣಿಯಲ್ಲಿರುವ ಸಂಸ್ಥೆಯಾಗಿದೆ. ಈ ಸಂಸ್ಥೆಯು ತಂಬಾಕು ನಿಯಂತ್ರಣ ನೀತಿಗಳಿಗೆ ಪ್ರತಿಪಾದಿಸುತ್ತಿರುವುದು ಮಾತ್ರವಲ್ಲದೇ ವಿವಿಧ ದೇಶಗಳು ಅನುಸರಿಸಬೇಕಾದ ನಿರ್ಬಂಧನ ವಿಧಾನಗಳ ಬಗ್ಗೆಯೂ ಸಲಹೆ ನೀಡುತ್ತದೆ.

70. ಜಾಗತಿಕ ವ್ಯವಹಾರ ಆಶಾದಾಯಕ ಸೂಚ್ಯಂಕ (Global Business Optimism Index)ನಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ?

ಅ) ಒಂದನೇ ಸ್ಥಾನ

ಆ) ಎರಡನೇ ಸ್ಥಾನ

ಇ) ಮೂರನೇ ಸ್ಥಾನ

ಈ) ನಾಲ್ಕನೇ ಸ್ಥಾನ

ಎರಡನೇ ಸ್ಥಾನ

ಇತ್ತೀಚೆಗೆ ಬಿಡುಗಡೆಗೊಂಡ ಗ್ರಾಂಟ್ ಥೋರ್ನಟನ್ ಇಂಟರ್ನ್ಯಾಶನಲ್ ಬ್ಯುಸಿನೆಸ್ ವರದಿ ಪ್ರಕಾರ ಜಾಗತಿಕ ವ್ಯವಹಾರ ಆಶಾದಾಯಕ ಸೂಚ್ಯಂಕದಲ್ಲಿ (ಜುಲೈ-ಸೆಪ್ಟೆಂಬರ್ ಅವಧಿ) ಭಾರತ ಎರಡನೇ ಸ್ಥಾನವನ್ನು ಪಡೆದುಕೊಂಡಿದೆ. ಏಪ್ರಿಲ್-ಜೂನ್ ಅವಧಿಯಲ್ಲಿ ಭಾರತ ಮೂರನೇ ಸ್ಥಾನದಲ್ಲಿತ್ತು. ಫಿಲಿಫೈನ್ಸ್ ರಾಷ್ಟ್ರವನ್ನು ಹಿಂದಿಕ್ಕೆ ಎರಡನೇ ಸ್ಥಾನಕ್ಕೆ ಜಿಗಿದಿದೆ.

www.karunaduexams.com

71. ಕೇರಳ ಸರ್ಕಾರದ ನಿಧಿ ದತ್ತಿ ಮತ್ತು ಸಲಹಾ ಆಯೋಗ (Fund Trustee and Advisory Commission) ಅಧ್ಯಕ್ಷರಾಗಿ ಯಾರು ನೇಮಕಗೊಂಡಿದ್ದಾರೆ?

ಅ) ವಿನೋದ್ ರಾಯ್

ಆ) ರಘುರಾಮ್ ರಾಜನ್

ಇ) ಶಶಿಕಾಂತ್ ಶರ್ಮಾ

ಈ) ಸುದೀಂದ್ರ ಚಾವ್ಹಣ್

ವಿನೋದ್ ರಾಯ್

ಮಾಜಿ ನಿವೃತ್ತ ಮಹಾಲೇಖಪಾಲ ವಿನೋದ್ ರಾಯ್ ರವರನ್ನು ಕೇರಳದ ನಿಧಿ ದತ್ತಿ ಮತ್ತು ಸಲಹಾ ಆಯೋಗದ ಅಧ್ಯಕ್ಷರನ್ನಾಗಿ ನೇಮಕಮಾಡಲಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್ನ ಮಾಜಿ ಡೆಪ್ಯೂಟಿ ಗವರ್ನರ್ ಉಷಾ ಥೋರಟ್ ಮತ್ತು ನಬಾರ್ಡ್ ಮಾಜಿ ಅಧ್ಯಕ್ಷ ಪ್ರಕಾಶ್ ಬಕ್ಷಿ ರವರನ್ನು ಆಯೋಗದ ಸದಸ್ಯರಾಗಿ ನೇಮಕ ಮಾಡಲಾಗುವುದು.

72. ಅಮೆರಿಕ ಶಾಸಕಾಂಗದ ಮೇಲ್ಮನೆ ಸೆನೆಟ್ ಗೆ ಆಯ್ಕೆಯಾದ ಮೊದಲ ಭಾರತೀಯ ಸಂಜಾತೆ ಯಾರು?

ಅ) ಪ್ರಮೀಳಾ ಜಯಪಾಲ್

ಆ) ಕಮಲಾ ಹ್ಯಾರೀಸ್

ಇ) ಉಷಾ ಥೋರಟ್

ಈ) ರಾಧಾ ಜಯಚಂದ್ರನ್

ಕಮಲಾ ಹ್ಯಾರೀಸ್

ಭಾರತ ಸಂಜಾತೆ ಕ್ಯಾಲಿಫೋರ್ನಿಯದ ಅಟಾರ್ನಿ ಜನರಲ್ ಕಮಲಾ ಹ್ಯಾರಿಸ್ ಅವರು ಅಮೆರಿಕಾದ ಸೆನೆಟರ್ ಆಗಿ ಆಯ್ಕೆಯಾಗುವುದರೊಂದಿಗೆ ಇತಿಹಾಸ ಬರೆದಿದ್ದಾರೆ. ತವರು ರಾಜ್ಯ ಕ್ಯಾಲಿಫೋರ್ನಿಯದಲ್ಲಿ ನಡೆದ ಚುನಾವಣೆಯಲ್ಲಿ ಪ್ರತಿಸ್ಪರ್ಧಿ ಡೆಮಾಕ್ರಟಿಕ್ ಪಕ್ಷದ ಲೊರೆಟ್ಟಾ ಸ್ಯಾಂಚೆಝ್ ವಿರುದ್ಧ 34.8 ಶೇ. ಅಂಕಗಳ ಅಂತರದಿಂದ ಗೆಲುವು ಸಾಧಿಸಿರುವ 51ರ ಪ್ರಾಯದ ಹ್ಯಾರಿಸ್ 1,904,714 ಮತಗಳನ್ನು ಪಡೆದಿದ್ದರು. ಹ್ಯಾರಿಸ್ ಅಮೆರಿಕದ ಶಾಸಕಾಂಗದ ಮೇಲ್ಮನೆ ಸೆನೆಟ್ಗೆ ಆಯ್ಕೆಯಾದ ಮೊದಲ ಭಾರತೀಯ ಸಂಜಾತೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

73. 2016 ರಿಪೋರ್ಟರ್ಸ್ ವಿಥೌಟ್ ಬಾರ್ಡರ್ ನೀಡುವ ಟಿವಿ5 ಮೊಂಡೆ ಪತ್ರಿಕಾ ಸ್ವಾತಂತ್ರ್ಯ ಪ್ರಶಸ್ತಿಗೆ ಯಾರನ್ನು ಆಯ್ಕೆಮಾಡಲಾಗಿದೆ?

ಅ) ಸೈಫ್ ಅಲಿ ಖಾನ್

ಆ) ಹದಿ ಅಬ್ದುಲ್ಲಾ

www.karunaduexams.com

ಇ) ದಿಯಾ ಸಿಂಗ್

ಈ) ಹಫೀಝ್ ಖಾನ್

ಹದಿ ಅಬ್ದುಲ್ಲಾ

ಸಿರಿಯಾದ ಸ್ವತಂತ್ರ ಪತ್ರಕರ್ತ ಹದಿ ಅಬ್ದುಲ್ಲಾ ರವರನ್ನು 2016 ರಿಪೋರ್ಟರ್ಸ್ ವಿಥೌಟ್ ಬಾರ್ಡರ್ ನೀಡುವ ಟಿವಿ5 ಮೊಂಡೆ ಪತ್ರಿಕಾ ಸ್ವಾತಂತ್ರ್ಯ ಪ್ರಶಸ್ತಿ (2016 Reporters Without Borders (RSF) – TV5 Monde Press Freedom Prize)ಗೆ ಆಯ್ಕೆಮಾಡಲಾಗಿದೆ. ಯುದ್ಧ ಪೀಡಿತ ಸಿರಿಯಾದ ಅತ್ಯಂತ ಅಪಾಯಕಾರಿ ಪ್ರದೇಶಗಳಲ್ಲಿ ಅಂಜದೆ ವರದಿ ಮಾಡಿದಕ್ಕಾಗಿ ಅವರನ್ನು ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಈ ಪ್ರದೇಶಗಳಿಗೆ ಭೇಟಿ ನೀಡಲು ಪಾಶ್ಚಿಮಾತ್ಯ ಪತ್ರಕರ್ತರು ಹಿಂದೇಟು ಹಾಕುತ್ತಿರುವಾಗ ಅದನ್ನು ಲೆಕ್ಕಿಸದೆ ಅಬ್ದುಲ್ಲಾ ಅವರು ಜೀವದ ಹಂಗು ತೊರೆದು ವರದಿ ನೀಡಿದ್ದರು.

74. ರಣಜಿ ಟ್ರೋಫಿಯಲ್ಲಿ ವೇಗದ ಶತಕ ಬಾರಿಸಿ ಹೊಸ ದಾಖಲೆ ಬರೆದ ಕ್ರಿಕೆಟ್ ಆಟಗಾರ ಯಾರು?

ಅ) ರಾಬಿನ್ ಉತ್ತಪ್ಪ

ಆ) ರಿಷಬ್ ಪಂತ್

ಇ) ಗೌತಮ್ ಗಂಭೀರ್

ಈ) ಅಂಬಾಟಿ ರಾಯುಡು

ರಿಷಬ್ ಪಂತ್

ದೆಹಲಿ ತಂಡದ ವಿಕೆಟ್ಕೀಪರ್-ಬ್ಯಾಟ್ಸ್ಮನ್ ರಿಷಬ್ ಪಂತ್ ರಣಜಿ ಟ್ರೋಫಿಯಲ್ಲಿ ವೇಗದ ಶತಕವನ್ನು ಬಾರಿಸುವ ಮೂಲಕ ಇತಿಹಾಸದ ಪುಟದಲ್ಲಿ ಹೊಸ ದಾಖಲೆ ಬರೆದಿದ್ದಾರೆ. ಜಾರ್ಖಂಡ್ ವಿರುದ್ದದ ರಣಜಿ ಟ್ರೋಫಿಯ ನಾಲ್ಕನೆ ದಿನದಾಟದಲ್ಲಿ ದೆಹಲಿಯ ಪರ ಎರಡನೆ ಇನಿಂಗ್ಸ್ನಲ್ಲಿ ಬ್ಯಾಟಿಂಗ್ ಮಾಡಿದ ಪಂತ್ ಕೇವಲ 48 ಎಸೆತಗಳಲ್ಲಿ ಶತಕ ಪೂರೈಸಿ ಪ್ರಥಮ ದರ್ಜೆ ಕ್ರಿಕೆಟ್ನಲ್ಲಿ ವೇಗದ ಶತಕ ಬಾರಿಸಿದರು. 48 ಎಸೆತಗಳಲ್ಲಿ ಶತಕ ಪೂರೈಸಿದ ಪಂತ್ ತಮಿಳುನಾಡಿನ ಮಾಜಿ ಆರಂಭಿಕ ಆಟಗಾರ ಚಂದ್ರಶೇಖರ್ ಹಾಗೂ ಒಡಿಶಾದ ನಮನ್ ಓಜಾ ದಾಖಲೆಯನ್ನು ಮುರಿದರು. 1988-89ರ ಆವೃತ್ತಿಯಲ್ಲಿ ಚಂದ್ರಶೇಖರ್ ಶೇಷ ಭಾರತದ ವಿರುದ್ದ 56 ಎಸೆತಗಳಲ್ಲಿ ಶತಕ ಪೂರೈಸಿದ್ದರು. 2015ರಲ್ಲಿ ನಮನ್ ಓಜಾ ರಣಜಿ ಟ್ರೋಫಿಯಲ್ಲಿ 69 ಎಸೆತಗಳಲ್ಲಿ ಶತಕ ಪೂರೈಸಿದ್ದರು.

www.karunaduexams.com

75. ಇತ್ತೀಚೆಗೆ ನಿಧನರಾದ “ಗಿರೀಶ್ ನಿಕಂ” ಯಾವ ಕ್ಷೇತ್ರಕ್ಕೆ ಸಂಬಂಧಿಸಿದ್ದಾರೆ?

ಅ) ಪತ್ರಿಕೋದ್ಯಮ

ಆ) ವಿಜ್ಞಾನ

ಇ) ಸಾಹಿತ್ಯ

ಈ) ಕ್ರೀಡೆ

ಪತ್ರಿಕೋದ್ಯಮ

ಹಿರಿಯ ಪತ್ರಕರ್ತ ಹಾಗೂ ರಾಜ್ಯಸಭೆ ಟಿವಿ ನಿರೂಪಕ ಗಿರೀಶ್ ನಿಕಂ (59) ಅವರು ತೀವ್ರ ಹೃದಯಾಘಾತದಿಂದ ನಿಧನ ಹೊಂದಿದರು. ಮೂಲತಃ ಮೈಸೂರಿನವರಾದ ನಿಕಂ 'ಸ್ಟಾರ್ ಆಫ್ ಮೈಸೂರು' ಪತ್ರಿಕೆ ಮೂಲಕ ವೃತ್ತಿ ಆರಂಭಿಸಿದ್ದರು. ಅನಂತರ 'ಇಂಡಿಯನ್ ಎಕ್ಸ್ಪ್ರೆಸ್' ಪತ್ರಿಕೆ ಸೇರಿದ್ದರು. ರಾಜ್ಯಸಭಾ ಟಿವಿಗೆ ಸೇರುವ ಮುನ್ನ ಆಂಗ್ಲ ಮಾಧ್ಯಮ ಸಂಸ್ಥೆಗಳಾದ 'ಇಂಡಿಯಾ ಟುಡೆ', 'ಡೆಕ್ಕನ್ ಕ್ರಾನಿಕಲ್', 'ನ್ಯೂಸ್ ಟುಡೆ'ಯಲ್ಲೂ ಸೇವೆ ಸಲ್ಲಿಸಿದ್ದರು. ಎರಡು ದಶಕದಿಂದ ಅವರು ದೆಹಲಿಯಲ್ಲಿ ನೆಲೆಸಿದ್ದರು. ರಾಜ್ಯಸಭಾ ಟಿ.ವಿಯಲ್ಲಿ ಅವರು ನಡೆಸುತ್ತಿದ್ದ 'ಬಿಗ್ ಪಿಕ್ಚರ್ ಷೋ' ಜನಪ್ರಿಯವಾಗಿತ್ತು.

76. ವಿಶ್ವದ ಮೊದಲ ಹೈಡ್ರೋಜನ್ ಚಾಲಿತ ಮತ್ತು ಶೂನ್ಯ ಹೊರಸೂಸುವಿಕೆ ಪ್ರಯಾಣಿಕರ ರೈಲನ್ನು ಯಾವ ದೇಶದಲ್ಲಿ ಪರಿಚಯಿಸಲಾಯಿತು?

ಅ) ಜಪಾನ್

ಆ) ಇಸ್ರೇಲ್

ಇ) ಜರ್ಮನಿ

ಈ) ರಷ್ಯಾ

ಜರ್ಮನಿ

ವಿಶ್ವದ ಮೊದಲ ಹೈಡ್ರೋಜನ್ ಚಾಲಿತ ಮತ್ತು ಶೂನ್ಯ ಹೊರಸೂಸುವಿಕೆ ಪ್ರಯಾಣಿಕರ ರೈಲನ್ನು ಜರ್ಮನಿಯಲ್ಲಿ ಪರಿಚಯಿಸಲಾಗಿದೆ. ಈ ನೂತನ ರೈಲಿನ ಹೆಸರು ಕೊರಡಿಯ ಐಲಿಂಟ್ (Coradia ILint). ಈ ಪರಿಸರ ಸ್ನೇಹಿ ರೈಲನ್ನು ಫ್ರಾನ್ಸ್ ನ ಅಲ್ಸ್ಟೋಮ್ ಸಂಸ್ಥೆ ಅಭಿವೃದ್ದಿಪಡಿಸಿದೆ. ಈ ರೈಲು ಕೇವಲ ಹೆಚ್ಚುವರಿ ಹಬೆ ಮತ್ತು ಸಾಂದ್ರಿಕೃತ ನೀರನ್ನು ವಾತಾವರಣಕ್ಕೆ ಹೊರಸೂಸುತ್ತದೆ.

www.karunaduexams.com

77. 47ನೇ ಭಾರತೀಯ ಅಂತಾರಾಷ್ಟ್ರೀಯ ಸಿನಿಮೋತ್ಸವದಲ್ಲಿ ನಿರ್ದೇಶಕರ ಪದಾರ್ಪಣೆ ಅತ್ಯುತ್ತಮ ಚಿತ್ರ ವಿಭಾಗದಲ್ಲಿ ಸ್ಪರ್ಧಿಸುತ್ತಿರುವ ಭಾರತದ ಏಕೈಕ ಚಿತ್ರ ಯಾವುದು?

ಅ) ಕೋರ್ಟ್

ಆ) ಹರಿಕಥಾ ಪ್ರಸಂಗ

ಇ) ಸೈರೆಟ್

ಈ) ಬಾಹುಬಲಿ

ಹರಿಕಥಾ ಪ್ರಸಂಗ

ಕನ್ನಡದ ನಿರ್ದೇಶಕಿ ಅನನ್ಯಾ ಕಾಸರವಳ್ಳಿ ಅವರ 'ಹರಿಕಥಾ ಪ್ರಸಂಗ' ಚಿತ್ರವು 47ನೇ ಭಾರತೀಯ ಅಂತರರಾಷ್ಟ್ರೀಯ ಸಿನಿಮೋತ್ಸವದಲ್ಲಿ (ಐಎಫ್‌ಎಫ್‌ಐ) ನಿರ್ದೇಶಕರ ಪದಾರ್ಪಣೆಯ ಅತ್ಯುತ್ತಮ ಚಿತ್ರ ವಿಭಾಗದ ಪ್ರಶಸ್ತಿಗಾಗಿ ಆರು ಅಂತರರಾಷ್ಟ್ರೀಯ ಸಿನಿಮಾಗಳೊಂದಿಗೆ ಸ್ಪರ್ಧಿಸಲಿದೆ.ಪ್ರತಿಷ್ಠಿತ ರಜತ ಮಯೂರ, ಪ್ರಮಾಣ ಪತ್ರ ಮತ್ತು ₹ 10 ಲಕ್ಷ ನಗದು ಇರುವ ಈ ಸ್ಪರ್ಧಾ ವಿಭಾಗದಲ್ಲಿ, 'ಒನ್ ವೀಕ್ ಆಯಂಡ್ ಎ ಡೇ', 'ರಾರಾ', 'ಟ್ರಾಮೊಂಟೇನ್', 'ಟೂ ಬರ್ಡ್ಸ್, ಒನ್ ಸ್ಟೋನ್', 'ವೂಲ್ಫ್ ಆಯಂಡ್ ಶೀಪ್ ಮತ್ತು 'ವ್ರಾಥ್' ಚಿತ್ರಗಳೊಂದಿಗೆ 'ಹರಿಕಥಾ ಪ್ರಸಂಗ ಪೈಪೋಟಿ ನಡೆಸಲಿದೆ. 'ಹರಿಕಥಾ ಪ್ರಸಂಗ' ಅನನ್ಯಾ ಕಾಸರವಳ್ಳಿ ಅವರ ನಿರ್ದೇಶನದ ಮೊದಲ ಸಿನಿಮಾವಾಗಿದ್ದು, ನಿರ್ದೇಶಕರ ಪದಾರ್ಪಣೆಯ ಅತ್ಯುತ್ತಮ ಚಿತ್ರ ವಿಭಾಗದಲ್ಲಿ ಸ್ಪರ್ಧಿಸುತ್ತಿರುವ ಭಾರತದ ಏಕೈಕ ಚಿತ್ರವಾಗಿದೆ.

78. ಯಾವ ರಾಜ್ಯದಲ್ಲಿ ಅಂತಾರಾಷ್ಟ್ರೀಯ ಕೃಷಿ ತಂತ್ರಜ್ಞಾನ ಮೇಳ (ಗ್ರಾಮ್-2016)ಗೆ ಚಾಲನೆ ನೀಡಲಾಯಿತು?

ಅ) ಗುಜರಾತ್

ಆ) ರಾಜಸ್ಥಾನ

ಇ) ಮಧ್ಯ ಪ್ರದೇಶ

ಈ) ಒಡಿಶಾ

ರಾಜಸ್ಥಾನ

ಅಂತಾರಾಷ್ಟ್ರೀಯ ಕೃಷಿ ತಂತ್ರಜ್ಞಾನ ಮೇಳ (Global Rajastan Agritech Meet-2016) ರಾಜಸ್ಥಾನದಲ್ಲಿ ಚಾಲನೆ ನೀಡಲಾಯಿತು.

79. 2016 ಬ್ರಿಕ್ಸ್ ಸಂವಹನ ಸಚಿವರ ಸಭೆ (BRICS Communication Ministers) ಯಾವ ನಗರದಲ್ಲಿ ನಡೆಯಲಿದೆ?

ಅ) ಪುಣೆ

ಆ) ಬೆಂಗಳೂರು

ಇ) ಮೈಸೂರು



www.karunaduexams.com

ಈ) ಹೈದ್ರಾಬಾದ್

ಬೆಂಗಳೂರು

ಎರಡನೇ ಬ್ರಿಕ್ಸ್ ಸಂವಹನ ಸಚಿವರ ಸಭೆ ಬೆಂಗಳೂರಿನಲ್ಲಿ ನವೆಂಬರ್ 10 ರಂದು ನಡೆಯಲಿದೆ. ರಾಜ್ಯ ಖಾತೆ ಸಂಪರ್ಕ ಸಚಿವ ಮನೋಜ್ ಸಿನ್ಹಾ ರವರು ಸಭೆಯ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಎರಡು ದಿನಗಳ ಸಭೆಯಲ್ಲಿ ಬ್ರಿಕ್ಸ್ ರಾಷ್ಟ್ರಗಳ ಉನ್ನತ ಮಟ್ಟದ ಅಧಿಕಾರಿಗಳು ಈ ಸಭೆಯಲ್ಲಿ ಭಾಗವಹಿಸಲಿದ್ದು, ದೂರಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಪರಸ್ಪರ ಸಹಕಾರದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗುವುದು.

80. ದೇಶದ ಮೊದಲ ಬ್ಯಾಂಕಿಂಗ್ ರೋಬಟ್ ಯಾವ ನಗರದಲ್ಲಿ ಕಾರ್ಯಾರಂಭ ಮಾಡಿದೆ?

ಅ) ಮುಂಬೈ

ಆ) ಚೆನ್ನೈ

ಇ) ಕೊಲ್ಕತ್ತ

ಈ) ಬೆಂಗಳೂರು

ಚೆನ್ನೈ

ದೇಶದ ಮೊದಲ ಬ್ಯಾಂಕಿಂಗ್ ರೋಬೋಟ್ ಚೆನ್ನೈ ನಲ್ಲಿ ಕಾರ್ಯಾರಂಭ ಮಾಡಿದೆ. ಈ ರೋಬೋಟ್ಗೆ ಲಕ್ಷ್ಮಿ ಎಂದು ಹೆಸರಿಡಲಾಗಿದೆ. ಚೆನ್ನೈ ನ ಸಿಟಿ ಯೂನಿಯನ್ ಬ್ಯಾಂಕ್ ಕೃತಕ ಬುದ್ದಿಮತ್ತೆ ಹೊಂದಿರುವ ರೊಬೋಟ್ ಮೂಲಕ ಗ್ರಾಹಕರಿಗೆ ಹಲವು ಮಾಹಿತಿಯನ್ನು ನೀಡುವ ಪ್ರಯೊಗಕ್ಕೆ ಮುಂದಾಗಿದೆ. ಬ್ಯಾಂಕಿಂಗ್ ರೊಬೋಟ್ ಲಕ್ಷ್ಮೀ ತನ್ನ ಬಳಿ ಮಾಹಿತಿ ಕೇಳುವ ಗ್ರಾಹಕರಿಗೆ ಖಾತೆಯಲ್ಲಿರುವ ಮೊತ್ತ, ಬಡ್ಡಿ ದರ, ಗೃಹ ಸಾಲ, ಕೋರ್ ಬ್ಯಾಂಕಿಂಗ್ ಸೊಲ್ಯೂಷನ್ಸ್ ಸೇರಿದಂತೆ ಒಟ್ಟು 125 ವಿಷಯಗಳ ಬಗ್ಗೆ ಮಾಹಿತಿ ನೀಡುವ ಸಾಮರ್ಥ್ಯ ಹೊಂದಿದೆ.

81. ಅಮೆರಿಕದ 45ನೇ ಅಧ್ಯಕ್ಷರಾಗಿ ಆಯ್ಕೆಯಾದ "ಡೋನಾಲ್ಡ್ ಟ್ರಂಪ್" ರವರ ಪಕ್ಷದ ಹೆಸರೇನು?

ಅ) ಡೆಮಾಕ್ರಟಿಕ್ ಪಕ್ಷ

ಆ) ರಿಪಬ್ಲಿಕನ್ ಪಕ್ಷ

ಇ) ಲಿಬರ್ಟೆಯನ್ ಪಕ್ಷ

ಈ) ಗ್ರೀನ್ ಪಕ್ಷ

ರಿಪಬ್ಲಿಕನ್ ಪಕ್ಷ

www.karunaduexams.com

ರಿಪಬ್ಲಿಕನ್ ಪಕ್ಷದ ಡೊನಾಲ್ಡ್ ಟ್ರಂಪ್ ಅಮೆರಿಕದ ಹೊಸ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇದರೊಂದಿಗೆ ಡೆಮಾಕ್ರಟಿಕ್ ಪಕ್ಷದ ಎಂಟು ವರ್ಷದ ಆಡಳಿತ ಅಂತ್ಯವಾಗಲಿದೆ. ಟ್ರಂಪ್ ಅವರು ಅಮೆರಿಕದ 45ನೇ ಅಧ್ಯಕ್ಷರು.

82. ಅಮೆರಿಕದ ಸೆನೆಟ್ಗೆ ಆಯ್ಕೆಯಾದ ಭಾರತೀಯ ಮೂಲದವರು ಮತ್ತು ಅವರ ರಾಜ್ಯದಲ್ಲಿ ತಪ್ಪು ಹೊಂದಾಣಿಕೆಯಾಗಿರುವುದನ್ನು ಗುರುತಿಸಿ:

ಅ) ಕಮಲಾ ಹ್ಯಾರಿಸ್ - ಕ್ಯಾಲಿಫೋರ್ನಿಯಾ

ಆ) ರಾಜಾ ಕೃಷ್ಣಮೂರ್ತಿ - ಇಲಿನಾಯ್

ಇ) ಪ್ರಮೀಳಾ ಜಯಪಾಲ್ - ಫ್ಲೋರಿಡಾ

ಈ) ರೊ ಖನ್ನಾ – ಕ್ಯಾಲಿಫೋರ್ನಿಯಾ

ಪ್ರಮೀಳಾ ಜಯಪಾಲ್ – ಫ್ಲೋರಿಡಾ

ಭಾರತ ಮೂಲದ ಪ್ರಮೀಳಾ ಜಯಪಾಲ್ ರವರು ವಾಷಿಂಗ್ಟನ್ ನಿಂದ ಅಮೆರಿಕಾದ ಸೆನೆಟ್ಗೆ ಆಯ್ಕೆಯಾಗಿದ್ದಾರೆ.

83. ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ILO)ಯ ನೂತನ ಡೈರೆಕ್ಟರ್-ಜನರಲ್ ಆಗಿ ಯಾರು ನೇಮಕಗೊಂಡಿದ್ದಾರೆ?

ಅ) ರೋಜರ್ ಮಾರ್ವಿನ್

ಆ) ಸ್ಟೀಫನ್ ಸ್ಮಿತ್

ಇ) ಗೈ ರೈಡರ್

ಈ) ಮೈಕಲ್ ರೋಜರ್

ಗೈ ರೈಡರ್

ಗೈ ರೈಡರ್ (Guy Ryder) ರವರು ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಡೈರೆಕ್ಟರ್ ಜನರಲ್ ಆಗಿ ಪುನರ್ ನೇಮಕಗೊಂಡಿದ್ದಾರೆ. ರೈಡರ್ ಅವರ ಎರಡನೇ ಅವಧಿ ಅಕ್ಟೋಬರ್ 1, 2017 ರಿಂದ ಆರಂಭಗೊಳ್ಳಲಿದ್ದು, ಮುಂದಿನ ಐದು ವರ್ಷಗಳ ಕಾಲ ಹುದ್ದೆಯಲ್ಲಿ ಕಾರ್ಯನಿರ್ವಹಿಸಲಿರುವರು. ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಕೇಂದ್ರ ಕಚೇರಿ ಸ್ವಿಟ್ಜರ್ಲ್ಯಾಂಡ್, ಜಿನೀವಾದಲ್ಲಿದೆ.

84. 2016 ಏಷ್ಯಾ ಫೆಸಿಫಿಕ್ ಆರ್ಥಿಕ ಸಹಕಾರ (APEC) ಸಭೆಯ ಆತಿಥ್ಯವನ್ನು ವಹಿಸಲಿರುವ ರಾಷ್ಟ್ರ ಯಾವುದು?

ಅ) ಭಾರತ

ಆ) ಜಪಾನ್

ಇ) ಪೆರು

www.karunaduexams.com

ಈ) ಚೀನಾ

ಪೆರು

2016 ಏಷ್ಯಾ ಫೆಸಿಫಿಕ್ ಆರ್ಥಿಕ ಸಹಕಾರ ಸಭೆ ಪೆರುವಿನಲ್ಲಿ ನವೆಂಬರ್ 19-20 ರಂದು ನಡೆಯಲಿದೆ. ಗುಣಮಟ್ಟ ಬೆಳವಣಿಗೆ ಮತ್ತು ಮಾನವ ಅಭಿವೃದ್ದಿ ಇದು ಈ ಸಭೆಯ ಧ್ಯೇಯವಾಕ್ಯ.

85. ಕೇಂದ್ರ ಸರ್ಕಾರ ಇತ್ತೀಚೆಗೆ ಜಾರಿಗೊಳಿಸಿದ "ಪ್ರಧಾನ ಮಂತ್ರಿ ಯುವ ಯೋಜನಾ" ಯಾವುದಕ್ಕೆ ಸಂಬಂಧಿಸಿದೆ?

ಅ) ಅಲ್ಪಸಂಖ್ಯಾತರು

ಆ) ವಾಣಿಜೋದ್ಯಮ

ಇ) ಕ್ರೀಡೆ

ಈ) ಬುಡಕಟ್ಟು ಜನರ ಶಿಕ್ಷಣ

ವಾಣಿಜ್ಯೋದ್ಯಮ

ಕೇಂದ್ರ ಕೌಶಲ್ಯ ಅಭಿವೃದ್ದಿ ಮತ್ತು ವಾಣಿಜ್ಯೋದ್ಯಮ ಸಚಿವಾಲಯ ಪ್ರಧಾನ ಮಂತ್ರಿ ಯುವ ಯೋಜನೆ ಯನ್ನು ಜಾರಿಗೊಳಿಸಿದೆ. ವಾಣಿಜ್ಯೋದ್ಯಮ ಶಿಕ್ಷಣ ಮತ್ತು ತರಭೇತಿ ನೀಡುವ ಸಲುವಾಗಿ ಈ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಯೋಜನೆ ಐದು ವರ್ಷ ಜಾರಿಯಲ್ಲಿ ಇರಲಿದ್ದು, 3050 ಸಂಸ್ಥೆಗಳ ಮೂಲಕ 7 ಲಕ್ಷ ವಿದ್ಯಾರ್ಥಿಗಳಿಗೆ ವಾಣಿಜ್ಯೋದ್ಯಮ ಶಿಕ್ಷಣ ಮತ್ತು ತರಭೇತಿಯನ್ನು ನೀಡಲಾಗುವುದು.

86. ಎಲಿಫೆಂಟಾ ಗುಹೆಗಳು ಈ ಕೆಳಗಿನ ಯಾವ ಸಂಸ್ಥಾನಕ್ಕೆ ಸಂಬಂಧಿಸಿದೆ?

ಅ) ಚಾಲುಕ್ಯ

ಆ) ಚೋಳ

ಇ) ರಾಷ್ಟ್ರಕೂಟ

ಈ) ಪಲ್ಲವ

ರಾಷ್ಟ್ರಕೂಟ

87. ಟಾಟಾ ಕನ್ಸಲ್ಟೆನ್ಸಿ ಸರ್ವೀಸ್ ನ ಅಧ್ಯಕ್ಷರಾಗಿ ಯಾರು ನೇಮಕಗೊಂಡಿದ್ದಾರೆ?

ಅ) ಇಷಾತ್ ಹುಸೇನ್

ಆ) ಅನುರಾಗ್ ಭಾರ್ಗವಿ

ಇ) ಅರ್ಜುನ್ ಸಿಂಗ್

ಈ) ರತನ್ ಟಾಟಾ

www.karunaduexams.com

ಇಷಾತ್ ಹುಸೇನ್

ಇಷಾತ್ ಹುಸೇನ್ ಅವರನ್ನು ಟಾಟಾ ಸಮೂಹದ ಅತ್ಯಂತ ಯಶಸ್ವೀ ಕಂಪೆನಿಯಾಗಿರುವ ಟಿಸಿಎಸ್ ಗೆ ಅಧ್ಯಕ್ಷರನ್ನಾಗಿ ಟಾಟಾ ಸನ್ಸ್ ನೇಮಕ ಮಾಡಿದೆ. ಹುಸೇನ್ ಅವರು ಕಂಪೆನಿಯ ಅಧ್ಯಕ್ಷರಾಗಿ, ಮುಂದಿನ ಹೊಸ ಅಧ್ಯಕ್ಷರನ್ನು ಇವರ ಸ್ಥಾನದಲ್ಲಿ ನೇಮಕಾತಿ ಮಾಡುವ ತನಕ, ಕಾರ್ಯಭಾರ ನಿರ್ವಹಿಸುವರೆಂದು ಟಿಸಿಎಸ್ ಹೇಳಿದೆ.

88. ಜೊಹರ್ ಜಲಸಂಧಿ ಈ ರಾಷ್ಟ್ರಗಳನ್ನು ಬೇರ್ಪಡಿಸಿದೆ _____?

ಅ) ಕೊರಿಯಾ ಮತ್ತು ಜಪಾನ್

ಆ) ಇಂಡೋನೇಷಿಯಾ ಮತ್ತು ಭಾರತ

ಇ) ಸಿಂಗಾಪುರ ಮತ್ತು ಮಲೇಷಿಯಾ

ಈ) ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್

ಸಿಂಗಾಪುರ ಮತ್ತು ಮಲೇಷಿಯಾ

89. ಯಾವ ನಗರದಲ್ಲಿ 2016 ವಿಶ್ವ ಚೆಸ್ ಚಾಂಪಿಯನ್ ಷಿಪ್ ನಡೆಯಲಿದೆ?

ಅ) ಬರ್ಲಿನ್

ಆ) ನ್ಯೂಯಾರ್ಕ್

ಇ) ಸಿಡ್ನಿ

ಈ) ನವದೆಹಲಿ

ನ್ಯೂಯಾರ್ಕ್

2016 ವಿಶ್ವ ಚೆಸ್ ಚಾಂಪಿಯನ್ ಷಿಪ್ ನ್ಯೂಯಾರ್ಕ್ ನಲ್ಲಿ ನಡೆಯಲಿದೆ. ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲೆಸನ್ ಮತ್ತು ಸೆರ್ಗಿ ಕರ್ಜಕಿನ್ ಪ್ರಶಸ್ತಿಗೆ ಸೆಣಸಲಿದ್ದಾರೆ.

90. ವಿಶ್ವ ಅಂಧರ ಟ್ವೆಂಟಿ-20 ಕ್ರಿಕೆಟ್ ಟೂರ್ನಿಯ ಪ್ರಚಾರ ರಾಯಭಾರಿಯಾಗಿ ಯಾರು ನೇಮಕಗೊಂಡಿದ್ದಾರೆ?

ಅ) ಸಚಿನ್ ತೆಂಡೂಲ್ಕರ್

ಆ) ರಾಹುಲ್ ದ್ರಾವಿಡ್

ಇ) ಅನಿಲ್ ಕುಂಬ್ಳೆ

ಈ) ಸೌರವ್ ಗಂಗೂಲಿ

ರಾಹುಲ್ ದ್ರಾವಿಡ್

www.karunaduexams.com

2017ರ ಜನವರಿ 28ರಿಂದ ಫೆಬ್ರುವರಿ 12ವರೆಗೆ ಭಾರತದಲ್ಲಿ ನಡೆಯಲಿರುವ ವಿಶ್ವ ಅಂಧರ ಟ್ವೆಂಟಿ-20 ಕ್ರಿಕೆಟ್ ಟೂರ್ನಿಯ ಪ್ರಚಾರ ರಾಯಭಾರಿಯಾಗಿ ಭಾರತದ ಮಾಜಿ ಕ್ರಿಕೆಟ್ ಆಟಗಾರ ರಾಹುಲ್ ದ್ರಾವಿಡ್ ಅವರು ನೇಮಕಗೊಂಡಿದ್ದಾರೆ.

91. ಇತ್ತೀಚೆಗೆ ನಿಧನರಾದ ಖ್ಯಾತ ಸಂಗೀತಗಾರ, ಕವಿ ಲಿಯೋನಾರ್ಡ್ ಕೋಹೆನ್ ಯಾವ ದೇಶದವರು?

ಅ) ಬ್ರಿಟನ್

ಆ) ಕೆನಡಾ

ಇ) ಜರ್ಮನಿ

ಈ) ರಷ್ಯಾ

ಅಮೆರಿಕ

ಖ್ಯಾತ ಸಂಗೀತಗಾರ, ಕವಿ ಲಿಯೋನಾರ್ಡ್ ಕೋಹೆನ್ ನಿಧನರಾದರು.. ಕೆನಡಾದ ಮಾಂಟ್ರಿಯಲ್ ಮೂಲದ ಕೋಹೆನ್ ಕ್ಯಾಲಿಫೋರ್ನಿಯಾದಲ್ಲಿ ವಾಸವಿದ್ದರು. ತಮ್ಮ ಕೊನೆಯ ಆಲ್ಬಂ 'ಯು ವಾಂಟ್ ಇಟ್ ಡಾರ್ಕರ್' ಅನ್ನು ಕಳೆದ ತಿಂಗಳು ಬಿಡುಗಡೆ ಮಾಡಿದ್ದರು. ಅದರಲ್ಲಿ ತಮ್ಮ ಸಾವಿನ ಕುರಿತು ಉಲ್ಲೇಖಿಸಿದ್ದರು.

92. ಏಳನೇ ವಿಶ್ವ ಕೇರಂ ಚಾಂಪಿಯನ್ ಷಿಪ್ ಮಹಿಳೆಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡ ದೇಶ ಯಾವುದು?

ಅ) ಭಾರತ

ಆ) ಶ್ರೀಲಂಕಾ

ಇ) ಚೀನಾ

ಈ) ಬಾಂಗ್ಲದೇಶ

ಯುಕೆಯ ಬರ್ಮಿಂಗ್ ಹಾಮ್ ನಲ್ಲಿ ನಡೆದ ಏಳನೇ ವಿಶ್ವ ಕೇರಂ ಚಾಂಪಿಯನ್ ಷಿಪ್ನಲ್ಲಿ ಭಾರತ ಮಹಿಳೆಯರ ತಂಡ ಶ್ರೀಲಂಕಾ ತಂಡವನ್ನು ಸೋಲಿಸಿ ಚಿನ್ನದ ಪದಕವನ್ನು ಗೆದ್ದುಕೊಂಡಿತು. ಪುರುಷರ ವಿಭಾಗದಲ್ಲಿ ಭಾರತ ತಂಡ ಶ್ರೀಲಂಕಾ ತಂಡಕ್ಕೆ ಶರಣಾಗುವ ಮೂಲಕ ಬೆಳ್ಳಿ ಪದಕವನ್ನು ತನ್ನದಾಗಿಸಿಕೊಂಡಿತ್ತು.

93. ಸ್ಟೀಫನ್ ಎಡ್ಬರ್ಗ್ ಸ್ಪೋರ್ಟ್ಸ್ಮನ್ಶಿಪ್ ಪ್ರಶಸ್ತಿ (Stefan Edberg Sportsmanship Award) ಯನ್ನು ಯಾರಿಗೆ ನೀಡಲಾಗಿದೆ?

ಅ) ರಫೆಲ್ ನಾಡೆಲ್

ಆ) ರೋಜರ್ ಫೆಡರರ್

ಇ) ನಿಕೋ ರೋಸ್ಬರ್ಗ್



www.karunaduexams.com

ಈ) ಉಸೇನ್ ಬೋಲ್ಟ್
ರೋಜರ್ ಫೆಡರರ್
ಮಾಜಿ ವಿಶ್ವ ನಂ.1 ಟೆನ್ನಿಸ್ ಆಟಗಾರ ರೋಜರ್ ಫೆಡರರ್ ಅವರಿಗೆ ಸ್ಟೀಫನ್ ಎಡ್ಬರ್ಗ್ ಸ್ಪೋರ್ಟ್ಸ್‌ಮನ್ಶಿಪ್ ಪ್ರಶಸ್ತಿಯನ್ನು ನೀಡಲಾಗಿದೆ. ಫೆಡರರ್ ಅವರಿಗೆ ಇದು 12ನೇ ಪ್ರಶಸ್ತಿಯಾಗಿದೆ.

94. ಭಾರತೀಯ ಅಂತರರಾಷ್ಟ್ರೀಯ ಸಿನಿಮೋತ್ಸವದ ಐಸಿಎಫ್ಟಿ ಯುನೆಸ್ಕೊ ಗಾಂಧಿ ಪದಕ ವಿಭಾಗಕ್ಕೆ ನಾಮ ನಿರ್ದೇಶನಗೊಂಡಿರುವ ಕನ್ನಡ ಸಿನಿಮಾ ಯಾವುದು?
ಅ) ತಿಥಿ
ಆ) ಹರಿಕಥಾ ಪ್ರಸಂಗ
ಇ) ಅಲ್ಲಮ
ಈ) ರಾಮಾ ರಾಮಾ ರೇ
ಅಲ್ಲಮ
ಭಾರತೀಯ ಅಂತರರಾಷ್ಟ್ರೀಯ ಸಿನಿಮೋತ್ಸವದ ಐಸಿಎಫ್ಟಿ ಯುನೆಸ್ಕೊ ಗಾಂಧಿ ಪದಕ ವಿಭಾಗಕ್ಕೆ ಭಾರತೀಯ ಸಿನಿಮಾದ ಪ್ರವೇಶವಾಗಿ ಟಿ.ಎಸ್. ನಾಗಾಭರಣ ನಿರ್ದೇಶನದ ಕನ್ನಡದ 'ಅಲ್ಲಮ' ಚಿತ್ರ ನಾಮನಿರ್ದೇಶನಗೊಂಡಿದೆ. 12ನೇ ಶತಮಾನದ ವಚನಕಾರ ಅಲ್ಲಮ ಪ್ರಭುವಿನ ಬದುಕು-ವಚನಗಳ ಕುರಿತಾದ ಈ ಚಿತ್ರದಲ್ಲಿ ಧನಂಜಯ್, ಮೇಘನಾ ರಾಜ್, 'ಸಂಚಾರಿ' ವಿಜಯ್ ಮುಂತಾದವರು ನಟಿಸಿದ್ದಾರೆ.ಮಹಾತ್ಮ ಗಾಂಧಿ ಅವರ ಶಾಂತಿ, ಸಹನೆ, ಅಹಿಂಸೆಯ ತತ್ವಗಳನ್ನು ಪ್ರತಿಬಿಂಬಿಸುವ ಚಿತ್ರಕ್ಕೆ ಪ್ಯಾರಿಸ್ ಅಂತರರಾಷ್ಟ್ರೀಯ ಸಿನಿಮಾ, ಟೆಲಿ ವಿಷನ್ ಮತ್ತು ಧ್ವನಿ-ದೃಶ್ಯ ಸಂವಹನ ಮಂಡಳಿಯು ಯುನೆ ಸ್ಕೊದ ಸಹ ಯೋಗದಲ್ಲಿ ಈ ಪ್ರತಿಷ್ಠಿತ ಗಾಂಧಿ ಪದಕ ಮತ್ತು ಪ್ರಮಾಣಪತ್ರ ನೀಡುತ್ತಿದೆ.

95. "2016 ಗೋಲ್ಡ್ ಸ್ಮಿತ್ ಪ್ರಶಸ್ತಿ (Goldsmith Prize)" ಪಡೆದ ಮೈಕ್ ಮೆಕ್ಕಾರ್ಮ್ಯಾಕ್ ಯಾವ ದೇಶದವರು?
ಅ) ಐಸ್ ಲ್ಯಾಂಡ್
ಆ) ಬ್ರೆಜಿಲ್
ಇ) ಪೆರು
ಈ) ಪೋರ್ಚುಗಲ್
ಐಸ್ ಲ್ಯಾಂಡ್
ಐಸ್ ಲ್ಯಾಂಡ್ನ ಮೈಕ್ ಮೆಕ್ಕಾರ್ಮ್ಯಾಕ್ ರವರು 2016 ಗೋಲ್ಡ್ ಸ್ಮಿತ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಮೈಕ್ ಅವರ ಕಾದಂಬರಿ "ಸೋಲಾರ್ ಬೋನ್ಸ್ (Solar Bones)"ಗೆ ಈ ಪ್ರಶಸ್ತಿ ಲಭಿಸಿದೆ. ಇದು ಬ್ರಿಟನ್ ನ ವಾರ್ಷಿಕ ಸಾಹಿತ್ಯ ಪ್ರಶಸ್ತಿಯಾಗಿದೆ.

96. ಶಾಂತಿ ಮತ್ತು ಅಭಿವೃದ್ಧಿ ವಿಶ್ವ ವಿಜ್ಞಾನ ದಿನ (World Science Day for Peace and Development) ಯಾವ ದಿನದಂದು ಆಚರಿಸಲಾಗುತ್ತದೆ?

ಅ) ನವೆಂಬರ್ 9

ಆ) ನವೆಂಬರ್ 10

ಇ) ನವೆಂಬರ್ 11

ಈ) ನವೆಂಬರ್ 12

ನವೆಂಬರ್ 11

ಶಾಂತಿ ಮತ್ತು ಅಭಿವೃದ್ಧಿ ವಿಶ್ವ ವಿಜ್ಞಾನ ದಿನವನ್ನು ಪ್ರತಿವರ್ಷ ನವೆಂಬರ್ 10 ರಂದು ಆಚರಿಸಲಾಗುತ್ತದೆ. ಸಮಾಜದಲ್ಲಿ ವಿಜ್ಞಾನದ ಪ್ರಾಮುಖ್ಯತೆಯನ್ನು ಜಗತ್ತಿಗೆ ತೋರುವುದು ಮತ್ತು ವೈಜ್ಞಾನಿಕ ಸಮಸ್ಯೆಗಳನ್ನು ಚರ್ಚಿಸಲು ಸಾರ್ವಜನಿಕರನ್ನು ತೊಡಗಿಸಿಕೊಳ್ಳುವುದು ಈ ದಿನದ ಮಹತ್ವ. ಸೆಲೆಬ್ರೆಟಿಂಗ್ ಸೈನ್ಸ್ ಸೆಂಟರ್ಸ್ ಅಂಡ್ ಸೈನ್ಸ್ ಮ್ಯೂಸಿಯಮ್ಸ್ ಈ ವರ್ಷದ ಥೀಮ್.

97. “ಬಿಯಾಂಡ್ ದಿ ಲಾಸ್ಟ್ ಬ್ಲೂ ಮೌಂಟೇನ್: ಎ ಲೈಫ್ ಆಫ್ ಜೆ.ಆರ್.ಡಿ ಟಾಟಾ” ಪುಸ್ತಕದ ಲೇಖಕರು ಯಾರು?

ಅ) ಸೈರಸ್ ಮಿಸ್ತ್ರಿ

ಆ) ರತನ್ ಟಾಟಾ

ಇ) ಆರ್ ಎಂ ಲಾಲ

ಈ) ಕಿರಣ್ ಕಾರ್ತಿಕೇಯನ್

ಆರ್ ಎಂ ಲಾಲ

“ಬಿಯಾಂಡ್ ದಿ ಲಾಸ್ಟ್ ಬ್ಲೂ ಮೌಂಟೇನ್: ಎ ಲೈಫ್ ಆಫ್ ಜೆ.ಆರ್.ಡಿ ಟಾಟಾ” ಪುಸ್ತಕದ ಲೇಖಕರು ಆರ್ ಎಂ ಲಾಲ. ಈ ಪುಸ್ತಕ ಜೆ.ಆರ್.ಡಿ ಟಾಟಾ ಅವರು ಜೀವನ ಚರಿತ್ರೆ.

98. “2016 ಗೋಲ್ಡನ್ ಪೀಕಾಕ್ ಆವಾರ್ಡ್ ಫಾರ್ ಕಾರ್ಪೋರೇಟ್ ಗವರ್ನೆನ್ಸ್” ಪ್ರಶಸ್ತಿ ಪಡೆದ ಸಂಸ್ಥೆ ಯಾವುದು?

ಅ) ಭಾರತ್ ಎಲೆಕ್ಟ್ರಿಕಲ್ಸ್ ಲಿಮಿಟೆಡ್

ಆ) ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್

ಇ) ಭಾರತ್ ಹೆವಿ ಎಲೆಕ್ಟ್ರಿಕಲ್ ಲಿಮಿಟೆಡ್

ಈ) ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್

ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್

www.karunaduexams.com

ಮಹಾರತ್ನ ಸ್ಥಾನಮಾನ ಸಂಸ್ಥೆ ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್ ಗೆ 2016 ಗೋಲ್ಡನ್ ಪೀಕಾಕ್ ಆವಾರ್ಡ್ ಫಾರ್ ಕಾರ್ಪೋರೇಟ್ ಗವರ್ನೆನ್ಸ್ ಪ್ರಶಸ್ತಿ ಲಭಿಸಿದೆ.

99. ಈ ಕೆಳಗಿನವುಗಳಲ್ಲಿ ಅನುವಂಶೀಯ ಕಾಯಿಲೆ (Heriditary) ಅಲ್ಲದು ____?

ಅ) ಲುಕೇಮಿಯ

ಆ) ಹಿಮೋಫಿಲಿಯಾ

ಇ) ಥಾಲೆಸ್ಮಿಯ

ಈ) ಕಲರ್ ಬ್ಲೈಂಡ್ನೆಸ್

ಲುಕೇಮಿಯ

100. ಇಂಟರ್ ಪೋಲ್ನ ನೂತನ ಮುಖ್ಯಸ್ಥರಾಗಿ ಆಯ್ಕೆಯಾದ "ಮೆಂಗ್ ಹೊಂಗ್ ವೆ (Meng Hongwei) ಯಾವ ದೇಶದವರು?

ಅ) ಜಪಾನ್

ಆ) ಚೀನಾ

ಇ) ದಕ್ಷಿಣ ಕೊರಿಯಾ

ಈ) ಉತ್ತರ ಕೊರಿಯಾ

ಚೀನಾ

ಚೀನಾದ ಸಾರ್ವಜನಿಕ ಭದ್ರತೆಯ ಉಪಸಚಿವ ಮೆಂಗ್ ಹೊಂಗ್ ವೆ ಅವರು ಇಂಟರ್ ಪೋಲ್ ನ ನೂತನ ಮುಖ್ಯಸ್ಥರಾಗಿ ನೇಮಕಗೊಂಡಿದ್ದಾರೆ. ಈ ಪ್ರತಿಷ್ಠಿತ ಅಂತಾರಾಷ್ಟ್ರೀಯ ಅಪರಾಧ ಪೊಲೀಸ್ ಸಂಸ್ಥೆಗೆ ಆಯ್ಕೆಯಾದ ಚೀನಾದ ಮೊದಲಿಗರು. ಇಂಟರ್ ಪೋಲ್ ಅನ್ನು 1914ರಲ್ಲಿ ಸ್ಥಾಪಿಸಲಾಗಿದೆ. ಇದರ ಪ್ರಧಾನ ಕಚೇರಿ ಫ್ರಾನ್ಸ್ ನ ಲಿಯಾನ್ ನಲ್ಲಿದೆ.

101. ವಿಶ್ವದ ಅತಿ ಎತ್ತರದ ಸುರಂಗ ಮಾರ್ಗವನ್ನು ಯಾವ ದೇಶದಲ್ಲಿ ನಿರ್ಮಿಸಲಾಗಿದೆ?

ಅ) ಚೀನಾ

ಆ) ಸ್ವಿಟ್ಜರ್ಲ್ಯಾಂಡ್

ಇ) ಸ್ವೀಡನ್

ಈ) ಡೆನ್ಮಾರ್ಕ್

ಚೀನಾ

ಚೀನದ ಸಿಚುಆನ್-ಟಿಬೆಟ್ ಹೆದ್ದಾರಿಯಲ್ಲಿ ಜಗತ್ತಿನಲ್ಲೇ ಅತೀ ಎತ್ತರದ ಸುರಂಗಮಾರ್ಗ ನಿರ್ಮಾಣಕಾರ್ಯ ಪೂರ್ಣಗೊಂಡಿದೆ. ಇದರ ಮೂಲಕ ಟಿಬೆಟ್ಗೆ ತಲುಪಲು ಎರಡು ಗಂಟೆಗೂ ಕಡಿಮೆ ಸಮಯ ಸಾಲುತ್ತದೆ. ಏಳು ಕಿಲೋಮೀಟರ್ ಉದ್ದದ ಸುರಂಗ ಸಮುದ್ರ ಮಟ್ಟದಿಂದ 6,168 ಮೀಟರ್ ಎತ್ತರದಲ್ಲಿದೆ. ಇದು ಚೋಲ ಪರ್ವತದಮೂಲಕ ಹಾದು ಹೋಗುತ್ತದೆ.

www.karunaduexams.com

102. ಇತ್ತೀಚಿನ ಸಮೀಕ್ಷೆಯೊಂದರ ಪ್ರಕಾರ ಭಾರತದಲ್ಲಿ ಮಹಿಳೆಯರು ಕೆಲಸ ನಿರ್ವಹಿಸಲು ಅತ್ಯಂತ ಉತ್ತಮ ಸಂಸ್ಥೆ ಎನಿಸಿದೆ?

ಅ) ಟಿಸಿಎಸ್

ಆ) ಇನ್ಫೋಸಿಸ್

ಇ) ಅಸೆಂಚರ್

ಈ) ಹೆಚ್ ಪಿ

ಅಸೆಂಚರ್

ಜಾಗತಿಕ ವೃತ್ತಿಪರ ಸೇವಾ ಸಂಸ್ಥೆ ಅಸೆಂಚರ್ ದೇಶದ ಮಹಿಳಾ ಸ್ನೇಹಿ ಸಂಸ್ಥೆಯಾಗಿ ಹೊರಹೊಮ್ಮಿದೆ. ಅಮೆರಿಕ ಮೂಲದ ನಿಯತಕಾಲಿಕೆ ವರ್ಕಿಂಗ್ ಮದರ್ ಮತ್ತು ಅವತಾರ್ ಸಂಸ್ಥೆ ನಡೆಸಿದ ಸಮೀಕ್ಷೆಯಲ್ಲಿ ಮಹಿಳೆಯರು ಕೆಲಸ ನಿರ್ವಹಿಸಲು ಉತ್ತಮ ವಾತಾವರಣವಿರುವ 100 ಸಂಸ್ಥೆಗಳ ಪೈಕಿ ಅಸೆಂಚರ್ ಅತ್ಯುತ್ತಮ ಸಂಸ್ಥೆ ಎನಿಸಿದೆ.

103. ವಿಶ್ವ ನ್ಯೂಮೋನಿಯಾ ದಿನವನ್ನು _______ ರಂದು ಆಚರಿಸಲಾಗುತ್ತದೆ?

ಅ) ನವೆಂಬರ್ 12

ಆ) ನವೆಂಬರ್ 13

ಇ) ನವೆಂಬರ್ 10

ಈ) ನವೆಂಬರ್ 11

ನವೆಂಬರ್ 12

ವಿಶ್ವ ನ್ಯೂಮೋನಿಯಾ ದಿನವನ್ನು ಪ್ರತಿವರ್ಷ ನವೆಂಬರ್ 12 ರಂದು ಆಚರಿಸಲಾಗುತ್ತದೆ. ನ್ಯೂಮೋನಿಯಾ ಕಾಯಿಲೆ ಬಗ್ಗೆ ಅರಿವು ಮೂಡಿಸುವುದು ಈ ದಿನದ ಉದ್ದೇಶ. ನ್ಯೂಮೋನಿಯಾ ಒಂದು ಮಾರಣಾಂತಿಕ ಕಾಯಿಲೆಯಾಗಿದ್ದು, ಐದು ವರ್ಷದ ಮಕ್ಕಳಲ್ಲಿ ಅಧಿಕ ಸಾವು ಸಂಭವಿಸಲು ಕಾರಣವಾಗಿದೆ.

104. 2018 ವಿಶ್ವ ಆರೋಗ್ಯ ಸಂಸ್ಥೆಯ ತಂಬಾಕು ನಿಯಂತ್ರಣ ಚೌಕಟ್ಟು ಒಪ್ಪಂದ ಪಾಲುದಾರ ದೇಶಗಳ ಸಮಾವೇಶ ಯಾವ ದೇಶದಲ್ಲಿ ನಡೆಯಲಿದೆ?

ಅ) ಸ್ವಿಟ್ಜರ್ಲ್ಯಾಂಡ್

ಆ) ಈಜಿಪ್ಟ್

ಇ) ಬ್ರೆಜಿಲ್

ಈ) ಅಮೆರಿಕ

ಸ್ವಿಟ್ಜರ್ಲ್ಯಾಂಡ್

www.karunaduexams.com

ಎಂಟನೇ ವಿಶ್ವ ಆರೋಗ್ಯ ಸಂಸ್ಥೆಯ ತಂಬಾಕು ನಿಯಂತ್ರಣ ಚೌಕಟ್ಟು ಒಪ್ಪಂದ ಪಾಲುದಾರ ದೇಶಗಳ ಸಮಾವೇಶ 2018 ರಲ್ಲಿ ಸ್ವಿಟ್ಜರ್ಲ್ಯಾಂಡ್ ಜಿನಿವಾದಲ್ಲಿ ನಡೆಯಲಿದೆ. ಭಾರತ ಈ ಸಮಾವೇಶದ ಅಧ್ಯಕ್ಷತೆಯನ್ನು ವಹಿಸಲಿದೆ. ಭಾರತ ಸರ್ಕಾರದ ಆರೋಗ್ಯ ಕಾರ್ಯದರ್ಶಿ ಸಿ.ಕೆ.ಮಿಶ್ರಾ ಅವರನ್ನು ಸಮಾವೇಶದ ಅಧ್ಯಕ್ಷರನ್ನಾಗಿ ಆಯ್ಕೆಮಾಡಲಾಗಿದೆ. ಮುಂದಿನ ಎರಡು ವರ್ಷಗಳ ಅವಧಿಗೆ ಇವರು ಅಧ್ಯಕ್ಷರಾಗಿ ಇರಲಿದ್ದಾರೆ.

105. ಈ ಕೆಳಗಿನ ಯಾವ ದೇಶದೊಂದಿಗೆ ಭಾರತ ಇತ್ತೀಚೆಗೆ ಪರಮಾಣು ಒಪ್ಪಂದಕ್ಕೆ ಸಹಿ ಹಾಕಿದೆ?

ಅ) ಚೀನಾ

ಆ) ಜಪಾನ್

ಇ) ಇಟಲಿ

ಈ) ಮೆಕ್ಸಿಕೊ

ಜಪಾನ್

ಭಾರತ ಮತ್ತು ಜಪಾನ್ ಐತಿಹಾಸಿಕ ನಾಗರಿಕ ಪರಮಾಣು ಒಪ್ಪಂದಕ್ಕೆ ಸಹಿ ಹಾಕಿವೆ. ಮೂರು ದಿನಗಳ ಜಪಾನ್ ಪ್ರವಾಸದಲ್ಲಿರುವ ಪ್ರಧಾನಿ ಮೋದಿ ಹಾಗೂ ಜಪಾನ್ ಪ್ರಧಾನಿ ಶಿಂಜೊ ಅಬೆ ಅವರು ಟೋಕಿಯೋದಲ್ಲಿ ಈ ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಕಳೆದ ಡಿಸೆಂಬರ್ ನಲ್ಲಿ ಜಪಾನ್ ಪ್ರಧಾನಿ ಶಿಂಜೊ ಅಬೆ ಅವರು ಭಾರತಕ್ಕೆ ಬಂದಿದ್ದಾಗ ನಾಗರಿಕ ಪರಮಾಣು ಒಪ್ಪಂದದ ಬಗ್ಗೆ ಮಾತುಕತೆ ನಡೆದಿದ್ದು ಇದೀಗ ಫಲಪ್ರದವಾಗಿದೆ.

106. "ಎಸ್ ಆರ್ ಕೆ-25 ಇಯರ್ಸ್ ಆಫ್ ಲೈಫ್ (SRK-25 Years of Life)" ಪುಸ್ತಕದ ಲೇಖಕರು ___?

ಅ) ಕರಣ್ ಶೆಟ್ಟಿ

ಆ) ಜ್ಯೋತಿ ಆರ್ಯನ್

ಇ) ಸಮರ್ ಖಾನ್

ಈ) ಒಮನ್ ತ್ಯಾಗಿ

ಸಮರ್ ಖಾನ್

ಎಸ್ ಆರ್ ಕೆ-25 ಇಯರ್ಸ್ ಆಫ್ ಲೈಫ್ ಪುಸ್ತಕವನ್ನು ಲೇಖಕ ಮತ್ತು ಸಿನಿಮಾ ನಿರ್ಮಾಪಕ ಸಮರ್ ಖಾನ್ ಬರೆದಿದ್ದಾರೆ. ಬಾಲಿವುಡ್ ಸೂಪರ್ ಸ್ಟಾರ್ ಶಾರೂಖ್ ಖಾನ್ ರವರ ಸಿನಿ ಜೀವನ ಕುರಿತು ಪುಸ್ತಕವನ್ನು ಬರೆಯಲಾಗಿದೆ.

www.karunaduexams.com

107. ಭಾರತೀಯ ಷೇರು ವಿನಿಮಯ ಮಂಡಳಿ (SEBI)ಯ ಪೂರ್ಣಕಾಲಿಕ ಸದಸ್ಯರಾಗಿ ಯಾರು ನೇಮಕಗೊಂಡರು?

ಅ) ನವೀನ್ ಭಟ್ಟಚಾರ್ಯ

ಆ) ಅಶುಥೋಷ್ ಮುಖರ್ಜಿ

ಇ) ಜಿ ಮಹಾಲಿಂಗಂ

ಈ) ಸದಾಶಿವ ಕಾರ್ನಡ್

ಜಿ ಮಹಾಲಿಂಗಂ

ಗುರುಮೂರ್ತಿ ಮಹಾಲಿಂಗಂ ಅವರು ಭಾರತೀಯ ಷೇರು ವಿನಿಮಯ ಮಂಡಳಿ (ಸೆಬಿ)ಯ ಪೂರ್ಣಕಾಲಿಕ ಸದಸ್ಯರಾಗಿ ನೇಮಕಗೊಂಡಿದ್ದಾರೆ. ಇವರ ಅಧಿಕಾರ ಅವಧಿ 5 ವರ್ಷ ಅಥವಾ 65 ವರ್ಷ ಆಗುವವರೆಗೆ ಇರಲಿದೆ. ಈ ಮುಂಚೆ ಮಹಾಲಿಂಗಂ ರವರು ಭಾರತೀಯ ರಿಸರ್ವ್ ಬ್ಯಾಂಕ್ನ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದರು.

108. ಇತ್ತೀಚೆಗೆ ನಿಧನರಾದ ಜನಾರ್ಧನ ನೇಗಿ ಅವರು ಯಾವ ಕ್ಷೇತ್ರಕ್ಕೆ ಸಂಬಂಧಿಸಿದ್ದಾರೆ?

ಅ) ಅಣು ಇಂಧನ

ಆ) ಕ್ರೀಡೆ

ಇ) ಜಿಯೊಫಿಸಿಕ್ಸ್

ಈ) ವೈದ್ಯಕೀಯ

ಜಿಯೊಫಿಸಿಕ್ಸ್

ಪ್ರಸಿದ್ದ ಜಿಯೊಫಿಸಿಸ್ಟ್ ಜನಾರ್ಧನ ನೇಗಿ ನಿಧನರಾದರು. ನೇಗಿ ರವರು ನ್ಯಾಷನಲ್ ಜಿಯೊಫಿಸಿಕಲ್ ರಿಸರ್ಚ್ ಇನ್ಸ್ಟಿಟ್ಯೂಟ್ ನಲ್ಲಿ ನಿರ್ದೇಶಕ ಶ್ರೇಣಿಗೆ ಸಮನಾದ ವಿಜ್ಞಾನಿಯಾಗಿ ನಿವೃತ್ತಿ ಹೊಂದಿದ್ದರು. ಭೂಕಂಪ ಅಧ್ಯಯನ, ಡೈನೊಸಾರ್ ಪ್ರಾಣಿಗಳ ಸಾಮೂಹಿಕ ಅಳಿವು ಮತ್ತು ಭಾರತ ಉಪಖಂಡದ ಭೂಪದರ ರಚನೆ ಅಧ್ಯಯನಕ್ಕೆ ಅಪಾರ ಕೊಡುಗೆ ನೀಡಿದ್ದರು.

109. ಈ ಕೆಳಗಿನ ಯಾವ ಅವಧಿಯನ್ನು ಭಾರತದಲ್ಲಿ ಕೃಷಿ ಬೆಳೆ ವರ್ಷವೆಂದು ಕರೆಯಲಾಗುತ್ತದೆ?

ಅ) ಜುಲೈ-ಜೂನ್

ಆ) ಜೂನ್-ಮೇ

ಇ) ಮೇ-ಏಪ್ರಿಲ್

ಈ) ಏಪ್ರಿಲ್-ಮಾರ್ಚ್

www.karunaduexams.com

ಜುಲೈ-ಜೂನ್

110. ಫೋರ್ಬ್ಸ್ ನಿಯತಕಾಲಿಕೆಯ "2016 ವರ್ಷದ ಬ್ಯುಸಿನೆಸ್ ವ್ಯಕ್ತಿ" ಗೌರವಕ್ಕೆ ಯಾರು ಪಾತ್ರರಾಗಿದ್ದಾರೆ?

ಅ) ವಿಶಾಲ್ ಸಿಕ್ಕ

ಆ) ಮಾರ್ಕ್ ಜುಕರ್ಬರ್ಗ್

ಇ) ಸತ್ಯಂ ನಂದೇಲಾ

ಈ) ಇಂದ್ರಾ ನೂಯಿ

ಪ್ರಸಿದ್ಧ ಸಾಮಾಜಿಕ ತಾಣ ಫೇಸ್ ಬುಕ್ ಸಿಇಓ ಮಾರ್ಕ್ ಜುಕರ್ಬರ್ಗ್ ಅವರನ್ನು ಫೋರ್ಬ್ಸ್ ನಿಯತಕಾಲಿಕೆಯ 2016 ವರ್ಷದ ಬ್ಯುಸಿನೆಸ್ ವ್ಯಕ್ತಿ ಗೌರವಕ್ಕೆ ಪಾತ್ರರಾಗಿದ್ದಾರೆ. ವರ್ಷದಿಂದ ವರ್ಷಕ್ಕೆ ಕಂಪನಿಯ ಬೆಳವಣಿಗೆ ಹಾಗೂ ಇದನ್ನು ಸಾಧಿಸಲು ಜುಕರ್ಬರ್ಗ್ ಹೊಂದಿರುವ ದೂರದೃಷ್ಟಿ ಮತ್ತು ಸಾಮರ್ಥ್ಯವನ್ನು ಗಮನಿಸಿ ಅವರನ್ನು 2016 ವರ್ಷದ ಬ್ಯುಸಿನೆಸ್ ವ್ಯಕ್ತಿ ಎಂದು ಪರಿಗಣಿಸಲಾಗಿದೆ.

111. ಅಂತಾರಾಷ್ಟ್ರೀಯ ಹಾಕಿ ಫೆಡರೇಷನ್ನ ಅಧ್ಯಕ್ಷರಾಗಿ ಯಾರು ಆಯ್ಕೆಯಾಗಿದ್ದಾರೆ?

ಅ) ಕೆನ್ ರಿಡ್

ಆ) ಡೇವಿಡ್ ಬಲ್ಬಿರ್ನಿ

ಇ) ನರಿಂದರ್ ಬಾತ್ರಾ

ಈ) ಲಿಯಾಂಡ್ರೊ ಜೆನ್ನರ್

ನರಿಂದರ್ ಬಾತ್ರಾ

ಭಾರತದ ನರಿಂದರ್ ಬಾತ್ರಾ ಅವರು ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಹಾಕಿ ಇಂಡಿಯಾ'ದ ಅಧ್ಯಕ್ಷರೂ ಆಗಿರುವ ಬಾತ್ರಾ ಅವರು ಐಎಚ್ಎಫ್ನ ಅತ್ಯುನ್ನತ ಹುದ್ದೆಗೆ ನಡೆದ ಚುನಾವಣೆ ಯಲ್ಲಿ 68 ಮತಗಳನ್ನು ಗಳಿಸಿದರು. ಐರ್ಲೆಂಡ್ನ ಡೇವಿಡ್ ಬಲ್ಬಿರ್ನಿ ಮತ್ತು ಆಸ್ಟ್ರೇಲಿಯಾದ ಕೆನ್ ರೀಡ್ ಕ್ರಮವಾಗಿ 29 ಮತ್ತು 13 ಮತಗಳನ್ನು ಗಳಿಸಲಷ್ಟೇ ಶಕ್ತರಾದರು.ಈ ಹುದ್ದೆಗೆ ಏರಿದ ಏಷ್ಯಾ ಖಂಡದ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆ ಬಾತ್ರಾ ಅವರದಾಗಿದೆ.

www.karunaduexams.com

112. ಈ ಕೆಳಗಿನ ಯಾರು ಅಮೆರಿಕದ ಉಪಾಧ್ಯಕ್ಷರಿಗೆ ನೇಮಕಗೊಂಡಿದ್ದಾರೆ?

ಅ) ರಾಬರ್ಟ್ ಗೊಡರ್ಡ್

ಆ) ಮೈಕ್ ಪೆನ್ಸ್

ಇ) ಕಮಲ ಹ್ಯಾರಿಸ್

ಈ) ಮೈಕಲ್ ಜೇಮ್ಸ್

ಮೈಕ್ ಪೆನ್ಸ್

ಅಮೆರಿಕಾದ ಉಪಾಧ್ಯಕ್ಷರಾಗಿ ಮೈಕ್ ಪೆನ್ಸ್ ಆಯ್ಕೆಯಾಗಿದ್ದಾರೆ. ಮೈಕ್ ಪೆನ್ಸ್ 2013 ರಿಂದ ಇಂಡಿಯಾನಾ ರಾಜ್ಯದ ಗವರ್ನರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಜಿಯೋ ಬಿಡನ್ ಉಪಾಧ್ಯಕ್ಷರಾಗಿದ್ದು, ಪೆನ್ಸ್ ಅಧಿಕಾರಾವಧಿ 2017 ಜನವರಿಯಿಂದ ಶುರುವಾಗಲಿದೆ. ನವೆಂಬರ್ 8 ರಂದು ನಡೆದ ಅಮೆರಿಕಾ ಅಧ್ಯಕ್ಷೀಯ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದ ಡೊನಾಲ್ಡ್ ಟ್ರಂಪ್ ಅವರು ಡೆಮಾಕ್ರೆಟ್ ಪಕ್ಷದ ಹಿಲರಿ ಕ್ಲಿಂಟನ್ ಅವರನ್ನು ಮಣಿಸಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಟ್ರಂಪ್ ಅವರ ಅಧಿಕಾರಾವಧಿ ಕೂಡ ಜನವರಿ 20, 2017 ರಿಂದ ಆರಂಭವಾಗಲಿದೆ.

113. ಖಾಸಗಿ ವಲಯದ ಫೆಡರಲ್ ಬ್ಯಾಂಕ್ ತನ್ನ ಮೊದಲ ಅಂತಾರಾಷ್ಟ್ರೀಯ ಶಾಖೆಯನ್ನು ಯಾವ ನಗರದಲ್ಲಿ ತೆರೆಯಲಿದೆ?

ಅ) ನ್ಯೂಯಾರ್ಕ್

ಆ) ದುಬೈ

ಇ) ಯಾಂಗೂನ್

ಈ) ಲಂಡನ್

ದುಬೈ

ಖಾಸಗಿ ವಲಯದ ಪ್ರಮುಖ ಬ್ಯಾಂಕ್ ಗಳಲ್ಲಿ ಒಂದಾಗಿರುವ ಫೆಡರಲ್ ಬ್ಯಾಂಕ್ ದುಬೈನಲ್ಲಿ ತನ್ನ ಮೊದಲ ಅಂತಾರಾಷ್ಟ್ರೀಯ ಶಾಖೆಯನ್ನ ತೆರೆಯಲು ಭಾರತೀಯ ರಿಸರ್ವ್ ಬ್ಯಾಂಕ್ ಅನುಮತಿ ನೀಡಿದೆ.

114. ದೇಶದ ಮೊದಲ ಚೆರ್ರಿ ಬ್ಲಾಸಮ್ ಉತ್ಸವ (Cherry Blossom Festival) ಯಾವ ರಾಜ್ಯದಲ್ಲಿ ನಡೆಯಲಿದೆ?

ಅ) ಅಸ್ಸಾಂ

ಆ) ಮೇಘಾಲಯ

www.karunaduexams.com

ಇ) ಸಿಕ್ಕಿಂ

ಈ) ತ್ರಿಪುರ

ಮೇಘಾಲಯ

ಮೇಘಾಲಯದಲ್ಲಿ ನವೆಂಬರ್ 14 ರಂದು ಚೆರ್ರಿ ಬ್ಲಾಸಮ್ ಉತ್ಸವ ಆರಂಭಗೊಳ್ಳಲಿದೆ. ಇದೇ ಮೊದಲ ಬಾರಿಗೆ ಭಾರತದಲ್ಲಿ ಈ ಉತ್ಸವವನ್ನು ಆಯೋಜಿಸಲಾಗುತ್ತಿದೆ. ನಾಲ್ಕು ದಿನಗಳ ಕಾಲ ನಡೆಯಲಿರುವ ಉತ್ಸವದಲ್ಲಿ ಗುಲಾಬಿ ಮತ್ತು ಬಿಳಿ ಬಣ್ಣದ ಚೆರ್ರಿ ಮೊಗ್ಗು ಜೊತೆಗೆ ಮೇಘಾಲಯದ ಕಲೆ, ಸಂಸ್ಕೃತಿ ಮತ್ತು ಪರಂಪರೆಯನ್ನು ಪ್ರದರ್ಶಿಸಲಾಗುವುದು. ಚೆರ್ರಿ ಬ್ಲಾಸಮ್ ಉತ್ಸವ ಜಪಾನ್ ನಲ್ಲಿ ಅತ್ಯಂತ ಹೆಚ್ಚು ಪ್ರಸಿದ್ದಿ ಹೊಂದಿದೆ.

115. 32ನೇ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ ಚಾಂಪಿಯನ್ ಷಿಪ್ ನಲ್ಲಿ 12 ವರ್ಷಗಳ ರಾಷ್ಟ್ರೀಯ ದಾಖಲೆ ಮುರಿದು ಇತಿಹಾಸ ನಿರ್ಮಿಸಿದವರು ಯಾರು?

ಅ) ಪ್ರದೀಪ್ ಜೋಗಿ

ಆ) ತೇಜಸ್ವಿನ್ ಶಂಕರ್

ಇ) ಮನದೀಪ್ ರಾಯ್

ಈ) ರಂಜನ್ ಗುಪ್ತಾ

ತೇಜಸ್ವಿನ್ ಶಂಕರ್

32ನೇ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ ಚಾಂಪಿಯನ್ ಷಿಪ್ ನ ಬಾಲಕರ ಹೈಜಂಪ್ ವಿಭಾಗದಲ್ಲಿ ದೆಹಲಿಯ ತೇಜಸ್ವಿನ್ ಶಂಕರ್ 12 ವರ್ಷಗಳ ರಾಷ್ಟ್ರೀಯ ಹಿರಿಯರ ದಾಖಲೆಯನ್ನು ಮುರಿದಿದ್ದಾನೆ. ಬಾಲಕರ ಹೈಜಂಪ್ ಸ್ಪರ್ಧೆಯಲ್ಲಿ ತೇಜಸ್ವಿನಿ ಶಂಕರ್ 2.26 ಮೀ. ಎತ್ತರ ಜಿಗಿಯುವ ಮೂಲಕ ಸ್ವರ್ಣ ಪದಕ ಗೆದ್ದುಕೊಂಡಿದ್ದಾರೆ. ಇದಕ್ಕೂ ಮುನ್ನ ಪಶ್ಚಿಮ ಬಂಗಾಳದ ಹರಿ ಶಂಕರ್ ರಾಯ್ 2.25ಮೀ. ಎತ್ತರ ಜಿಗಿದು ಹಿಂದಿನ ರಾಷ್ಟ್ರೀಯ ಹಿರಿಯರ ಮಟ್ಟದ ದಾಖಲೆ ಹೊಂದಿದ್ದರು.

116. 2ನೇ ರಾಷ್ಟ್ರೀಯ ಮಕ್ಕಳ ಸಿನಿಮೋತ್ಸವ ಯಾವ ನಗರದಲ್ಲಿ ನಡೆಯಲಿದೆ?

ಅ) ಜೈಪುರ

ಆ) ಉದಯಪುರ

ಇ) ಚೆನ್ನೈ

ಈ) ಮೈಸೂರು

ಜೈಪುರ

ಎರಡನೇ ರಾಷ್ಟ್ರೀಯ ಮಕ್ಕಳ ಸಿನಿಮೋತ್ಸವ ಜೈಪುರದ ಬಿರ್ಲಾ ಆಡಿಟೋರಿಯಂನಲ್ಲಿ ನವೆಂಬರ್ 14 ರಂದು ಆರಂಭವಾಗಲಿದೆ. ಮೇಕ್ ಇನ್ ಇಂಡಿಯಾ ಇದು ಈ ಸಿನಿಮೋತ್ಸವದ ಥೀಮ್.

www.karunaduexams.com

117. ಇತ್ತೀಚಿನ ವರದಿ ಪ್ರಕಾರ ನ್ಯೂಮೋನಿಯಾ ಮತ್ತು ಡಯೋರಿಯಾ ಕಾಯಿಲೆಯಿಂದ ಅತಿ ಹೆಚ್ಚಿನ ಮಕ್ಕಳ ಸಾವು ಸಂಭವಿಸುವ ವಿಶ್ವದ ಮೊದಲ ಮೂರು ರಾಷ್ಟ್ರಗಳು ಯಾವುವು?

ಅ) ಭಾರತ, ನೈಜೀರಿಯಾ ಮತ್ತು ಪಾಕಿಸ್ತಾನ

ಆ) ಭಾರತ, ಪಾಕಿಸ್ತಾನ ಮತ್ತು ನೈಜೀರಿಯಾ

ಇ) ಪಾಕಿಸ್ತಾನ, ಭಾರತ ಮತ್ತು ನೈಜೀರಿಯಾ

ಈ) ಪಾಕಿಸ್ತಾನ, ನೈಜೀರಿಯಾ ಮತ್ತು ಭಾರತ

ಭಾರತ, ನೈಜೀರಿಯಾ ಮತ್ತು ಪಾಕಿಸ್ತಾನ

ಭಾರತ ವಿಶ್ವದಲ್ಲೆ ಅತಿ ಹೆಚ್ಚು ನ್ಯೂಮೋನಿಯಾ ಮತ್ತು ಡಯೋರಿಯೊ ಕಾಯಿಲೆಯಿಂದ ಮಕ್ಕಳ ಸಾವು ಸಂಭವಿಸುತ್ತಿರುವ ರಾಷ್ಟ್ರಗಳ ಪೈಕಿ ಮೊದಲ ಸ್ಥಾನದಲ್ಲಿದೆ. ವಿಶ್ವ ನ್ಯೂಮೋನಿಯಾ ದಿನವಾದ ನವೆಂಬರ್ 12 ರಂದು ಬಿಡುಗಡೆಗೊಂಡ ವರದಿಯಲ್ಲಿ ಈ ವಿಷಯ ಬಹಿರಂಗಗೊಂಡಿದೆ. ಭಾರತ, ನೈಜೀರಿಯಾ, ಪಾಕಿಸ್ತಾನ, ಡೆಮಾಕ್ರೆಟಿಕ್ ರಿಪಬ್ಲಿಕ್ ಕಾಂಗೋ ಮತ್ತು ಅಂಗೋಲಾ ಮೊದಲ ಐದು ಸ್ಥಾನದಲ್ಲಿವೆ.

118. 2016 ಭಾರತ ಅಂತಾರಾಷ್ಟ್ರೀಯ ವ್ಯಾಪಾರ ಮೇಳದ (ಐಐಟಿಎಫ್ ) ಪ್ರಾಮುಖ್ಯತೆ ದೇಶ (Focus Country) ಯಾವುದು?

ಅ) ಬೆಲಾರಸ್

ಆ) ಜಪಾನ್

ಇ) ಚೀನಾ

ಈ) ರಷ್ಯಾ

ಬೆಲಾರಸ್

36ನೇ ಭಾರತ ಅಂತಾರಾಷ್ಟ್ರೀಯ ವ್ಯಾಪಾರ ಮೇಳಕ್ಕೆ ನವದೆಹಲಿಯ ಪ್ರಗತಿ ಮೈದಾನದಲ್ಲಿ ರಾಷ್ಟ್ರಪತಿ ಪ್ರಣಭ್ ಮುಖ್ರಜಿ ವಿದ್ಯುಕ್ತ ಚಾಲನೆ ನೀಡಿದರು. ಡಿಜಿಟಲ್ ಇಂಡಿಯಾ ಈ ವರ್ಷ ವ್ಯಾಪಾರ ಮೇಳದ ಧ್ಯೇಯವಾಕ್ಯ. ಈ ಬಾರಿಯ ವ್ಯಾಪಾರ ಮೇಳದ ಪ್ರಾಮುಖ್ಯತೆ ರಾಷ್ಟ್ರ ಬೆಲಾರಸ್ ಹಾಗೂ ಪ್ರಾಮುಖ್ಯತೆ ರಾಜ್ಯ ಹರಿಯಾಣ.

119. ಸಂವಿಧಾನದ ಯಾವ ವಿಧಿಯ ಪ್ರಕಾರ ರಾಷ್ಟ್ರಪತಿಗಳು ಪ್ರಧಾನ ಮಂತ್ರಿಗಳ ನೇತೃತ್ವದ ಮಂತ್ರಿಮಂಡಲದ ಸಲಹೆಯ ಮೇರೆಗೆ ಕಾರ್ಯನಿರ್ವಹಿಸಬೇಕಾಗುತ್ತದೆ?

ಅ) 73

ಆ) 74 (1)

www.karunaduexams.com

ಇ) 75

ಈ) 76 (1)

74 (1)

1976 ರಲ್ಲಿ 74 (1) ನೇ ವಿಧಿಗೆ 42ನೇ ತಿದ್ದುಪಡಿಯನ್ನು ತರಲಾಗುವ ಮೂಲಕ ಈ ಕಾಯ್ದೆಯ ಪ್ರಕಾರ ಮಂತ್ರಿಮಂಡಲದ ಸಲಹೆಗೆ ರಾಷ್ಟ್ರಪತಿಗಳು ಬದ್ಧವಾಗಿರಬೇಕು.

120. "ಆಕ್ಸ್‌ಫರ್ಡ್ ನಿಘಂಟು ಯಾವ ಪದವನ್ನು "2016 ವರ್ಷದ ಪದ (Word of the Year)" ವೆಂದು ಘೋಷಿಸಿದೆ?

ಅ) Ayyo

ಆ) Post Truth

ಇ) Dicci

ಈ) Brexiteer

Post Truth

ಆಕ್ಸ್‌ಪರ್ಡ್ ನಿಘಂಟು "Post Truth" ಪದವನ್ನು 2016 ವರ್ಷದ ಪದವೆಂದು ಘೋಷಿಸಿದೆ. ಬ್ರೆಕ್ಸಿಟ್ ಮತ ಮತ್ತು ಅಮೆರಿಕದಲ್ಲಿ ಡೋನಾಲ್ಡ್ ಟ್ರಂಪ್ ಅಲೆಯನಂತರ ಈ ಪದದ ಬಳಕೆ ಗಣನೀಯವಾಗಿ ಏರಿಕೆಯಾಗಿದೆಯೆಂದು ಹೇಳಲಾಗಿದೆ. ಕಳೆದ ಒಂದು ವರ್ಷದಲ್ಲಿ ಈ ಪದ ಬಳಕೆ ಶೇ 2000% ಹೆಚ್ಚಳವಾಗಿದೆ.

121. ಲೇಡಿಸ್ ಯುರೋಪಿಯನ್ ಟೂರ್ ಗೆದ್ದ ಮೊದಲ ಭಾರತೀಯ ಗಾಲ್ಫ್ ಆಟಗಾರ್ತಿ ಯಾರು?

ಅ) ಅದಿತಿ ಅಶೋಕ್

ಆ) ವಾಣಿ ಕಪೂರ್

ಇ) ಶರ್ಮಿಳಾ ನಿಕೋಲೆಟ್

ಈ) ಗೌರಿ ಮೊಂಗ

ಅದಿತಿ ಅಶೋಕ್

ಬೆಂಗಳೂರು ಮೂಲದ ಗಾಲ್ಫ್ ಆಟಗಾರ್ತಿ ಅದಿತಿ ಅಶೋಕ್ ಇಂಡಿಯನ್ ಓಪನ್ ಕಿರೀಟ ಗೆದ್ದುಕೊಂಡಿದ್ದಾರೆ. ಈ ಮೂಲಕ ಲೇಡೀಸ್ ಯುರೋಪಿಯನ್ ಟೂರ್ ಪಂದ್ಯವನ್ನು ಗೆದ್ದ ಮೊದಲ ಭಾರತೀಯ ಆಟಗಾರ್ತಿ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ. 18ರ ಹರೆಯದ ಅದಿತಿ ರಿಯೊ ಒಲಿಂಪಿಕ್ಸ್ ನಲ್ಲಿಯೂ ಉತ್ತಮ ಪ್ರದರ್ಶನ ನೀಡಿದ್ದರು.

www.karunaduexams.com

122. ವಿಶ್ವ ತತ್ವಶಾಸ್ತ್ರ ದಿನ (World Philosophy Day) ಯಾವ ದಿನದಂದು ಆಚರಿಸಲಾಗುತ್ತದೆ?

ಅ) ನವೆಂಬರ್ ಮೊದಲ ಭಾನುವಾರ

ಆ) ನವೆಂಬರ್ ಎರಡನೇ ವಾರ

ಇ) ನವೆಂಬರ್ ಮೊದಲ ಸೋಮವಾರ

ಈ) ನವೆಂಬರ್ ಮೂರನೇ ಗುರುವಾರ

ನವೆಂಬರ್ ಮೂರನೇ ಗುರುವಾರ

ವಿಶ್ವ ತತ್ವಶಾಸ್ತ್ರ ದಿನವನ್ನು ಪ್ರತಿವರ್ಷ ನವೆಂಬರ್ ತಿಂಗಳ ಮೂರನೇ ಗುರುವಾರದಂದು ಆಚರಿಸಲಾಗುತ್ತದೆ. ವಿಶ್ವ ತತ್ವಶಾಸ್ತ್ರ ದಿನವನ್ನು ಮೊದಲ ಬಾರಿಗೆ 2005 ರಲ್ಲಿ ಆಚರಿಸಲಾಯಿತು. ಮಾನವನ ಯೋಚನೆ ನಿರಂತರ ಅಭಿವೃದ್ದಿಗೆ ತತ್ವಶಾಸ್ತ್ರದ ಮೌಲ್ಯವನ್ನು ಎತ್ತಿಹಿಡಿಯುವ ಸಲುವಾಗಿ ಯುನೆಸ್ಕೋ ಈ ದಿನವನ್ನು ಆಚರಣೆಗೆ ತಂದಿದೆ.

123. ಟಾಟಾ ಗ್ಲೋಬಲ್ ಬೆವರೇಜಸ್ (Tata Global Beverages) ಅಧ್ಯಕ್ಷರಾಗಿ ಯಾರನ್ನು ನೇಮಕ ಮಾಡಲಾಗಿದೆ?

ಅ) ಹರೀಶ್ ಭಟ್

ಆ) ಸತೀಶ್ ಚಂದ್ರ

ಇ) ಕಮಲೇಶ್ ಶರ್ಮಾ

ಈ) ಮುಕುಂದ ರಾಥೋಡ್

ಹರೀಶ್ ಭಟ್

124. ಭಾರತ ಅಥ್ಲೀಟ್ ಗಳ ಪ್ರದರ್ಶನ ಗುಣಮಟ್ಟವನ್ನು ಸುಧಾರಿಸುವ ಸಲುವಾಗಿ ಭಾರತ ಕ್ರೀಡಾ ಪ್ರಾಧಿಕಾರ ಯಾವ ವಿಶ್ವವಿದ್ಯಾಲಯದೊಂದಿಗೆ ಒಪ್ಪಂದ ಮಾಡಿಕೊಂಡಿದೆ?

ಅ) ಟೋಕಿಯೋ ವಿಶ್ವವಿದ್ಯಾಲಯ

ಆ) ಬರ್ಮಿಂಗ್‌ಹ್ಯಾಮ್‌ನ ವಿಶ್ವವಿದ್ಯಾಲ ಯ

ಇ) ಶಾಂಘೈ ವಿಶ್ವವಿದ್ಯಾಲಯ

ಈ) ಲಂಡನ್ ವಿಶ್ವವಿದ್ಯಾಲಯ

ಬರ್ಮಿಂಗ್‌ಹ್ಯಾಮ್‌ನ ವಿಶ್ವವಿದ್ಯಾಲ ಯ

ಭಾರತದ ಅಥ್ಲೀಟ್‌ಗಳ ಪ್ರದರ್ಶನ ಗುಣಮಟ್ಟ ಸುಧಾರಿಸುವ ಉದ್ದೇಶದಿಂದಾಗಿ ಭಾರತ ಕ್ರೀಡಾ ಪ್ರಾಧಿಕಾರ ಬರ್ಮಿಂಗ್‌ಹ್ಯಾಮ್‌ನ ವಿಶ್ವವಿದ್ಯಾಲ ಯದ ಜೊತೆ ಒಪ್ಪಂದ

www.karunaduexams.com

ಮಾಡಿಕೊಂಡಿದೆ. ಭಾರತದ ಅಥ್ಲೀಟ್‌ಗಳ ಗುಣಮಟ್ಟ ಉತ್ತಮಗೊಳ್ಳಲು ಬರ್ಮಿಂಗ್‌ಹ್ಯಾಮ್ ವಿ.ವಿಯ ತರಬೇತುದಾರರು, ಕ್ರೀಡಾ ವಿಜ್ಞಾನಿಗಳು ಮತ್ತು ದೈಹಿಕ ಶಿಕ್ಷಣ ಶಿಕ್ಷಕರು ನೆರವಾಗಲಿದ್ದಾರೆ. ಈ ವಿಶ್ವ ವಿದ್ಯಾಲಯದಲ್ಲಿ ತರಬೇತಿ ಪಡೆದ ಇಂಗ್ಲೆಂಡ್‌ನ ಹಲವಾರು ಅಥ್ಲೀಟ್‌ಗಳು ರಿಯೊ ಒಲಿಂಪಿಕ್ಸ್‌ನಲ್ಲಿ ಗಮನಾರ್ಹ ಪ್ರದರ್ಶನ ನೀಡಿದ್ದರು. ಇತ್ತೀಚಿಗೆ ಭಾರ ತದ ಕ್ರೀಡಾ ಕೋಚ್‌ಗಳು ಮತ್ತು ಕ್ರೀಡಾ ವಿಜ್ಞಾನಿಗಳ ತಂಡ ಎರಡು ವಾರ ಬರ್ಮಿಂಗ್ ಹ್ಯಾಮ್ ವಿ.ವಿಗೆ ಭೇಟಿ ಕೊಟ್ಟಿತ್ತು.

125. ಸತತವಾಗಿ ಮೂರನೇ ಬಾರಿಗೆ ರಾಷ್ಟ್ರೀಯ ಮಹಿಳಾ ಪ್ರೀಮಿಯರ್ ಚೆಸ್ ಚಾಂಪಿಯನ್‌ಷಿಪ್ ಗೆದ್ದುಕೊಂಡವರು ಯಾರು?

ಅ) ಪದ್ಮನಿ ರಾವತ್

ಆ) ಹರಿಕ ದ್ರೋಣವಳ್ಳಿ

ಇ) ಹಂಪಿ ಕೊನೆರು

ಈ) ತಾನಿಯ ಸಚ್ದೇವ್

ಪದ್ಮನಿ ರಾವತ್

ಇಂಟರ್ ನ್ಯಾಷನಲ್ ಮಾಸ್ಟರ್ ಪದ್ಮಿನಿ ರಾವತ್ ಸತತ ಮೂರನೇ ಬಾರಿಗೆ ರಾಷ್ಟ್ರೀಯ ಮಹಿಳಾ ಪ್ರೀಮಿಯರ್ ಚೆಸ್ ಚಾಂಪಿಯನ್‌ಷಿಪ್ ಗೆದ್ದುಕೊಂಡರು. ಈ ಗೆಲುವಿನಿಂದ ಪದ್ಮಿನಿ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಆಡುವ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

126. ಭಾರತ ವಿಶಿಷ್ಟ ಗುರುತಿನ ಪ್ರಾಧಿಕಾರದ ಇತ್ತೀಚೆಗೆ ಆರಂಭಿಸಿದ ಪರಿಷ್ಕೃತ ಟೋಲ್ ಫ್ರೀ ಸಹಾಯವಾಣಿ ಸಂಖ್ಯೆ ಯಾವುದು?

ಅ) 1927

ಆ) 1947

ಇ) 1950

ಈ) 1943

1947

ಭಾರತ ವಿಶಿಷ್ಟ ಗುರುತಿನ ಪ್ರಾಧಿಕಾರ ಇತ್ತೀಚೆಗೆ 1947 ನಂಬರಿನ ಪರಿಷ್ಕೃತ ಉಚಿತ ಟೋಲ್ ಫ್ರೀ ಸಹಾಯವಾಣಿ ಸಂಖ್ಯೆಯನ್ನು ಆರಂಭಿಸಿದೆ. ಆಧಾರ್ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಸಾರ್ವಜನಿಕರು ಈ ದೂರವಾಣಿಗೆ ಕರೆ ಮಾಡಿ ತಿಳಿದುಕೊಳ್ಳಬಹುದಾಗಿದೆ.

www.karunaduexams.com

127. ರಾಷ್ಟ್ರೀಯ ಮಾನವ ಹಕ್ಕು ಆಯೋಗ ನೀಡುವ ಪ್ರಶಸ್ತಿಯಲ್ಲಿ ಪ್ರಥಮ ಬಹುಮಾನ ಪಡೆದ ಚಿತ್ರ ಯಾವುದು?

ಅ) ಟಮ್ಲಿಂಗ್ ಸ್ಟ್ರೀಟ್

ಆ) ಅಂಬ್ರೋಸಿಯಾ

ಇ) ಬ್ಲ್ಯಾಕ್ ಅಂಡ್ ವೈಟ್

ಈ) ಮದರ್ ಆಫ್ ಇಂಡಿಯಾ

ಬ್ಲ್ಯಾಕ್ ಅಂಡ್ ವೈಟ್

ಪೊಲೀಸ್ ದೌರ್ಜನ್ಯ, ಮಹಿಳೆಯರ ಮೇಲಿನ ಕಿರುಕುಳ ಮೊದಲಾದ ಮಾನವ ಹಕ್ಕುಗಳ ಉಲ್ಲಂಘನೆ ವಿಷಯಗಳ ಮೇಲೆ ಬೆಳಕು ಚೆಲ್ಲುವ ಮೂಕಿ ಕಿರುಚಿತ್ರ 'ಬ್ಲ್ಯಾಕ್ ಅಂಡ್ ವೈಟ್' ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (ಎನ್‌ಎಚ್‌ಆರ್‌ಸಿ) ನೀಡುವ ಪ್ರಶಸ್ತಿಗೆ ಆಯ್ಕೆಯಾಗಿದೆ. ಕೇರಳದ ಅನುಜ್ ಎಸ್. ಆರ್. ಅವರು ಈ ಕಿರುಚಿತ್ರವನ್ನು ನಿರ್ಮಿಸಿದ್ದಾರೆ. ಮೊದಲ ಬಹುಮಾನ ₹1ಲಕ್ಷ ಮೊತ್ತವನ್ನೊಳಗೊಂಡಿದೆ. ಪಶ್ಚಿಮ ಬಂಗಾಳದ ರಿಂಬಿಕ್ ದಾಸ್ ಅವರ 'ಟಮ್ಲಿಂಗ್ ಸ್ಟ್ರೀಟ್' ದ್ವಿತೀಯ ಬಹುಮಾನಕ್ಕೆ ಹಾಗೂ ಸೋಮನಾಥ್ ಚಕ್ರವರ್ತಿ ಅವರ 'ಅಂಬ್ರೋಸಿಯಾ' ತೃತೀಯ ಬಹುಮಾನಕ್ಕೆ ಆಯ್ಕೆಯಾಗಿವೆ. 'ದ್ವಿತೀಯ ಬಹುಮಾನ ₹75,000, ಹಾಗೂ ತೃತೀಯ ಬಹುಮಾನ ₹50,000 ಮೊತ್ತವನ್ನೊಳಗೊಂಡಿದೆ'.

128. ವಿಶ್ವ ಮಧುಮೇಹ ದಿನವನ್ನು ____ ರಂದು ಆಚರಿಸಲಾಗುತ್ತದೆ?

ಅ) ನವೆಂಬರ್ 12

ಆ) ನವೆಂಬರ್ 13

ಇ) ನವೆಂಬರ್ 14

ಈ) ನವೆಂಬರ್ 15

ನವೆಂಬರ್ 14

ವಿಶ್ವ ಮಧುಮೇಹ ದಿನವನ್ನು ಪ್ರತಿ ವರ್ಷ ನವೆಂಬರ್ 14 ರಂದು ಆಚರಿಸಲಾಗುತ್ತದೆ. ಮಧುಮೇಹ ರೋಗದ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕಾರ್ಯವನ್ನು ಈ ದಿನದಂದು ಮಾಡಲಾಗುವುದು. ಈ ವರ್ಷದ ಥೀಮ್ Eyes on Diabetes".

129. ಇತ್ತೀಚೆಗೆ ಬಿಡುಗಡೆಗೊಂಡ "ದಿ ಲೆಜೆಂಡ್ ಆಫ್ ಲಕ್ಷ್ಮಿ ಪ್ರಸಾದ್ (The Legend of Lakshmi Prasad)" ಪುಸ್ತಕದ ಲೇಖಕರು ಯಾರು?

ಅ) ಟ್ವಿಂಕಲ್ ಖನ್ನಾ

ಆ) ರೇಖಾ



www.karunaduexams.com

ಇ) ಜಯಾ ಬಚ್ಚನ್

ಈ) ವಿದ್ಯಾ ಬಾಲನ್

ಟ್ವಿಂಕಲ್ ಖನ್ನಾ

ನಟಿ ಹಾಗೂ ಲೇಖಿಕಿ ಟ್ವಿಂಕಲ್ ಖನ್ನಾ ಅವರು ತಮ್ಮ ಎರಡನೇ ಪುಸ್ತಕ "ದಿ ಲೆಜೆಂಡ್ ಆಫ್ ಲಕ್ಷ್ಮಿ ಪ್ರಸಾದ್" ಪುಸ್ತಕವನ್ನು ಬಿಡುಗಡೆಗೊಳಿಸಿದರು. ಅವರ ಮೊದಲ ಪುಸ್ತಕ "ಮಿಸ್ಸರ್ ಫನ್ನಿಬೋನ್ಸ್: ಶಿ ಈಸ್ ಜಸ್ಟ್ ಲೈಕ್ ಯು ಅಂಡ್ ಅ ಲಾಟ್ ಲೈಕ್ ಮಿ (Mrs Funnybones: She's Just Like You and a Lot Like Me)" 2015 ರಲ್ಲಿ ಪ್ರಕಟಣೆಗೊಂಡಿತ್ತು.

130. ಇತ್ತೀಚೆಗೆ ಬಿಡುಗಡೆಗೊಂಡ 2016 ಮೆಲ್ಬೋರ್ನ್ ಮರ್ಸರ್ ಜಾಗತಿಕ ಪಿಂಚಣಿ ಸೂಚ್ಯಂಕ (Melbourne Mercer Global Pension Index (MMGPI) ದಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ?

ಅ) 10

ಆ) 15

ಇ) 25

ಈ) 30

25

2016 ಮೆಲ್ಬೋರ್ನ್ ಮರ್ಸರ್ ಜಾಗತಿಕ ಪಿಂಚಣಿ ಸೂಚ್ಯಂಕದಲ್ಲಿ 27 ರಾಷ್ಟ್ರಗಳ ಪೈಕಿ ಭಾರತ 25ನೇ ಸ್ಥಾನದಲ್ಲಿದೆ. ಈ ಸೂಚ್ಯಂಕದಲ್ಲಿ ಡೆನ್ಮಾರ್ಕ್ ಸತತವಾಗಿ ಐದನೇ ವರ್ಷ ಮೊದಲ ಸ್ಥಾನ ಪಡೆದುಕೊಂಡಿದೆ. ನೆದರ್ ಲ್ಯಾಂಡ್ ಮತ್ತು ಆಸ್ಟ್ರೇಲಿಯಾ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿದೆ. ರಾಷ್ಟ್ರೀಯ ಪಿಂಚಣೆ ವ್ಯವಸ್ಥೆಯಡಿ ತೆರಿಗೆ ವಿನಾಯತಿ ಹಾಗೂ ಅಟಲ್ ಪಿಂಚಣಿ ಯೋಜನೆ ಪಿಂಚಣಿ ಕ್ಷೇತ್ರದಲ್ಲಿ ಭಾರತ ಸುಧಾರಣೆಗೊಳ್ಳಲು ಪ್ರಮುಖ ಪಾತ್ರವಹಿಸಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ. 2015 ರಲ್ಲಿ ಈ ಸೂಚ್ಯಂಕದಲ್ಲಿ ಭಾರತ 40.3 ಅಂಕವನ್ನು ಗಳಿಸಿದ್ದರೆ, 2016 ರಲ್ಲಿ 43.3 ಅಂಕಗಳಿಸಿದೆ.

131. ಇತ್ತೀಚೆಗೆ ನಿಧನರಾದ "ಲಿಯೊನ್ ರಸ್ಸೆಲ್ (Leon Russel)" ಯಾವ ಕ್ಷೇತ್ರದಲ್ಲಿ ಪ್ರಸಿದ್ಧರಾಗಿದ್ದರು?

ಅ) ವಿಜ್ಞಾನ

ಆ) ಸಂಗೀತ

ಇ) ಸಾಹಿತ್ಯ

ಈ) ಕ್ರೀಡೆ

ಸಂಗೀತ

www.karunaduexams.com

ಖ್ಯಾತ ಸಂಗೀತಗಾರ ಹಾಗೂ ಗೀತರಚನೆಕಾರ ಲಿಯೊನ್ ರಸ್ಸೆಲ್ ನಿಧನರಾದರು. ರಸ್ಸೆಲ್ ರವರು 70ರ ದಶಕದಲ್ಲಿ ರಾಕ್ ಅಂಡ್ ರೋಲ್ ಸಂಗೀತ ಮೂಲಕ ವಿಶ್ವಮನ್ನಣೆಗಳಿಸಿದ್ದರು. 2011 ರಲ್ಲಿ ರಸ್ಸೆಲ್ ರವರು ರಾಕ್ ಅಂಡ್ ರೋಲ್ ಹಾಲ್ ಆಫ್ ಫೇಮ್ ಗೆ ಸೇರ್ಪಡೆಗೊಂಡಿದ್ದರು.

132. ಭಾರತದ ರಸ್ತೆ ಸಾಂದ್ರತೆ (Road Density) ಪ್ರತಿ ಚದರ ಕಿ.ಮೀ ಗೆ _______ ರಷ್ಟಿದೆ?

ಅ) 1.66 ಕಿ.ಮೀ

ಆ) 2.05 ಕಿ.ಮೀ

ಇ) 2.5 ಕಿ.ಮೀ

ಈ) 3.0 ಕಿ.ಮೀ

1.66 ಕಿ.ಮೀ

ದೇಶದ ರಸ್ತೆ ಸಾಂದ್ರತೆ ಪ್ರತಿ ಚದರ ಕಿ.ಮೀಗೆ 1.66 ಕಿ.ಮೀ ರಷ್ಟಿದೆ. ಈ ಪ್ರಮಾಣ ಜಪಾನ್, ಯುಎಸ್ಎ, ಚೀನಾ, ಬ್ರೆಜಿಲ್ ಮತ್ತು ರಷ್ಯಾಗಿಂತಲೂ ಅತಿ ಹೆಚ್ಚು.

133. "ಹರ್ ಘರ್ ಬಿಜ್ಲಿ ಲಗತಾರ್ (Har Ghar Bijli Lagataar)" ಕಾರ್ಯಕ್ರಮವನ್ನು ಜಾರಿಗೆ ತಂದ ರಾಜ್ಯ ಯಾವುದು?

ಅ) ಬಿಹಾರ

ಆ) ಒಡಿಶಾ

ಇ) ಚತ್ತೀಸಘರ್

ಈ) ರಾಜಸ್ತಾನ

ಒಡಿಶಾ

ಒಡಿಶಾ ಸರ್ಕಾರ ರಾಜ್ಯದ 50 ಲಕ್ಷ ಎಪಿಎಲ್ ಕುಟುಂಬಗಳಿಗೆ ಉಚಿತ ವಿದ್ಯುತ್ ಸಂಪರ್ಕ ಕಲ್ಪಿಸುವ ಹರ್ ಘರ್ ಬಿಜ್ಲಿ ಲಗತಾರ್ ಕಾರ್ಯಕ್ರಮವನ್ನು ಜಾರಿಗೊಳಿಸಿದೆ. ಮುಂದಿನ ಎರಡು ವರ್ಷಗಳಲ್ಲಿ ರಾಜ್ಯದ ಪ್ರತಿ ಕುಟಂಬಕ್ಕೂ ವಿದ್ಯುತ್ ಸಂಪರ್ಕ ಕಲ್ಪಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ.

134. ಭಾರತ-ಚೀನಾ ಜಂಟಿ ಮಿಲಿಟರಿ ಸಮರಾಭ್ಯಾಸ "ಹ್ಯಾಂಡ್ ಇನ್ ಹ್ಯಾಂಡ್" ಯಾವ ರಾಜ್ಯದಲ್ಲಿ ಆರಂಭಗೊಂಡಿದೆ?

ಅ) ಉತ್ತರಖಂಡ್

ಆ) ರಾಜಸ್ತಾನ

ಇ) ಮಹಾರಾಷ್ಟ್ರ

ಈ) ಜಮ್ಮು ಮತ್ತು ಕಾಶ್ಮೀರ

www.karunaduexams.com

ಮಹಾರಾಷ್ಟ್ರ

ಭಾರತ-ಚೀನಾ ಜಂಟಿ ಮಿಲಿಟರಿ ಸಮರಾಭ್ಯಾಸ "ಹ್ಯಾಂಡ್-ಇನ್-ಹ್ಯಾಂಡ್" ಆರನೇ ಆವೃತ್ತಿ ಮಹಾರಾಷ್ಟ್ರದ ಪುಣೆಯಲ್ಲಿರುವ ಔಂದ್ ಮಿಲಿಟರಿ ಕ್ಯಾಂಪ್ ನಲ್ಲಿ ಆರಂಭಗೊಂಡಿದೆ. ನವೆಂಬರ್ 15 ರಿಂದ ಆರಂಭಗೊಂಡ ಈ ಸಮರಾಭ್ಯಾಸ ನವೆಂಬರ್ 27 ರವರೆಗೆ ನಡೆಯಲಿದೆ.

135. 2016 ಶೋಡೌನ್ ಚಾಂಪಿಯನ್ ಷಿಪ್ ಗೆದ್ದ ಭಾರತದ ಚೆಸ್ ಆಟಗಾರ ಯಾರು?

ಅ) ಪಂಕಜ್ ಸಿಂಗ್

ಆ) ವಿಶ್ವನಾಥನ್ ಆನಂದ್

ಇ) ಕಿರಣ್ ಕಾರ್ತಿಕ್

ಈ) ಬಾಬು ಎಂ ಆರ್ ಲೋಹಿತ್

ವಿಶ್ವನಾಥನ್ ಆನಂದ್

ಭಾರತದ ಸ್ಟಾರ್ ಚೆಸ್ ಆಟಗಾರ ವಿಶ್ವನಾಥನ್ ಆನಂದ್ ಸೇಂಟ್ ಲೂಯಿಸ್ ಶೋಡೌನ್ ಚೆಸ್ ಕೂಟದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಜಪಾನ್ ನ ಹಿಕರು ನಕಮುರಾ ವಿರುದ್ದ ಗೆದ್ದು ಚಾಂಪಿಯನ್ ಪಟ್ಟ ಅಲಂಕರಿಸಿದ್ದಾರೆ.

136. 2016 ಇಂಗ್ಲೀಷ್ ಕೌಶಲ್ಯ ಶ್ರೇಯಾಂಕ (English Proficiency Ranking) ದಲ್ಲಿ ಭಾರತದ ಸ್ಥಾನ ______?

ಅ) 22

ಆ) 20

ಇ) 18

ಈ) 24

22

ಸ್ವೀಡಿಶ್ ಶೈಕ್ಷಣಿಕ ಸಂಸ್ಥೆ ಎಜುಕೇಷನ್ ಫಸ್ಟ್ ಹೊರತರುವ ಇಂಗ್ಲೀಷ್ ಕೌಶಲ್ಯ ಶ್ರೇಯಾಂಕದಲ್ಲಿ ಭಾರತ 22ನೇ ಸ್ಥಾನವನ್ನು ಪಡೆದುಕೊಂಡಿದೆ. ಕಳೆದ ವರ್ಷ ಭಾರತ 20ನೇ ಸ್ಥಾನದಲ್ಲಿತ್ತು. ಇಂಗ್ಲೀಷ್ ಭಾಷೆ ಮಾತನಾಡದ ರಾಷ್ಟ್ರಗಳಲ್ಲಿ ನೆದರ್ ಲ್ಯಾಂಡ್ ಯುವಕರು ಸರಾಗವಾಗಿ ಇಂಗ್ಲೀಷ್ ಮಾತನಾಡುವ ಮೂಲಕ ಮೊದಲ ಸ್ಥಾನದಲ್ಲಿದೆ. ಪಟ್ಟಿಯಲ್ಲಿ ಚೀನಾ 39ನೇ ಸ್ಥಾನ ಹಾಗೂ ಪಾಕಿಸ್ತಾನ 48ನೇ ಸ್ಥಾನದಲ್ಲಿದೆ.

137. ಇತ್ತೀಚೆಗೆ ಹಿಂದ್-ಇರಾನ್ ಪೋರ್ಟಲ್ (Hind-Iran Portal) ಅನ್ನು ಯಾವ ಉದ್ದೇಶಕ್ಕಾಗಿ ಆರಂಭಿಸಲಾಗಿದೆ?

ಅ) ವ್ಯಾಪಾರ



www.karunaduexams.com

ಆ) ಸಾಮಾಜಿಕ ಕಳವಳಿ

ಇ) ಶಿಕ್ಷಣ

ಈ) ಉದ್ಯಮ

ವ್ಯಾಪಾರ

ಹಿಂದ್-ಇರಾನ್ ಪೋರ್ಟಿನ್ ಅನ್ನು ಭಾರತ ಮತ್ತು ಇರಾನ್ ದೇಶಗಳ ನಡುವೆ ವ್ಯಾಪಾರವನ್ನು ಸುಲಭೀಕರಣಗೊಳಿಸಲು ಆರಂಭಿಸಲಾಗಿದೆ.

138. ಜಲ ಸಂಪನ್ಮೂಲ ನಿರ್ವಹಣೆ ಮತ್ತು ಕೃಷಿ ಸಂಬಂಧಿಸಿದಂತೆ ಭಾರತ ಇತ್ತೀಚೆಗೆ ಯಾವ ದೇಶದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ?

ಅ) ಯುಕೆ

ಆ) ಅಮೆರಿಕ

ಇ) ಇಸ್ರೇಲ್

ಈ) ಆಸ್ಟ್ರೇಲಿಯಾ

ಇಸ್ರೇಲ್

ಭಾರತ ಮತ್ತು ಇಸ್ರೇಲ್ ಜಲ ಸಂಪನ್ಮೂಲ ನಿರ್ವಹಣೆ ಮತ್ತು ಕೃಷಿ ಸಂಬಂಧಿಸಿದಂತೆ ಒಪ್ಪಂದಕ್ಕೆ ಸಹಿ ಹಾಕಿವೆ. ಭಾರತ ಪ್ರವಾಸದಲ್ಲಿರುವ ಇಸ್ರೇಲ್ ಅಧ್ಯಕ್ಷ ರುವೆನ್ ರಿವ್ಲಿನ್ ಮತ್ತು ಭಾರತ ಪ್ರಧಾನಿ ನರೇಂದ್ರ ಮೋದಿ ರವರ ನಡುವೆ ಈ ಒಪ್ಪಂದಗಳಿಗೆ ಸಹಿ ಹಾಕಲಾಯಿತು.

139. 2016 ವಿಶ್ವ ಇಂಟರ್ನೆಟ್ ಸಮ್ಮೇಳನ ಯಾವ ದೇಶದಲ್ಲಿ ನಡೆಯಲಿದೆ?

ಅ) ಭಾರತ

ಆ) ಚೀನಾ

ಇ) ರಷ್ಯಾ

ಈ) ಪಾಕಿಸ್ತಾನ

ಚೀನಾ

ಚೀನಾ ವುಝೆನ್ ನಲ್ಲಿ ಮೂರನೇ ವಿಶ್ವ ಇಂಟರ್ನೆಟ್ ಸಮ್ಮೇಳನ ನವೆಂಬರ್ 16 ರಂದು ಆರಂಭಗೊಳ್ಳಲಿದೆ. ಡಿಜಿಟಲ್ ಎಕಾನಮಿ ಬಗ್ಗೆ ಈ ಸಮ್ಮೇಳನದಲ್ಲಿ ಚರ್ಚಿಸಲಾಗುವುದು. ಸುಮಾರು 120 ದೇಶಗಳ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ.

140. ಇತ್ತೀಚೆಗೆ ಬಿಡುಗಡೆಗೊಂಡ ಟಾಪ್-500 ಸೂಪರ್ ಕಂಪ್ಯೂಟರ್ಸ್ ನಲ್ಲಿ ವಿಶ್ವದ ಅತ್ಯಂತ ವೇಗದ ಸೂಪರ್ ಕಂಪ್ಯೂಟರ್ ಯಾವುದು?

ಅ) ಟಿಯಾನ್ಹೆ-2



www.karunaduexams.com

ಆ) ಸನ್ ವೇ ಟೈಹುಲೈಟ್

ಇ) ಜಾಗ್ವರ್

ಈ) ಟ್ವಿಂಕಲ್

ಸನ್ ವೇ ಟೈಹುಲೈಟ್

ಇತ್ತೀಚೆಗೆ ಬಿಡುಗಡೆಗೊಂಡ ಟಾಪ್-500 ಸೂಪರ್ ಕಂಪ್ಯೂಟರ್ಸ್ ಪಟ್ಟಿಯಲ್ಲಿ ಚೀನಾದ ಸನ್ ವೇ ಟೈಹುಲೈಟ್ ಸೂಪರ್ ಕಂಪ್ಯೂಟರ್ ವಿಶ್ವದ ಅತ್ಯಂತ ವೇಗದ ಸೂಪರ್ ಕಂಪ್ಯೂಟರ್ ಎನಿಸಿದೆ. ಚೀನಾದ ನ್ಯಾಷನಲ್ ರಿಸರ್ಚ್ ಸೆಂಟರ್ ಆಫ್ ಪ್ಯಾರಲೆಲ್ ಕಂಪ್ಯೂಟರ್ ಎಂಜನಿಯರ್ ಅಂಡ್ ಟೆಕ್ನಾಲಜಿ ಇದನ್ನು ಅಭಿವೃದ್ದಿಪಡಿಸಿದೆ. ಟೈಹುಲೈಟ್ ಪ್ರತಿ ಸೆಕೆಂಡ್ ಗೆ 93 ಕ್ವಾಡ್ರಿಲಿಯನ್ ಕ್ಯಾಲುಕೇಷನ್ ಸಾಮರ್ಥ್ಯವನ್ನು ಹೊಂದಿದೆ.

141. ಇತ್ತೀಚೆಗೆ ಈ ಕೆಳಗಿನ ಯಾವ ರಾಜ್ಯ ಡಿಜಿಟಲ್ ಅಭಿಯಾನಕ್ಕಾಗಿ ಮೈಕ್ರೋಸಾಫ್ಟ್ ಸಂಸ್ಥೆಯೊಂದಿಗೆ ಒಡಂಬಡಿಕೆಗೆ ಸಹಿ ಹಾಕಿದೆ?

ಅ) ತೆಲಂಗಣ

ಆ) ಕೇರಳ

ಇ) ಮಹಾರಾಷ್ಟ್ರ

ಈ) ಗುಜರಾತ್

ತೆಲಂಗಣ

ತೆಲಂಗಣ ಸರ್ಕಾರ ಡಿಜಿಟಲ್ ತೆಲಂಗಣ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಮೈಕ್ರೋಸಾಫ್ಟ್ ಇಂಡಿಯಾದೊಂದಿಗೆ ಒಡಂಬಡಿಕೆಗೆ ಸಹಿ ಹಾಕಿದೆ. ಈ ಒಪ್ಪಂದದಡಿ ಮೊಬೈಲ್ ಆಧರಿತ ಮತ್ತು ಕ್ಲೌಡ್ ತಂತ್ರಜ್ಞಾನ ಅಭಿವೃದ್ದಿಗೆ ತೆಲಂಗಣ ಸರ್ಕಾರಕ್ಕೆ ಅಗತ್ಯ ಸಹಾಯವನ್ನು ನೀಡಲಿದೆ.

142. "2016 ರೊಲೆಕ್ಸ್ ಆವಾರ್ಡ್ ಫಾರ್ ಎಂಟರ್ಪ್ರೈಸ್ ಪ್ರಶಸ್ತಿ" ಪಡೆದ ಸೋನಂ ವಾಂಗ್ ಚುಕ್ ಯಾವ ದೇಶದವರು?

ಅ) ಚೀನಾ

ಆ) ಬಾಂಗ್ಲದೇಶ

ಇ) ಭಾರತ

ಈ) ಸಿಂಗಪುರ

ಭಾರತ

ಲಡಾಖ್ ನ ಪ್ರಖ್ಯಾತ ಶಿಕ್ಷಣ ತಜ್ಞ ಮತ್ತು ಸಮಾಜ ವಿಜ್ಞಾನಿ ಡಾ. ಸೋನಂ ವಾಂಗ್ ಚುಕ್ ಅವರಿಗೆ ಪ್ರತಿಷ್ಠಿತ 2016 ರೋಲೆಕ್ಸ್ ಆವಾರ್ಡ್ ಫಾರ್ ಎಂಟರ್ಪ್ರೈಸ್ ಪ್ರಶಸ್ತಿ ಲಭಿಸಿದೆ. ಲಡಾಖ್‌ನಂತಹ ದುರ್ಗಮ, ಪ್ರತಿಕೂಲ ವಾತಾವರಣದ ಅಲ್ಪ ಸೌಕರ್ಯದ ಪ್ರದೇಶದಲ್ಲಿ

www.karunaduexams.com

ತೊಟ್ಟು ನೀರಿಗೂ ಪರದಾಡುತ್ತಿದ್ದ ಅಲ್ಲಿನ ಜನತೆಗೆ ನೀರುಣಿಸುವ ಕೆಲಸ ಮಾಡಿದವರು ಸೋನಂ ವಾಂಗ್‌ಚುಕ್. ಸೋನಂ ವಾಂಗ್‌ಚುಕ್ ಅವರ ಸಮಾಜಮುಖೀ ಕೆಲಸಗಳನ್ನು ಪರಿಗಣಿಸಿ ಅವರಿಗೆ ಅಮೆರಿಕದ ಪ್ರತಿಷ್ಠಿತ ರೊಲೆಕ್ಸ್ ನಾವೀನ್ಯತಾ ಪ್ರಶಸ್ತಿ ಸಂದಿದೆ. ಲಡಾಖ್ ನಲ್ಲಿ ತಮ್ಮ ಆವಿಷ್ಕಾರದ ಮೂಲಕ ಮಂಜುಗಡ್ಡೆಯ ಸ್ತೂಪಗಳು ಅಥವಾ ಕೃತಕ ನೀರ್ಗಲ್ಲುಗಳನ್ನು ನಿರ್ಮಿಸಿದ್ದು, ಅವು ವಾತಾವರಣದ ಶಾಖದಿಂದ ಹಂತಹಂತವಾಗಿ ನೀರಾಗುವಂತೆ ಮಾಡಿ, ಪೈಪ್‌ಗಳ ಮೂಲಕ ಹರಿಸುವ ಪ್ಲಾನ್ ಮಾಡಿದ್ದಾರೆ. ಈ ಸ್ತೂಪಗಳು 35ರಿಂದ 40 ಮೀಟರ್ ಗಳಷ್ಟು ಎತ್ತರವಿದ್ದು ಸುಮಾರು 16 ಸಾವಿರ ಕ್ಯೂಬಿಕ್ ಲೀಟರ್ ನೀರನ್ನು ಹಿಡಿದಿಟ್ಟುಕೊಳ್ಳುತ್ತವೆ. ಮೂಲಕ ಸುಮಾರು 10 ಹೆಕ್ಟೇರ್ ಭೂಮಿಗೆ ನೀರುಣಿಸುವ ಪ್ರಯತ್ನ ಮಾಡಿದ್ದಾರೆ. 80-90 ಇಂತಹ ಸ್ತೂಪಗಳನ್ನು ವಾಂಗ್‌ಚುಕ್ ಅವರ ತಂಡ ನಿರ್ಮಾಣ ಮಾಡಿದ್ದು, ಲಡಾಖ್‌ನ ನೀರ ದಾಹ ತಣಿಸುವ ಕೆಲಸ ಮಾಡಿದ್ದಾರೆ.

143. ಅಮೆರಿಕದ ಪ್ರತಿಷ್ಠಿತ ರಿಪಬ್ಲಿಕನ್ ಗವರ್ನರ್‌ಗಳ ಸಂಘದ (ಆರ್ಜಿಎ) ಉಪಾಧ್ಯಕ್ಷರಾಗಿ ಆಯ್ಕೆಯಾದ ಭಾರತೀಯ ಮೂಲ ಮಹಿಳೆ ಯಾರು?

ಅ) ಪ್ರಮೀಳಾ ಜೋನಾಥನ್

ಆ) ಕಮಲ ಹ್ಯಾರಿಸ್

ಇ) ನಿಕ್ಕಿ ಹ್ಯಾಲೆ

ಈ) ಕೃಪಾ ಕೃಷ್ಣನ್

ನಿಕ್ಕಿ ಹ್ಯಾಲೆ

ದಕ್ಷಿಣ ಕರೊಲಿನಾದ ಗವರ್ನರ್ ಆಗಿರುವ ಭಾರತ ಮೂಲದ ಅಮೆರಿಕದ ಪ್ರಭಾವಿ ರಾಜಕಾರಣಿ ನಿಕ್ಕಿ ಹ್ಯಾಲೆ ಅವರು ಪ್ರತಿಷ್ಠಿತ ರಿಪಬ್ಲಿಕನ್ ಗವರ್ನರ್‌ಗಳ ಸಂಘದ (ಆರ್ ಜಿಎ ) ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ವಿಸ್ಕಾನ್ಸಿನ್ ಗವರ್ನರ್ ಸ್ಕಾಟ್ ವಾಲ್ಕರ್ ಆರ್‌ಜಿಎ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. 33 ರಾಜ್ಯಗಳು ರಿಪಬ್ಲಿಕನ್ ಗವರ್ನರ್‌ಗಳ ಹಿಡಿತದಲ್ಲಿದೆ.

144. ಅತಿ ಹೆಚ್ಚು ಹುಲಿಗಳನ್ನು ಹೊಂದಿರುವ ದೇಶದ ಮೊದಲ ಮೂರು ಹುಲಿ ಮೀಸಲು ಪ್ರದೇಶಗಳು ಯಾವುವು?

ಅ) ಜಿಮ್ ಕಾರ್ಬೆಟ್, ಬಂಡೀಪುರ, ಕಾಜೀರಂಗ

ಆ) ನಾಗರಹೊಳೆ, ಕನ್ಹಾ, ಬಂಡೀಪುರ

ಇ) ಜಿಮ್ ಕಾರ್ಬೆಟ್, ಕಾಜೀರಂಗ, ಬಂಡೀಪುರ

ಈ) ನಾಗರಹೊಳೆ, ಜಿಮ್ ಕಾರ್ಬೆಟ್, ಬಂಡೀಪುರ

ಜಿಮ್ ಕಾರ್ಬೆಟ್, ಬಂಡೀಪುರ, ಕಾಜೀರಂಗ

www.karunaduexams.com

ಜಿಮ್ ಕಾರ್ಬೆಟ್ ಹುಲಿ ಸಂರಕ್ಷಿತ ಪ್ರದೇಶ (261), ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ (134) ಮತ್ತು ಕಾಜೀರಂಗ ಹುಲಿ ಸಂರಕ್ಷಿತ ಪ್ರದೇಶ (115) ಅತಿ ಹೆಚ್ಚು ಹುಲಿಗಳನ್ನು ಹೊಂದಿರುವ ಮೂಲಕ ಮೊದಲ ಮೂರು ಸ್ಥಾನದಲ್ಲಿವೆ.

145. ಆಕ್ಸಫರ್ಡ್ ನಿಘಂಟಿನ ಪ್ರಕಾರ ಯು.ಕೆ ಯಲ್ಲಿ ಅತ್ಯಂತ ಸಾಮಾನ್ಯವಾಗಿರುವ ಭಾರತೀಯ ಉಪನಾಮ (Surname) ಯಾವುದು?

ಅ) ಪಟೇಲ್

ಆ) ಸಿಂಗ್

ಇ) ಚಕ್ರವರ್ತಿ

ಈ) ನಾಯಕ್

ಪಟೇಲ್

ಆಕ್ಸಫರ್ಡ್ ನಿಘಂಟಿನ ಪ್ರಕಾರ ಪಟೇಲ ಯು.ಕೆ ಯಲ್ಲಿ ಅತ್ಯಂತ ಸಾಮಾನ್ಯವಾದ ಭಾರತೀಯ ಉಪನಾಮವಾಗಿ ಹೊರಹೊಮ್ಮಿದೆ. 2011ರ ಜನಗಣತಿ ಪ್ರಕಾರ ಬ್ರಿಟನ್ ನಲ್ಲಿ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಜನರು ಪಟೇಲ ಉಪನಾಮವನ್ನು ಹೊಂದಿದ್ದಾರೆ. ಎರಡನೇ ಸ್ಥಾನದಲ್ಲಿ ಚಕ್ರವರ್ತಿ ಉಪನಾಮ ಹೊರಹೊಮ್ಮಿದೆ.

146. 60ನೇ ರಾಷ್ಟ್ರೀಯ ಶಾಟ್‌ಗನ್ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕವನ್ನು ಗೆದ್ದುಕೊಂಡವರು ______?

ಅ) ಅಧಿರಾಜ್ ಸಿಂಗ್ ರಾಥೋಡ್

ಆ) ಮಾನವಜಿತ್ ಸಿಂಗ್ ಸಂಧು

ಇ) ಮಾನವಾದಿತ್ಯ ಸಿಂಗ್ ರಾಥೋಡ್

ಈ) ಲಕ್ಷ್ಯ ಶರಣ್

ಮಾನವಜಿತ್ ಸಿಂಗ್ ಸಂಧು

ಪಂಜಾಬ್‌ನ ಮಾನವಜಿತ್ ಸಿಂಗ್ ಸಂಧು 60ನೇ ರಾಷ್ಟ್ರೀಯ ಶಾಟ್‌ಗನ್ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡರು. ಪುರುಷರ ಟ್ರ್ಯಾಪ್ ವಿಭಾಗದ ಫೈನಲ್‌ನಲ್ಲಿ ಒಟ್ಟು 14ರಲ್ಲಿ 13 ಪಾಯಿಂಟ್ಸ್ ಕಲೆ ಹಾಕುವ ಮೂಲಕ ಸಂಧು ಸಮೀಪದ ಸ್ಪರ್ಧಿ ಒಡಿಶಾದ ರವೀಂದರ್ ಸಿಂಗ್ ಅವರನ್ನು ಮಣಿಸಿದರು.

147. ನಿಷೇಧಿತ ಉದ್ದೀಪನಾ ಮದ್ದು ಸೇವನೆಯಿಂದ ಎಂಟು ವರ್ಷ ನಿಷೇಧ ಶಿಕ್ಷೆಗೆ ಒಳಗಾಗಿರುವ ಭಾರತದ ಅಥ್ಲೇಟಿಕ್ ಯಾರು?

ಅ) ಧರ್ಮವೀರ್ ಸಿಂಗ್

ಆ) ನರಸಿಂಗ ದತ್ತ್

ಇ) ಅಶೋಕ್ ಚಾವ್ಹಾಣ

ಈ) ರಮೇಶ್ ತೋಪರ್

ಧರ್ಮವೀರ್ ಸಿಂಗ್

ನಿಷೇಧಿತ ಉದ್ದೀಪನಾ ಮದ್ದು ಸೇವಿಸಿದ್ದು ಪರೀಕ್ಷಾ ವರದಿಯಿಂದ ಸಾಬೀತಾಗಿರುವುದರಿಂದ ಹರಿಯಾಣದ ಅಥ್ಲೀಟ್ ಧರ್ಮವೀರ್ ಸಿಂಗ್ ಮೇಲೆ ರಾಷ್ಟ್ರೀಯ ಉದ್ದೀಪನಾ ಮದ್ದು ತಡೆ ಘಟಕ (ನಾಡಾ) ಎಂಟು ವರ್ಷ ನಿಷೇಧ ಶಿಕ್ಷೆ ವಿಧಿಸಿದೆ. ಧರ್ಮವೀರ್ ನಾಲ್ಕು ವರ್ಷಗಳ ಹಿಂದೆ ರಾಷ್ಟ್ರೀಯ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ 100 ಮೀಟರ್ಸ್ ಓಟದ ಸ್ಪರ್ಧೆಯಲ್ಲಿ ಚಿನ್ನದ ಸಾಧನೆ ಮಾಡಿದ್ದರು. ಬ್ರೆಜಿಲ್‌ನ ರಿಯೊ ಡಿ ಜನ್ಯೆರೊದಲ್ಲಿ ನಡೆದ ಒಲಿಂಪಿಕ್ಸ್‌ಗೂ ಅರ್ಹತೆ ಪಡೆದುಕೊಂಡಿದ್ದರು. ಮದ್ದು ಸೇವಿಸಿದ ಆರೋಪವಿದ್ದ ಕಾರಣ ಕೊನೆಯಲ್ಲಿ ಒಲಿಂಪಿಕ್ಸ್ ನಲ್ಲಿ ಪಾಲ್ಗೊಳ್ಳುವ ಅವಕಾಶ ಕಳೆದುಕೊಂಡಿದ್ದರು. ಧರ್ಮವೀರ್ ಅವರನ್ನು ಎರಡೂ ಸಲ ಪರೀಕ್ಷೆಗೆ ಒಳಪಡಿಸಿದ್ದಾಗ ಮದ್ದು ಸೇವಿಸಿದ್ದು ಸಾಬೀತಾಗಿದೆ. ಆದ್ದರಿಂದ ನಾಡಾ ಎಂಟು ವರ್ಷ ನಿಷೇಧ ಹೇರಿದೆ.

148. "ಎ ಸೀಸನ್ ಆಫ್ ಘೋಸ್ಟ್ಸ್ (A Season of Ghosts)" ಪುಸ್ತಕದ ಲೇಖಕರು ____?

ಅ) ರಸ್ಕಿನ್ ಬಾಂಡ್

ಆ) ಮಿಲನ್ ಗಂಗೂಲಿ

ಇ) ಚೇತನ್ ಭಗತ್

ಈ) ಅಮಿತಾವ್ ಘೋಷ್

ರಸ್ಕಿನ್ ಬಾಂಡ್

ಖ್ಯಾತ ಲೇಖಕ ರಸ್ಕಿನ್ ಬಾಂಡ್ ಅವರು "ಎ ಸೀಸನ್ ಆಫ್ ಘೋಸ್ಟ್ಸ್" ಪುಸ್ತಕವನ್ನು ಬರೆದಿದ್ದಾರೆ.

149. 2016 ಗ್ಲೋಬಲ್ ಸಿಟಿಜನ್ ಇಂಡಿಯಾ ಉತ್ಸವ ಯಾವ ನಗದರದಲ್ಲಿ ನಡೆಯಲಿದೆ?

ಅ) ನವದೆಹಲಿ

ಆ) ಮುಂಬೈ

ಇ) ಹೈದ್ರಾಬಾದ್

ಈ) ಕೊಲ್ಕತ್ತಾ

ಮುಂಬೈ

2016 ಗ್ಲೋಬಲ್ ಸಿಟಿಜನ್ ಇಂಡಿಯಾ ಉತ್ಸವ ಮುಂಬೈ. ಮಹಾರಾಷ್ಟ್ರದಲ್ಲಿ ನಡೆಯಲಿದೆ. ಜನಪ್ರಿಯ ಸಂಸ್ಕೃತಿ ಮತ್ತು ಸಾರ್ವಜನಿಕ ನೀತಿಯನ್ನು ಒಟ್ಟಿಗೆ ತರುವಲ್ಲಿ ಈ ಉತ್ಸವ ವೇದಿಕೆಯಾಗಲಿದೆ.

www.karunaduexams.com

150. ಇತ್ತೀಚೆಗೆ “2016 ರಾದ್ ಉಲ್ ಬರ್ಕ್ (Raad ul Barq)” ಮಿಲಿಟರಿ ಸಮರಾಭ್ಯಾಸ ನಡೆಸಿದ ದೇಶ ಯಾವುದು?

ಅ) ಪಾಕಿಸ್ತಾನ

ಆ) ಆಫ್ಘಾನಿಸ್ತಾನ

ಇ) ಬಾಂಗ್ಲದೇಶ

ಈ) ಮ್ಯಾನ್ಮಾರ್

ಪಾಕಿಸ್ತಾನ

ಭಾರತದ ಗಡಿಗೆ ತಾಗಿಕೊಂಡಿರುವ ಪಂಜಾಬ್ ಪ್ರಾಂತ್ಯದ ಸೇನಾ ನೆಲೆಯಲ್ಲಿ ಪಾಕಿಸ್ತಾನ ದೊಡ್ಡ ಪ್ರಮಾಣದ ಸಮರಾಭ್ಯಾಸ ನಡೆಸಿದೆ. ಬಹಾವಲ್ಪುರ ಪಟ್ಟಣದ ಖೈರ್‌ಪುರ ತಮೀವಾಲಿ ಎಂಬಲ್ಲಿ ನಡೆದ ಸಮರಾಭ್ಯಾಸಕ್ಕೆ ‘ರಾದ್ ಉಲ್ ಬರ್ಕ್’ ಎಂಬ ಹೆಸರಿಡಲಾಗಿತ್ತು. ಬಹಾವಲ್ಪುರ ಪಟ್ಟಣ ರಾಜಸ್ತಾನದ ಗಡಿ ಸಮೀಪದಲ್ಲಿದೆ. ಸಮರಾಭ್ಯಾಸದಲ್ಲಿ ಜೆಎಫ್–17 ಯುದ್ದ ವಿಮಾನಗಳು, ಹೆಲಿಕಾಪ್ಟರ್‌ಗಳು ಮತ್ತು ಅಲ್ ಖಾಲಿದ್ ಟ್ಯಾಂಕ್‌ಗಳನ್ನು ಬಳಸಿ ನಿರ್ದಿಷ್ಟ ಗುರಿಗೆ ದಾಳಿಯಿಡುವ ಕಸರತ್ತು ನಡೆಸಲಾಗಿದೆ.

151. ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ (National Legal Service Authority)ದ ನೂತನ ಅಧ್ಯಕ್ಷರು ಯಾರು?

ಅ) ನ್ಯಾ. ಗೋಪಾಲ ಗೌಡ

ಆ) ನ್ಯಾ. ಜೆ ಎಸ್ ಖೇಹರ್

ಇ) ನ್ಯಾ. ದೀಪಕ್ ಮಿಶ್ರಾ

ಈ) ನ್ಯಾ. ಉದಯ್ ಕುಮಾರ್

ನ್ಯಾ. ಜೆ ಎಸ್ ಖೇಹರ್

ಸುಪ್ರೀಂ ಕೋರ್ಟ್ ನ್ಯಾಯಾಧೀಶರಾದ ನ್ಯಾಯಮೂರ್ತಿ ಜಗದೀಶ್ ಸಿಂಗ್ ಖೇಹರ್ ರವರನ್ನು ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ಕೇಂದ್ರ ಸರ್ಕಾರ ನೇಮಕ ಮಾಡಿದೆ. ಸುಪ್ರೀಂಕೋರ್ಟ್ ನ್ಯಾಯಾಧೀಶರಾದ ಅನಿಲ್ ಆರ್ ಧಾವೆ ಅವರ ನಿವೃತ್ತಿಯಾದ ಕಾರಣ ಈ ಹುದ್ದೆ ತೆರವಾಗಿತ್ತು. ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರವನ್ನು ಕಾನೂನು ಸೇವಾ ಪ್ರಾಧಿಕಾರ ಕಾಯಿದೆ-1997 ರಡಿ ಡಿಸೆಂಬರ್ 5, 1995 ರಂದು ಸ್ಥಾಪಿಸಲಾಗಿದೆ. ಅರ್ಹರಿಗೆ ಉಚಿತ ಕಾನೂನು ಸೇವೆಯನ್ನು ನೀಡುವುದು ಹಾಗೂ ಬಾಕಿ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಲೋಕಾದಲತ್ ನಡೆಸುವುದು ಈ ಪ್ರಾಧಿಕಾರದ ಕರ್ತವ್ಯ.

152. "ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಸೊವ ರಿಗ್ಪ (National Institute of Sowa Rigpa)" ಯಾವ ರಾಜ್ಯದಲ್ಲಿ ಸ್ಥಾಪಿನೆಯಾಗಲಿದೆ?

ಅ) ಸಿಕ್ಕಿಂ

ಆ) ಜಮ್ಮು ಮತ್ತು ಕಾಶ್ಮೀರ

ಇ) ಹರಿಯಾಣ

ಈ) ಉತ್ತರಖಂಡ್

ಜಮ್ಮು ಮತ್ತು ಕಾಶ್ಮೀರ

ನ್ಯಾಷನಲ್ ಇನ್ಸ್ಟಿಟ್ಯೂಟ್ ಆಪ್ ಸೊವ ರಿಗ್ಪ ಜಮ್ಮು ಮತ್ತು ಕಾಶ್ಮೀರದ ಲೇಹ್ ನಲ್ಲಿ ಸ್ಥಾಪಿಸಲಾಗುವುದು. ಸೊವ ರಿಗ್ಪ ಎಂದರೆ ಟಿಬೆಟ್ ನ ಪ್ರಾಚೀನ ಕಾಲದ ಔಷಧಿ ಚಿಕಿತ್ಸೆ. ಈ ವಿಧಾನದ ಚಿಕಿತ್ಸೆಯನ್ನು ಗೌತಮ ಬುದ್ಧ ಆರಂಭಿಸಿದ್ದಾಗಿ ಹೇಳಲಾಗಿದೆ. ಭಾರತದಲ್ಲಿ ಲೇಹ್, ಡಾರ್ಜಲಿಂಗ್, ಸಿಕ್ಕಿಂ, ಲಡಾಕ್ ಮತ್ತು ಅರುಣಾಚಲ ಪ್ರದೇಶದ ಕೆಲವು ಭಾಗಗಳಲ್ಲಿ ಈ ಚಿಕಿತ್ಸಾ ಪದ್ದತಿ ಚಾಲ್ತಿಯಲ್ಲಿದೆ. ಭಾರತ ಸರ್ಕಾರ ಇಂಡಿಯನ್ ಮೆಡಿಸಿನ್ ಕೌನ್ಸಿಲ್ ಆಕ್ಟ್-2010 ತಿದ್ದುಪಡಿ ತರುವ ಮೂಲಕ ಸೊವ ರಿಗ್ಪ ಚಿಕಿತ್ಸೆಯನ್ನು ಮಾನ್ಯತೆಗೊಳಿಸಿದೆ.

153. ವಿಶ್ವಸಂಸ್ಥೆಯ ಅಂತಾರಾಷ್ಟ್ರೀಯ ಸಹಿಷ್ಣುತೆ ದಿನ (International Tolerance Day) ಯಾವ ದಿನದಂದು ಆಚರಿಸಲಾಗುತ್ತದೆ?

ಅ) ನವೆಂಬರ್ 15

ಆ) ನವೆಂಬರ್ 16

ಇ) ನವೆಂಬರ್ 17

ಈ) ನವೆಂಬರ್ 18

ನವೆಂಬರ್ 16

ನವೆಂಬರ್ 16 ರಂದು ಪ್ರತಿ ವರ್ಷ ವಿಶ್ವಸಂಸ್ಥೆಯ ಅಂತಾರಾಷ್ಟ್ರೀಯ ಸಹಿಷ್ಣುತೆ ದಿನವನ್ನು ಆಚರಿಸಲಾಗುತ್ತದೆ. ವಿವಿಧ ಸಂಸ್ಕೃತಿಗಳು ಮತ್ತು ಜನರ ಮಧ್ಯೆ ಹೊಂದಾಣಿಕೆ ಮತ್ತು ಪರಸ್ಪರ ನಂಬಿಕೆಗಳು ಹೆಚ್ಚಬೇಕು. ಜಾತಿ, ಜನಾಂಗ, ಧರ್ಮದ ಕುರಿತು ಅಸಹಿಷ್ಣುತೆ ಧೋರಣೆ ತಾಳಬಾರದೆಂಬುದು ಈ ದಿನದ ಮಹತ್ವ. 1996 ರಿಂದ ಈ ದಿನವನ್ನು ಆಚರಿಸಲಾಗುತ್ತಿದೆ.

154. ನೋಟು ಅಮಾನ್ಯ ತೀರ್ಮಾನವನ್ನು ನಿರ್ಣಯ ಮೂಲಕ ಅಂಗೀಕರಿಸಿದ ದೇಶದ ಮೊದಲ ರಾಜ್ಯ ಯಾವುದು?

ಅ) ಚತ್ತೀಸಘರ್

ಆ) ಜಾರ್ಖಂಡ್



www.karunaduexams.com

ಇ) ಅಸ್ಸಾಂ

ಈ) ಗುಜರಾತ್

ಚತ್ತೀಸಘರ್

ಅಧಿಕ ಮೌಲ್ಯದ ನೋಟು ಅಮಾನ್ಯ ಮಾಡಿರುವ ಕೇಂದ್ರ ಸರ್ಕಾರದ ಕ್ರಮವನ್ನು ಸ್ವಾಗತಿಸಿರುವ ಚತ್ತೀಸಘರ್ ರಾಜ್ಯ ಸರ್ಕಾರ ಅಮಾನ್ಯ ತೀರ್ಮಾನವನ್ನು ರಾಜ್ಯ ವಿಧಾನಸಭೆಯಲ್ಲಿ ನಿರ್ಣಯ ಮಂಡಿಸಿ ಅಂಗೀಕರಿಸಿದೆ. ಆ ಮೂಲಕ ನೋಟು ಅಮಾನ್ಯವನ್ನು ಅಂಗೀಕರಿಸಿದ ದೇಶದ ಮೊದಲ ರಾಜ್ಯವೆನಿಸಿದೆ.

155. ಇತ್ತೀಚೆಗೆ ಪ್ರಧಾನಿ ಮೋದಿ ರವರು "ಮೋಪ ಹಸಿರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ" ಯಾವ ರಾಜ್ಯದಲ್ಲಿ ಶಂಕುಸ್ಥಾಪನೆ ನೇರವೇರಿಸಿದರು?

ಅ) ಕೇರಳ

ಆ) ಗೋವಾ

ಇ) ಮಹಾರಾಷ್ಟ್ರ

ಈ) ರಾಜಸ್ತಾನ

ಗೋವಾ

ಪ್ರಧಾನ ನರೇಂದ್ರ ಮೋದಿ ಅವರು ಮೋಪ ಹಸಿರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಗೋವಾದಲ್ಲಿ ಶಂಕು ಸ್ಥಾಪನೆ ನೆರವೇರಿಸಿದರು. 2017 ರಿಂದ ಈ ವಿಮಾನ ನಿಲ್ದಾಣ ನಿರ್ಮಾಣ ಕಾಮಗಾರಿ ಆರಂಭವಾಗಲಿದ್ದು, ಜಿಎಂಆರ್ ಕನ್ಸ್ಟ್ರಕ್ಷನ್ ವಹಿಸಿಕೊಂಡಿದೆ. ವಿಮಾನ ನಿಲ್ದಾಣದ ಮೊದಲ ಹಂತ 2020 ರ ಅವಧಿಗೆ ಪೂರ್ಣಗೊಳ್ಳಲಿದೆ.

156. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ದೇಶದಲ್ಲಿ ಅತಿ ಹೆಚ್ಚು ಅಂತರ್ಜಾಲ ಬಳಕೆದಾರರನ್ನು ಹೊಂದಿರುವ ರಾಜ್ಯ ಯಾವುದು?

ಅ) ಹಿಮಾಚಲ ಪ್ರದೇಶ

ಆ) ಕೇರಳ

ಇ) ಮಹಾರಾಷ್ಟ್ರ

ಈ) ಕರ್ನಾಟಕ

ಮಹಾರಾಷ್ಟ್ರ

ದೇಶದಲ್ಲಿ ಅತಿ ಹೆಚ್ಚು ಅಂತರ್ಜಾಲ ಬಳಕೆದಾರರನ್ನು ಹೊಂದಿರುವ ರಾಜ್ಯಗಳ ಸಾಲಿನಲ್ಲಿ ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದೆ. ಮಹಾರಾಷ್ಟ್ರದಲ್ಲಿ 2.9 ಕೋಟಿ ಜನ ಅಂತರ್ಜಾಲ ಬಳಸುತ್ತಿದ್ದಾರೆ. ನಂತರದ ಮೂರು ಸ್ಥಾನಗಳಲ್ಲಿ ಕ್ರಮವಾಗಿ ತಮಿಳುನಾಡು, ಆಂಧ್ರ ಪ್ರದೇಶ ಮತ್ತು ಕರ್ನಾಟಕ ರಾಜ್ಯಗಳಿವೆ. ಹಿಮಾಚಲ ಪ್ರದೇಶ

www.karunaduexams.com

ಕೊನೆಯ ಸ್ಥಾನದಲ್ಲಿದೆ. ಕೇಂದ್ರ ಸರ್ಕಾರದ ದತ್ತಾಂಶದ ಪ್ರಕಾರ, 2016ರ ಮಾರ್ಚ್ ಅಂತ್ಯಕ್ಕೆ ಭಾರತದಲ್ಲಿ 34.26 ಕೋಟಿ ಮಂದಿ ಅಂತರ್ಜಾಲವನ್ನು ಬಳಸುತ್ತಿದ್ದಾರೆ. ಎರಡನೇ ಸ್ಥಾನದಲ್ಲಿರುವ ತಮಿಳುನಾಡಿನಲ್ಲಿ 2.8 ಕೋಟಿ, ಆಂಧ್ರದಲ್ಲಿ 2.4 ಕೋಟಿ ಹಾಗೂ ಕರ್ನಾಟಕದಲ್ಲಿ 2.2 ಕೋಟಿ ಜನರು ಅಂತರ್ಜಾಲ ಬಳಸುತ್ತಿದ್ದಾರೆ. ಕೊನೆಯ ಸ್ಥಾನದಲ್ಲಿರುವ ಹಿಮಾಚಲಪ್ರದೇಶದಲ್ಲಿ ಕೇವಲ 30.2 ಲಕ್ಷ ಜನರು ಮಾತ್ರ ಅಂತರ್ಜಾಲ ಸೇವೆ ಬಳಸುತ್ತಿದ್ದಾರೆ. ಅಂತರ್ಜಾಲ ಬಳಸುವ ಒಟ್ಟು 34.2 ಕೋಟಿ ಜನರಲ್ಲಿ ಶೇ. 67ರಷ್ಟು ನಗರ ಪ್ರದೇಶದವರು. 2016 ಫೆಬ್ರುವರಿ ಅಂತ್ಯದವರೆಗಿನ ಮಾಹಿತಿ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ 11.2 ಕೋಟಿ ಜನರು ಅಂತರ್ಜಾಲ ಬಳಸುತ್ತಿದ್ದಾರೆ.

157. ಡಾ. ನಾಗೇಂದ್ರ ಸಿಂಗ್ ಅಂತಾರಾಷ್ಟ್ರೀಯ ಶಾಂತಿ ಪ್ರಶಸ್ತಿಯನ್ನು ಯಾರಿಗೆ ನೀಡಲಾಗಿದೆ?

ಅ) ಅಣ್ಣಾ ಹಜಾರೆ

ಆ) ರವಿಶಂಕರ್ ಗುರೂಜಿ

ಇ) ನರೇಂದ್ರ ಮೋದಿ

ಈ) ಪ್ರಣಬ್ ಮುಖರ್ಜಿ

ರವಿಶಂಕರ್ ಗುರೂಜಿ

ಆಧ್ಯಾತ್ಮಿಕ ಗುರು ಶ್ರೀ ರವಿ ಶಂಕರ್ ಗುರೂಜಿ ಅವರಿಗೆ ಡಾ. ನಾಗೇಂದ್ರ ಸಿಂಗ್ ಅಂತಾರಾಷ್ಟ್ರೀಯ ಶಾಂತಿ ಪ್ರಶಸ್ತಿಯನ್ನು ನೀಡಲಾಗಿದೆ. ನವದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಕೇಂದ್ರ ಗೃಹ ಸಚಿವ ರಾಜನಾಥ್ ಸಿಂಗ್ ಅವರು ಪ್ರಶಸ್ತಿಯನ್ನು ರವಿಶಂಕರ್ ಗುರೂಜಿ ಅವರಿಗೆ ನೀಡಿದರು. ಪ್ರಶಸ್ತಿಯನ್ನು ಅಂತಾರಾಷ್ಟ್ರೀಯ ನ್ಯಾಯಾಲಯದಲ್ಲಿ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದ ಮೊದಲ ಭಾರತೀಯ ಡಾ. ನಾಗೇಂದ್ರ ಸಿಂಗ್ ಅವರ ನೆನಪಿನಲ್ಲಿ ಸ್ಥಾಪಿಸಲಾಗಿದೆ.

158. ಜಿಇ ಡಿಜಿಟಲ್ನ "2016 ಡಿಜಿಟಲ್ ಇನ್ನೋವೆಟರ್ ಆಫ್ ದಿ ಇಯರ್" ಗೌರವಕ್ಕೆ ಪಾತ್ರವಾದ ಸಂಸ್ಥೆ ಯಾವುದು?

ಅ) ಅದಾನಿ ಗ್ರೂಫ್

ಆ) ಇನ್ಫೋಸಿಸ್

ಇ) ಟಾಟಾ ಕನ್ಸಲ್ಟೆನ್ಸಿ ಸರ್ವೀಸ್ಸ

ಈ) ಜೆಡಿ ಮಾರ್ಗನ್

www.karunaduexams.com

ದೇಶದ ಪ್ರಮುಖ ಸಾಫ್ಟ್ ವೇರ್ ಸಂಸ್ಥೆಗಳಲ್ಲಿ ಒಂದಾದ ಟಾಟಾ ಕನ್ಸಲ್ಟೆನ್ಸಿ ಸರ್ವೀಸ್ಸ್ ಸಂಸ್ಥೆಗೆ ಜಿಇ ಡಿಜಿಟಲ್ ನೀಡುವ 2016 ಡಿಜಿಟಲ್ ಇನ್ನೊವೆಟರ್ ಆಫ್ ದಿ ಇಯರ್ ಪ್ರಶಸ್ತಿಯನ್ನು ಸಾನ್ ಫ್ರಾನ್ಸಿಸ್ಕೊ, ಅಮೆರಿಕ ದಲ್ಲಿ ನೀಡಲಾಯಿತು. ಟಿಸಿಎಸ್ ಅಭಿವೃದ್ಧಿ ಪಡಿಸಿರುವ ಟಿಸಿಎಸ್ ಡಿಜಿಟಲ್ ಸ್ಟೋರ್ ನಾವೀನ್ಯತೆಗಾಗಿ ಈ ಪ್ರಶಸ್ತಿಯನ್ನು ನೀಡಲಾಗಿದೆ.

159. ಈ ಕೆಳಗಿನ ಯಾವ ರಾಜ್ಯದಲ್ಲಿ 2016 ಗ್ರೇಟ್ ಇಂಡಿಯನ್ ಫಿಲ್ಮ್ ಅಂಡ್ ಲಿಟರೇಚರ್ ಫೆಸ್ಟಿವಲ್ (Great Indian Film and Literature Festival) ನಡೆಯಲಿದೆ?

ಅ) ಹರಿಯಾಣ

ಆ) ರಾಜಸ್ಥಾನ

ಇ) ಪಂಜಾಬ್

ಈ) ಪಶ್ಚಿಮ ಬಂಗಾಳ

ಹರಿಯಾಣ

ಹರಿಯಾಣದ ಗುರುಗ್ರಾಮದಲ್ಲಿ 2016 ಗ್ರೇಟ್ ಇಂಡಿಯನ್ ಫಿಲ್ಮ್ ಅಂಡ್ ಲಿಟರೇಚರ್ ಫೆಸ್ಟಿವಲ್ ಡಿಸೆಂಬರ್ 2 ರಿಂದ ನಡೆಯಲಿದೆ. ಭಾರತೀಯ ಸಿನಿಮಾ ಮತ್ತು ಸಾಹಿತ್ಯ ಮಹತ್ವವನ್ನು ಈ ಉತ್ಸವದಲ್ಲಿ ಪ್ರದರ್ಶಿಸಲಾಗುವುದು. ಮೂರು ದಿನಗಳ ಕಾಲ ನಡೆಯುವ ಉತ್ಸವದಲ್ಲಿ ಭಾರತೀಯ ಸಿನಿಮಾ ರಂಗ, ಡಿಜಿಟಲ್ ಮೀಡಿಯಾ, ಜಾಹೀರಾತು, ಮುಂತಾದ ವಿಷಯಗಳ ಬಗ್ಗೆ ಚರ್ಚಿಸಲಾಗುವುದು.

160. 2016 ಚೀನಾ ಬ್ಯಾಡ್ಮಿಂಟನ್ ಓಪನ್ ಟೂರ್ನಿಯಲ್ಲಿ ಪಿ ವಿ ಸಿಂಧು ಯಾರನ್ನು ಮಣಿಸುವ ಮೂಲಕ ಚಾಂಪಿಯನ್ ಆದರು?

ಅ) ಸನ್ ಯು

ಆ) ಶಿಂಗ್ ಕಿ ಸನ್

ಇ) ಕರೋಲಿನ ಮರಿನ್

ಈ) ಸಂಗ್ ಕಿ ಸೂಯಿ

ಸನ್ ಯು

ಒಲಿಂಪಿಕ್‌ನಲ್ಲಿ ಬೆಳ್ಳಿ ಪದಕ ವಿಜೇತೆ ಪಿ.ವಿ ಸಿಂಧು ಚೀನಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಫೈನಲ್ ಪಂದ್ಯದಲ್ಲಿ ಎಂಟನೇ ಶ್ರೇಯಾಂಕದ ಸ್ಥಳೀಯ ಆಟಗಾರ್ತಿ ಸನ್ ಯು ಅವರನ್ನು 21-11, 17-21, 21-11 ಸೆಟ್‌ಗಳ ಅಂತರದಲ್ಲಿ ಮಣಿಸಿ ಚೀನಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದಾರೆ.

www.karunaduexams.com

161. ಈ ಕೆಳಗಿನ ರಾಜ್ಯಗಳನ್ನು ಗಮನಿಸಿ:

I) ಅರುಣಾಚಲ ಪ್ರದೇಶ

II) ಸಿಕ್ಕಿಂ

III) ನಾಗಾಲ್ಯಾಂಡ್

IV) ಮಿಜೋರಾಂ

V) ಮಣಿಪುರ

ಈ ಮೇಲಿನ ಯಾವ ರಾಜ್ಯಗಳ ಬುಡಕಟ್ಟು ಜನರು ಆದಾಯ ತೆರಿಗೆ ಪಾವತಿಯಿಂದ ವಿನಾಯತಿ ನೀಡಲಾಗಿದೆ?

ಅ) I, II & III

ಆ) II, III & IV

ಇ) I, III, IV & V

ಈ) ಮೇಲಿನ ಎಲ್ಲವೂ

I, III, IV & V

ಈಶಾನ್ಯ ಭಾಗದ ಐದು ರಾಜ್ಯಗಳಾದ ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಮಣಿಪುರ, ಮಿಜೋರಾಂ ಮತ್ತು ತ್ರಿಪುರದ ಬುಡಕಟ್ಟು ಜನರು ಆದಾಯ ತೆರಿಗೆ ಪಾವತಿಸುವುದರಿಂದ ವಿನಾಯತಿ ನೀಡಲಾಗಿದೆ.

162. 2016 ಮದರ್ ತೆರೆಸಾ ಮೆಮೊರಿಯಲ್ ಇಂಟರ್ನ್ಯಾಷನಲ್ ಆವಾರ್ಡ್ ಫಾರ್ ಸೋಶಿಯಲ್ ಜಸ್ಟೀಸ್ ಅನ್ನು ಯಾರಿಗೆ ನೀಡಲಾಗಿದೆ?

ಅ) ಮಹಮ್ಮದ್ ಹಮೀರ್

ಆ) ಫರಾಜ್ ಅಯಾಜ್ ಹುಸೇನ್

ಇ) ಅಬಿಂತ ಕಬೀರ್

ಈ) ಇಮ್ರಾನ್ ಹಸೀಫ್

ಫರಾಜ್ ಅಯಾಜ್ ಹುಸೇನ್

ಬಾಂಗ್ಲದೇಶ ಫರಾಜ್ ಅಯಾಜ್ ಹುಸೇನ್ ಅವರಿಗೆ 2016 ಮದರ್ ತೆರೆಸಾ ಮೆಮೊರಿಯಲ್ ಇಂಟರ್ನ್ಯಾಷನಲ್ ಆವಾರ್ಡ್ ಫಾರ್ ಸೋಶಿಯಲ್ ಜಸ್ಟೀಸ್ (Mother Teresa Memorial International Award for Social Justice). ಹುಸೇನ್ ರವರು ಜುಲೈ 1 ರಂದು ಬಾಂಗ್ಲದೇಶದ

www.karunaduexams.com

ಹೊಲಿ ಆರ್ಟಿಸನ್ ಬೇಕರಿ ಮೇಲೆ ನಡೆದ ಉಗ್ರರ ದಾಳಿ ವೇಳೆ ತನ್ನ ಸ್ನೇಹಿತರಿಗಾಗಿ ಪ್ರಾಣ ಬಿಟ್ಟಿದ್ದರು. ಇದೇ ಮೊದಲ ಬಾರಿಗೆ ಈ ಪ್ರಶಸ್ತಿಯನ್ನು ಮರಣೋತ್ತರವಾಗಿ ನೀಡಲಾಗಿದೆ.

163. ಕಿಂಬರ್ಲಿ ಪ್ರೊಸೆಸ್ ಸರ್ಟಿಫಿಕೇಟ್ ಸ್ಕೀಮ್ (Kimberly Process Certificate Scheme)ನ 2019ನೇ ವರ್ಷದ ಅಧ್ಯಕ್ಷತೆಯನ್ನು ಯಾವ ರಾಷ್ಟ್ರವಹಿಸಲಿದೆ?

ಅ) ಅಮೆರಿಕ

ಆ) ಭಾರತ

ಇ) ಬಾಂಗ್ಲದೇಶ

ಈ) ಚೀನಾ

ಭಾರತ

2019ನೇ ವರ್ಷದ ಕಿಂಬರ್ಲಿ ಪ್ರೊಸೆಸ್ ಸರ್ಟಿಫಿಕೇಟ್ ಸ್ಕೀಮ್ ಅವಧಿಗೆ ಭಾರತ ಅಧ್ಯಕ್ಷತೆ ವಹಿಸಲಿದೆ. ಅಲ್ಲದೇ 2018ನೇ ವರ್ಷಕ್ಕೆ ಉಪ ಅಧ್ಯಕ್ಷ ಸ್ಥಾನ ಭಾರತಕ್ಕೆ ಲಭಿಸಿದೆ. ಇತ್ತೀಚೆಗೆ ದುಬೈನಲ್ಲಿ ನಡೆದ ಕಿಂಬರ್ಲಿ ಪ್ಲಾನೆಟರಿ ಮೀಟಿಂಗ್ ನಲ್ಲಿ ಈ ವಿಷಯವನ್ನು ಘೋಷಿಸಲಾಯಿತು. ಭಾರತ ವಿಶ್ವಸಂಸ್ಥೆಯ ಕಚ್ಚಾ ವಜ್ರ ರಫ್ತು/ಆಮದು ಮಾಡುವ ಕಿಂಬರ್ಲಿಯ ಯೋಜನೆಯ ಸಂಸ್ಥಾಪನ ಸದಸ್ಯ ರಾಷ್ಟ್ರವಾಗಿದೆ. ಅಧ್ಯಕ್ಷ ಸ್ಥಾನ ವಾರ್ಷಿಕವಾಗಿ ಬದಲಾಗುತ್ತದೆ.

164. ವಿಶ್ವ ಶೌಚಾಲಯವ ದಿನವನ್ನ ______ ರಂದು ಆಚರಿಸಲಾಗುತ್ತದೆ?

ಅ) ನವೆಂಬರ್ 18

ಆ) ನವೆಂಬರ್ 19

ಇ) ನವೆಂಬರ್ 17

ಈ) ನವೆಂಬರ್ 20

ನವೆಂಬರ್ 19

ವಿಶ್ವ ಶೌಚಾಲಯ ದಿನವನ್ನು ಪ್ರತಿ ವರ್ಷ ನವೆಂಬರ್ 19 ರಂದು ಆಚರಿಸಲಾಗುತ್ತದೆ. ನೈಮರ್ಲ್ಯದ ಬಗ್ಗೆ ಜನರಲ್ಲಿ ಅರಿವು ಮೂಡಿಸಿ, ನೈರ್ಮಲ್ಯತೆ ಕಾಪಾಡಲು ಭಾಗವಹಿಸುವಂತೆ ಪ್ರೇರೆಪಿಸುವುದು ಈ ದಿನದ ಮಹತ್ವ. ಈ ವರ್ಷದ ಆಚರಣೆಯ ಥೀಮ್ “ಟಾಯ್ಲೆಟ್ಸ್ ಅಂಡ್ ಜಾಬ್ಸ್ (Toilets and Jobs)”.

www.karunaduexams.com

165. 2016 ಸುಮಿತ್ರ ಚರತ್ ರಾಮ್ ಜೀವಮಾನ ಸಾಧನೆ ಪ್ರಶಸ್ತಿ(Sumitra Charat Ram Award) ಯನ್ನು ಯಾರಿಗೆ ನೀಡಲಾಗುತ್ತಿದೆ?

ಅ) ಪಂಡಿತ್ ಹರಿಪ್ರಸಾದ್ ಚೌರಸಿಯಾ

ಆ) ಬಾಲಮುರಳಿ ಕೃಷ್ಣ

ಇ) ಪಂಡಿತ್ ರವಿಶಂಕರ್ ಗುರೂಜಿ

ಈ) ಬಿರ್ಜು ಮಹಾರಾಜ್

ಪಂಡಿತ್ ಹರಿಪ್ರಸಾದ್ ಚೌರಸಿಯಾ

ಪ್ರಖ್ಯಾತ ಕೊಳಲು ವಾದಕ ಪಂಡಿತ್ ಹರಿ ಪ್ರಸಾದ್ ಚೌರಸಿಯಾ ಅವರನ್ನು 2016 ಸುಮಿತ್ರ ಚರತ್ ರಾಮ್ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಲಾಗಿದೆ. ಭಾರತೀಯ ಶಾಸ್ತ್ರೀಯ ಸಂಗೀತಕ್ಕೆ ಚೌರಸಿಯಾ ನೀಡಿರುವ ಕೊಡುಗೆಯನ್ನು ಗುರುತಿಸಿ ಪ್ರಶಸ್ತಿಯನ್ನು ನೀಡಲಾಗಿದೆ. ಪ್ರಶಸ್ತಿಯನ್ನು ಭಾರತೀಯ ಶಾಸ್ತ್ರೀಯ ಸಂಗೀತ ಮತ್ತು ನೃತ್ಯ ಅಥವಾ ಭಾರತೀಯ ಕಲೆ ಮತ್ತು ಸಂಸ್ಕೃತಿಯಲ್ಲಿ ಕಳೆದ 15 ವರ್ಷಗಳಿಂದ ತೊಡಗಿಸಿಕೊಂಡವರಿಗೆ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

166. ಏರ್ಟೆಲ್ ದೆಹಲಿ ಹಾಫ್ ಮ್ಯಾರಥನ್ ಪುರುಷರ ವಿಭಾಗದಲ್ಲಿ ಪ್ರಶಸ್ತಿ"ಎಲಿಡ್ ಕಿಪ್ಚೊಗೆ (Eliud Kipchoge)" ಯಾವ ದೇಶದವರು?

ಅ) ಜಮೈಕಾ

ಆ) ಇಥೋಪಿಯಾ

ಇ) ಕೀನ್ಯಾ

ಈ) ಮ್ಯಾನ್ಮಾರ್

ಕೀನ್ಯಾ

ಕೀನ್ಯಾದ ರಿಯೋ ಒಲಂಪಿಕ್ ಚಾಂಪಿಯನ್ ಎಲಿಡ್ ಕಿಪ್ಚೊಗೆ ರವರು 9ನೇ ಏರ್ಟೆಲ್ ದೆಹಲಿ ಹಾಫ್ ಮ್ಯಾರಥನ್ ಪುರುಷರ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಇಥೋಪಿಯಾದ ವರ್ಕನೆಷ್ ದೆಗೆಫಾ ಮಹಿಳೆಯರ ವಿಭಾಗದಲ್ಲಿ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು. ವಿಶ್ವದ ರಾಷ್ಟ್ರಗಳಿಂದ ಸರಿಸುಮಾರು 34000 ಜನರು ಈ ಮ್ಯಾರಥಾನ್ ನಲ್ಲಿ ಭಾಗವಹಿಸಿದ್ದರು.

167. "ರಾಜೀವ್ ಹತ್ಯೆ: ಗೊತ್ತಿಲ್ಲದ ಸತ್ಯಗಳು" ಇದು ಯಾರ ಆತ್ಮಕಥೆ ______?

ಅ) ಪ್ರಿಯಾಂಕ ವಾದ್ರಾ

www.karunaduexams.com

ಆ) ನಳಿನಿ ಶ್ರೀಹರನ್

ಇ) ತಂಗವೇಲು

ಈ) ಸೋನಿಯಾ ಗಾಂಧಿ

ನಳಿನಿ ಶ್ರೀಹರನ್

"ರಾಜೀವ್ ಹತ್ಯೆ: ಗೊತ್ತಿಲ್ಲದ ಸತ್ಯಗಳು" ಇದು ಮಾಜಿ ಪ್ರಧಾನಿ ರಾಜೀವ್ ಗಾಂಧಿ ಹತ್ಯೆ ಪ್ರಕರಣದ ಅಪರಾಧಿ ನಳಿನಿ ಶ್ರೀಹರನ್ ಅವರ ಆತ್ಮಚರಿತ್ರೆ. ತಮಿಳು ಭಾಷೆಯಲ್ಲಿರುವ ಪುಸ್ತಕ 600 ಪುಟಗಳನ್ನು ಹೊಂದಿದೆ. ನಳಿನಿ ಈಗ ತಮಿಳುನಾಡಿನ ವೆಲ್ಲೂರು ಸೆಂಟ್ರಲ್ ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿದ್ದಾಳೆ. 2008ರ ಮಾರ್ಚ್‌ನಲ್ಲಿ ಪ್ರಿಯಾಂಕಾ ಗಾಂಧಿ ಜತೆಗಿನ ಭೇಟಿಯ ಕುರಿತ ವಿವರಗಳಿಗೆ ಪುಸ್ತಕದಲ್ಲಿ ಆದ್ಯತೆ ನೀಡಲಾಗಿದೆ. ಎಲ್‌ಟಿಟಿಇ ಪರ ಸಹಾನುಭೂತಿ ಹೊಂದಿರುವವರ ಅಭಿಪ್ರಾಯಗಳಿಗಾಗಿ 100 ಪುಟಗಳನ್ನು ಮೀಸಲಿಡಲಾಗಿದೆ. ಎಲ್‌ಟಿಟಿಇ ಸದಸ್ಯ ಶ್ರೀಹರನ್ (ಮುರುಗನ್) ಜತೆಗಿನ ಪ್ರಣಯ ಮತ್ತು ರಾಜೀವ್ ಗಾಂಧಿ ಹತ್ಯೆ ಪ್ರಕರಣದಲ್ಲಿ ಬಂಧನಕ್ಕೊಳಗಾದ ಘಟನೆಗಳ ಬಗ್ಗೆಯೂ ವಿವರಿಸಿದ್ದಾಳೆ.

168. ಇವರಲ್ಲಿ "ಹೋಮ್ ರೂಲ್ ಚಳುವಳಿ"ಯನ್ನು ಸ್ಥಾಪಿಸಿದವರನ್ನು ಗುರುತಿಸಿ:

I) ಬಾಲ ಗಂಗಾಧರ ತಿಲಕ್

II) ಅನ್ನಿ ಬೆಸೆಂಟ್

III) ಮಹಮ್ಮದ್ ಅಲಿ ಜಿನ್ನಾ

III) ಮಹಾತ್ಮ ಗಾಂಧಿ

ಸರಿಯಾದ ಉತ್ತರವನ್ನು ಕೆಳಗೆ ನೀಡಿರುವ ಕೋಡ್ ಮೂಲಕ ಗುರುತಿಸಿ?

ಅ) I & II

ಆ) II & III

ಇ) III & IV

ಈ) I, II, III & IV

I & II

169. ವಿಟಮಿನ್ "ಸಿ"ಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ:

ಅ) ವಿಟಮಿನ್ ಸಿ ಕೇವಲ ವಿಟಮಿನ್ ಅಲ್ಲದೇ ಹಾರ್ಮೋನ್ ಸಹ ಆಗಿದೆ

ಆ) ಸ್ಕರ್ವಿ ಕಾಯಿಲೆ ವಿಟಮಿನ್ ಸಿ ಕೊರತೆಯಿಂದ ಬರುವ ಕಾಯಿಲೆ

www.karunaduexams.com

ಇ) ವಿಟಮಿನ್ ಸಿ ನೀರಿನಲ್ಲಿ ಕರಗುವ ವಿಟಮಿನ್

ಈ) ಕೇವಲ ವಿಟಮಿನ್ ಸಿ ಯನ್ನು ಬಾಹ್ಯವಾಗಿ ಸೇವಿಸಬೇಕು ಉಳಿದೆಲ್ಲವು ದೇಹದಲ್ಲಿ ಉತ್ಪತ್ತಿಯಾಗುತ್ತವೆ

ವಿಟಮಿನ್ ಸಿ ಕೇವಲ ವಿಟಮಿನ್ ಅಲ್ಲದೇ ಹಾರ್ಮೋನ್ ಸಹ ಆಗಿದೆ

170. ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)ಗೆ ಯಾವ ನಗರದಲ್ಲಿ ಚಾಲನೆ ನೀಡಲಾಯಿತು?

ಅ) ಆಗ್ರಾ

ಆ) ವಾರಣಾಸಿ

ಇ) ಲಕ್ನೋ

ಈ) ಭೂಪಾಲ್

ಆಗ್ರಾ

ಪ್ರಧಾನ ಮಂತ್ರಿ ನರೇಂದ್ರ ಮೋದಿ ರವರು ಆಗ್ರಾದಲ್ಲಿ ಪ್ರಧಾನ ಮಂತ್ರಿ ಗ್ರಾಮೀಣ ಆವಾಸ್ ಯೋಜನೆಯನ್ನು ಉದ್ಘಾಟಿಸಿದರು. ಕೇಂದ್ರ ಸರ್ಕಾರ ಆರಂಭಿಸಿರುವ ವಸತಿ ಯೋಜನೆಯೇ ಪ್ರಧಾನ ಮಂತ್ರಿ ಗ್ರಾಮೀಣ ಆವಾಸ್ ಯೋಜನೆಯಾಗಿದ್ದು, ಗ್ರಾಮೀಣ ಪ್ರದೇಶದ ಬಡತನ ರೇಖೆಗಿಂತ ಕೆಳಗಿರುವ ಜನರಿಗೆ 2022ರೊಳಗೆ ವಸತಿ ಕಲ್ಪಿಸಿಕೊಡುವ ಯೋಜನೆ ಇದಾಗಿದೆ. ಈ ಯೋಜನೆಯಡಿ ಫಲಾನುಭವಿಗಳಿಗೆ ಮನೆ ನಿರ್ಮಾಣಕ್ಕೆಂದು 1.5 ಲಕ್ಷ ರೂಪಾಯಿಗಳನ್ನು ಕೇಂದ್ರ ಸರ್ಕಾರ ನೀಡುತ್ತದೆ. 2022ರೊಳಗೆ ಬಡತನ ರೇಖೆಗಿಂತ ಕೆಳಗಿರುವವರಿಗೆ ಮನೆಗಳನ್ನು ನಿರ್ಮಿಸಿಕೊಡುವುದಲ್ಲದೆ ಗ್ರಾಮೀಣ ಪ್ರದೇಶದ 1 ಕೋಟಿ ಜನರಿಗೆ ಮುಂದಿನ ಮೂರು ವರ್ಷಗಳಲ್ಲಿ ಮನೆ ನಿರ್ಮಿಸಿ ಕೊಡುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ.

171. 2016 ಚೀನಾ ಓಪನ್ ಬ್ಯಾಡ್ಮಿಂಟನ್ ಸೂಪರ್ ಸರಣಿಯ ಪುರುಷರ ಸಿಂಗಲ್ಸ್ ನಲ್ಲಿ ಪ್ರಶಸ್ತಿ ಗೆದ್ದ "ಜನ್ ಒ ಜಾರ್ಗೆನ್ಸನ್" ಯಾವ ದೇಶದವರು?

ಅ) ಇಂಡೋನೇಷಿಯಾ

ಆ) ಡೆನಾರ್ಕ್

ಇ) ಚೀನಾ

ಈ) ಫಿಲಿಫೈನ್ಸ್

ಡೆನಾರ್ಕ್

ಜನ್ ಒ ಜಾರ್ಗೆನ್ಸನ್ ರವರು ಡೆನಾರ್ಕ್ ನ ಪ್ರಸಿದ್ದ ಬ್ಯಾಡ್ಮಿಂಟನ್ ಆಟಗಾರ. ಚೀನಾದ ಒಲಂಪಿಕ್ ಚಾಂಪಿಯನ್ ಚೆನ್ ಲಾಂಗ್ ಅವರನ್ನು 22-30, 21-13 ಸೆಟ್ ಗಳಿಂದ ಮಣಿಸುವ

www.karnatakaexams.com

ಮೂಲಕ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು. ಜಾರ್ಗೆನ್ಸನ್ ಗೆ ಇದು ಎರಡನೇ ಚೀನಾ ಓಪನ್ ಬ್ಯಾಡ್ಮಿಂಟನ್ ಪ್ರಶಸ್ತಿಯಾಗಿದೆ.

172. ಇಂಡೋನೇಷಿಯಾ ಓಪನ್ ಗಾಲ್ಫ್ ಪ್ರಶಸ್ತಿ ಗೆದ್ದುಕೊಂಡ ಭಾರತದ ಗಾಲ್ಫ್ ಆಟಗಾರ ಯಾರು?

ಅ) ಗಗನ್ ಜೀತ್ ಬುಲ್ಲರ್

ಆ) ಜೀವಾ ಮಿಲ್ಕ ಸಿಂಗ್

ಇ) ಅಶೋಕ್ ಲಹಿರಿ

ಈ) ಚಿಕ್ಕರಂಗಪ್ಪ

ಗಗನ್ ಜೀತ್ ಬುಲ್ಲರ್

ಖ್ಯಾತ ಗಾಲ್ಫ್ ಆಟಗಾರ ಗಗನ್ ಜೀತ್ ಬುಲ್ಲರ್ ರವರು ಇಂಡೋನೇಷಿಯಾ ಓಪನ್ ಗಾಲ್ಫ್ ಪ್ರಶಸ್ತಿಯನ್ನು ಗೆದ್ದುಕೊಂಡರು. ಬುಲ್ಲರ್ ಅವರು ಎರಡನೇ ಬಾರಿಗೆ ಈ ಪ್ರಶಸ್ತಿಯನ್ನು ಗೆದ್ದುಕೊಂಡರು. ಈ ಋತುವಿನಲ್ಲಿ ಬುಲ್ಲರ್ ಗೆದ್ದ ಎರಡನೇ ಪ್ರಶಸ್ತಿ ಇದಾಗಿದೆ.

173. ಇತ್ತೀಚೆಗೆ ನಿಧನರಾದ ರಾಮ್ ನರೇಶ್ ಯಾದವ್ ರವರು ಯಾವ ರಾಜ್ಯದ ಮಾಜಿ ರಾಜ್ಯಪಾಲ?

ಅ) ಕೇರಳ

ಆ) ಪಂಜಾಬ್

ಇ) ಜಮ್ಮು ಮತ್ತು ಕಾಶ್ಮೀರ

ಈ) ಮಧ್ಯ ಪ್ರದೇಶ

ಮಧ್ಯ ಪ್ರದೇಶ

ಮಧ್ಯ ಪ್ರದೇಶದ ಮಾಜಿ ರಾಜ್ಯಪಾಲ ರಾಮ್ ನರೇಶ್ ಯಾದವ್ ರವರು ಅನಾರೋಗ್ಯದಿಂದ ನಿಧನರಾದರು. ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರು ಸಹ ಆಗಿದ್ದ ಯಾದವ್ ರವರು ಆಗಸ್ಟ್ 2011 ರಿಂದ ಸೆಪ್ಟೆಂಬರ್ 2016 ರವರೆಗೆ ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿದ್ದರು. ಅಲ್ಲದೇ ಇವರು ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿ 1977 ರಿಂದ 79 ರವರೆಗೆ ಸೇವೆ ಸಲ್ಲಿಸಿದ್ದರು.

174. "ಯುರೋಪಿಯನ್ ಆರ್ಗನೈಸೇಷನ್ ಫಾರ್ ನ್ಯೂಕ್ಲಿಯರ್ ರಿಸರ್ಚ್ (European Organisation for Nuclear Research)" ಕೇಂದ್ರ ಕಚೇರಿ ಎಲ್ಲಿದೆ?

ಅ) ಜಿನೆವಾ, ಸ್ವಿಟ್ಜರ್ಲ್ಯಾಂಡ್

ಆ) ನ್ಯೂಯಾರ್ಕ್, ಅಮೆರಿಕ

ಇ) ಲಂಡನ್, ಯುಕೆ

www.karunaduexams.com

ಈ) ಬರ್ಲಿನ್, ಜರ್ಮನಿ

ಜಿನೆವಾ, ಸ್ವಿಟ್ಜರ್ಲ್ಯಾಂಡ್

ಯುರೋಪಿಯನ್ ಆರ್ಗನೈಸೇಷನ್ ಫಾರ್ ನ್ಯೂಕ್ಲಿಯರ್ ರಿಸರ್ಚ್ ಕೇಂದ್ರ ಕಚೇರಿ ಜಿನೆವಾ ಸ್ವಿಟ್ಜರ್ಲ್ಯಾಂಡ್ ನಲ್ಲಿದೆ. CERN ವಿಶ್ವದ ಅತಿ ದೊಡ್ಡ ಅಣು ಮತ್ತು ಭೌತಕಣ ಪ್ರಯೋಗಾಲಯವಾಗಿದ್ದು, 1954 ರಲ್ಲಿ ಸ್ಥಾಪಿಸಲಾಗಿದೆ. ಇತ್ತೀಚೆಗೆ ಭಾರತ CERNನ ಅಸೋಸಿಯೆಟ್ ಮೆಂಬರ್ ಆಗಿ ಸೇರ್ಪಡೆಗೊಂಡಿದೆ.

175. ಅಂತಾರಾಷ್ಟ್ರೀಯ ಸಾಗರ ಸಂಸ್ಥೆ (ಐಎಂಒ) ಶೌರ್ಯ ಪ್ರಶಸ್ತಿ ಪಡೆದ ಭಾರತದ ಮಹಿಳಾ ಕ್ಯಾಪ್ಟನ್ ಯಾರು?

ಅ) ರಾಧಿಕಾ ಆಮ್ಟೆ

ಆ) ಸುರೇಖಾ ಸಿಂಗ್

ಇ) ರಾಧಿಕಾ ಮೆನನ್

ಈ) ಚೇತನ ಚಂದ್ರ

ರಾಧಿಕಾ ಮೆನನ್

ಭಾರತದ ಸರಕು ಸಾಗಾಣಿಕೆ ಹಡಗಿನ ಮೊದಲ ಮಹಿಳಾ ಕ್ಯಾಪ್ಟನ್, ಕೇರಳ ಮೂಲದ ರಾಧಿಕಾ ಮೆನನ್ ಅವರು, ಅಂತರರಾಷ್ಟ್ರೀಯ ಸಾಗರ ಸಂಸ್ಥೆಯ (ಐಎಂಒ) ಶೌರ್ಯ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಮುಳುಗುತ್ತಿದ್ದ ದೋಣಿಯಿಂದ ಏಳು ಮೀನುಗಾರರನ್ನು ರಕ್ಷಿಸಿ ಸಾಹಸ ಪ್ರದರ್ಶಿಸಿದರ ಫಲವಾಗಿ ಈ ಪ್ರಶಸ್ತಿಯನ್ನು ರಾಧಿಕಾ ಅವರಿಗೆ ನೀಡಲಾಗಿದೆ. ಐಎಂಒದ ಕೇಂದ್ರ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ರಾಧಿಕಾ ಮೆನನ್ ಅವರು ತಮ್ಮ ಶೌರ್ಯ ಸಾಧನೆಗಾಗಿ ಪದಕ ಮತ್ತು ಪ್ರಮಾಣ ಪತ್ರ ಸ್ವೀಕರಿಸಿದರು. ಸಮುದ್ರದಲ್ಲಿ ಅಸಾಧಾರಣ ಸಾಹಸ ಪ್ರದರ್ಶಿಸಿದ್ದಕ್ಕಾಗಿ ಶೌರ್ಯ ಪ್ರಶಸ್ತಿ ಪಡೆದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೂ ಅವರು ಪಾತ್ರರಾಗಿದ್ದಾರೆ.

176. ಮುಂಬೈ ಮೂಲದ ಹಾರ್ಮೋನಿ ಫೌಂಡೇಷನ್ ನೀಡುವ ಮದರ್ ತೆರೆಸಾ ಅಂತಾರಾಷ್ಟ್ರೀಯ ಪ್ರಶಸ್ತಿಯನ್ನು ಯಾರಿಗೆ ನೀಡಲಾಗಿದೆ?

ಅ) ಶೇಕ್ ಅಬ್ದುಲ್ಲ ಬಿನ್ ಝಾಹೆದ್ ಅಲ್ ನಹಯಾನ್

ಆ) ಶೇಕ್ ನಿಜಾಮ್ ಅಹಮ್ಮದ್

ಇ) ಅಬ್ದುಲ್ ನಸೀರ್ ಖಾನ್

ಈ) ಸರ್ತಾಜ್ ಅಬಿದ್ದುಲ್ಲಾ ಖಾನ್

ಶೇಕ್ ಅಬ್ದುಲ್ಲ ಬಿನ್ ಝಾಹೆದ್ ಅಲ್ ನಹಯಾನ್

ಯುನೈಟೆಡ್ ಅರಬ್ ಎಮಿರೆಟ್ಸ್ ನ ವಿದೇಶಾಂಗ ವ್ಯವಹಾರ ಮತ್ತು ಅಂತಾರಾಷ್ಟ್ರೀಯ ಸಹಕಾರ ಸಚಿವ ಶೇಕ್ ಅಬ್ದುಲ್ಲ ಬಿನ್ ಝಾಹೆದ್ ಅಲ್ ನಹಯಾನ್ ರವರಿಗೆ ಮುಂಬೈ ಮೂಲದ ಹಾರ್ಮೋನಿ ಫೌಂಡೇಷನ್ ನೀಡುವ ಮದರ್ ತೆರೆಸಾ ಅಂತಾರಾಷ್ಟ್ರೀಯ

www.karunaduexams.com

ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಪಶ್ಚಿಮ ಏಷ್ಯಾದಲ್ಲಿ ಶಾಂತಿ ಮತ್ತು ಸ್ಥಿರತೆ ಪ್ರಚಾರಕ್ಕೆ ನೀಡಿದ ಕೊಡುಗೆಗಾಗಿ ಪ್ರಶಸ್ತಿಯನ್ನು ನೀಡಲಾಗಿದೆ.

177. ಈ ಕೆಳಗಿನವುಗಳಲ್ಲಿ ಏಷ್ಯಾದ ಅತ್ಯಂತ ಹಳೆಯ ಸಿನಿಮೋತ್ಸವ ಯಾವುದು?

ಅ) ಇಂಟರ್ನ್ಯಾಷನಲ್ ಫಿಲ್ಮ್ ಫೆಸ್ಟಿವಲ್ ಆಫ್ ಇಂಡಿಯಾ

ಆ) ಹಾಂಕ್ ಕಾಂಗ್ ಫಿಲ್ಮ್ ಫೆಸ್ಟಿವಲ್

ಇ) ಶಾಂಘೈ ಇಂಟರ್ನ್ಯಾಷನಲ್ ಫಿಲ್ಮ್ ಫೆಸ್ಟಿವಲ್

ಈ) ಟೊಕಿಯೋ ಇಂಟರ್ನ್ಯಾಷನಲ್ ಫಿಲ್ಮ್ ಫೆಸ್ಟಿವಲ್

ಇಂಟರ್ನ್ಯಾಷನಲ್ ಫಿಲ್ಮ್ ಫೆಸ್ಟಿವಲ್ ಆಫ್ ಇಂಡಿಯಾ

ಇಂಟರ್ನ್ಯಾಷನಲ್ ಫಿಲ್ಮ್ ಫೆಸ್ಟಿವಲ್ ಆಫ್ ಇಂಡಿಯಾ ಏಷ್ಯಾದ ಅತ್ಯಂತ ಹಳೆದ ಸಿನಿಮೋತ್ಸವವಾಗಿದೆ. 1952 ರಿಂದ ಈ ಸಿನಿಮೋತ್ಸವನ್ನು ಆಯೋಜಿಸಲಾಗುತ್ತಿದೆ. ಗೋವಾದಲ್ಲಿ ಪ್ರತಿ ವರ್ಷ ಈ ಸಿನಿಮೋತ್ಸವನ್ನು ಆಯೋಜಿಸುತ್ತಿದ್ದು, ಇತ್ತೀಚೆಗೆ 47ನೇ ಸಿನಿಮೋತ್ಸವ ಆರಂಭಗೊಂಡಿತು.

178. ವಿಶ್ವಸಂಸ್ಥೆಯ ಸಾರ್ವತ್ರಿಕ ಮಕ್ಕಳ ದಿನ (Universal Children's Day) ಯಾವ ದಿನದಂದು ಆಚರಿಸಲಾಗುತ್ತದೆ?

ಅ) ನವೆಂಬರ್ 18

ಆ) ನವೆಂಬರ್ 19

ಇ) ನವೆಂಬರ್ 20

ಈ) ನವೆಂಬರ್ 21

ನವೆಂಬರ್ 20

ವಿಶ್ವಸಂಸ್ಥೆಯ ಸಾರ್ವತ್ರಿಕ ಮಕ್ಕಳ ದಿನವನ್ನು ಪ್ರತಿವರ್ಷ ನವೆಂಬರ್ 20 ರಂದು ಆಚರಿಸಲಾಗುತ್ತದೆ. ಜಗತ್ತಿನಾದ್ಯಂತ ಮಕ್ಕಳ ಕಲ್ಯಾಣವನ್ನು ಪ್ರೋತ್ಸಾಹಿಸಲು ಮತ್ತು ಅರಿವು ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತದೆ. ಮಕ್ಕಳ ವಿರುದ್ಧ ಹಿಂಸೆ ನಿಲ್ಲಿಸಿ (Stop Violence against Children) ಇದು ಈ ವರ್ಷದ ಥೀಮ್.

179. ವಿಶ್ವದ ಮೊದಲ ಬಾಲಿವುಡ್ ಥೀಮ್ ಪಾರ್ಕ್ ಎಲ್ಲಿ ಸ್ಥಾಪಿಸಲಾಗಿದೆ?

ಅ) ಪ್ಯಾರಿಸ್

ಆ) ದುಬೈ

ಇ) ಟೊಕಿಯೊ

ಈ) ಮುಂಬೈ

www.karunaduexams.com

ದುಬೈ

ವಿಶ್ವದ ಮೊದಲ ಬಾಲಿವುಡ್ ಥೀಮ್ ಪಾರ್ಕ್ ದುಬೈನಲ್ಲಿ ಸ್ಥಾಪಿಸಲಾಗಿದೆ.

180. 2017 ಹವಾಮಾನ ಬದಲಾವಣೆ ಕಾರ್ಯನಿರ್ವಹಣೆ ಸೂಚ್ಯಂಕ (Climate Change Performance Index) ದಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ?

ಅ) 55

ಆ) 20

ಇ) 63

ಈ) 42

20

2017ಹವಾಮಾನ ಬದಲಾವಣೆ ಕಾರ್ಯನಿರ್ವಹಣೆ ಸೂಚ್ಯಂಕದಲ್ಲಿ ಭಾರತ 20ನೇ ಸ್ಥಾನವನ್ನು ಪಡೆದುಕೊಂಡಿದೆ. ಜರ್ಮನ್ ವಾಚ್ ಅಂಡ್ ಕ್ಲೈಮೆಟ್ ಆಕ್ಷನ್ ನೆಟವರ್ಕ್ ಯುರೋಪ್ ಈ ಸೂಚ್ಯಂಕವನ್ನು ಹೊರತಂದಿದೆ. ಮೊದಲ ಮೂರು ಸ್ಥಾನವನ್ನು ಖಾಲಿ ಬಿಡಲಾಗಿದ್ದು, ನಾಲ್ಕನೇ ಸ್ಥಾನದಲ್ಲಿ ಫ್ರಾನ್ಸ್ ಪಡೆದುಕೊಂಡಿದೆ.

181. ವಿಶ್ವದ ಮೊದಲ ಕೃತಕ ಹೃದಯ ಕಸಿ ಮಾಡಿದ ಪ್ರಸಿದ್ದ ಶಸ್ತ್ರಚಿಕಿತ್ಸಕ "ಡೆಂಟನ್ ಕೂಲಿ"ಯಾವ ದೇಶದವರು?

ಅ) ಅಮೆರಿಕ

ಆ) ಫ್ರಾನ್ಸ್

ಇ) ಕೆನಡಾ

ಈ) ಆಸ್ಟ್ರೇಲಿಯಾ

ಅಮೆರಿಕ

ಅಮೆರಿಕದ ಪ್ರಸಿದ್ದ ಹೃದಯ ತಜ್ಞ ಡಾ. ಡೆಂಟನ್ ಕೂಲಿ ನಿಧನರಾದರು. ಅವರಿಗೆ 96 ವರ್ಷ ವಯಸ್ಸಾಗಿತ್ತು. ಕೂಲಿ ಅವರು ವಿಶ್ವದ ಮೊದಲ ಕೃತಕ ಹೃದಯವನ್ನು ಯಶಸ್ವಿಯಾಗಿ ಕಸಿ ಮಾಡಿ ವಿಶ್ವ ವಿಖ್ಯಾತಿಗೊಳಿಸಿದ್ದರು. ಟೆಕ್ಸಾಸ್ ಹೃದಯ ಸಂಸ್ಥೆಯ ಸಂಸ್ಥಾಪಕರಾದ ಕೂಲಿ ಅವರು ಪ್ರಸ್ತುತ ಚಾಲ್ತಿಯಲ್ಲಿರು ಅನೇಕ ಹೃದಯ ಸಂಬಂಧಿ ಚಿಕಿತ್ಸೆ ತಂತ್ರಜ್ಞಾನಗಳನ್ನು ಅಭಿವೃದ್ದಿಪಡಿಸುವಲ್ಲಿ ಮುಂಚೂಣಿಯಲ್ಲಿದ್ದರು. ಸ್ವೀಡನ್, ಯುಕೆ ಮತ್ತು ಸಿಪ್ರಸ್ ನಂತರ ಸ್ಥಾನದಲ್ಲಿವೆ.

182. 2016 ಶಕ್ತಿ ಭಟ್ ಮೊದಲ ಪುಸ್ತಕ ಪುಶಸ್ತಿಯನ್ನು ಯಾರಿಗೆ ನೀಡಲಾಗಿದೆ?

www.karunaduexams.com

ಅ) ಅಕ್ಷಯ ಮುಕುಲ್

ಆ) ಚೇತನ್ ಭಗತ್

ಇ) ರಾಜೇಶ್ ಕುಲಕರ್ಣಿ

ಈ) ಶರತ್ ಬಾದಲ್

ಅಕ್ಷಯ ಮುಕುಲ್

ಹಿರಿಯ ಪತ್ರಕರ್ತ ಅಕ್ಷಯ ಮುಕುಲ್ ರವರಿಗೆ 2016 ಶಕ್ತಿ ಭಟ್ ಮೊದಲ ಪುಸ್ತಕ ಪ್ರಶಸ್ತಿಯನ್ನು ನೀಡಲಾಗಿದೆ. ಮುಕುಲ್ ರವರ ಪುಸ್ತಕ "ಗೀತಾ ಪ್ರೆಸ್ ಅಂಡ್ ದಿ ಮೇಕಿಂಗ್ ಆಫ್ ಹಿಂದೂ ಇಂಡಿಯಾ" ಪುಸ್ತಕಕ್ಕಾಗಿ ಈ ಪ್ರಶಸ್ತಿಯನ್ನು ನೀಡಲಾಗಿದೆ.

183. ಇತ್ತೀಚೆಗೆ ನಿಧನರಾದ "ವಿಲಿಯಂ ಟ್ರೆವರ್ (William Trevor)" ಯಾವ ದೇಶದ ಪ್ರಸಿದ್ಧ ಸಾಹಿತಿ?

ಅ) ಐರ್ಲ್ಯಾಂಡ್

ಆ) ಪೋರ್ಚಗಲ್

ಇ) ಇಟಲಿ

ಈ) ಮೆಕ್ಸಿಕೊ

ಐರ್ಲ್ಯಾಂಡ್

ಐರ್ಲ್ಯಾಂಡ್ ನ ಪ್ರಸಿದ್ಧ ಸಾಹಿತಿ "ವಿಲಿಯಂ ಟ್ರವರ್" ನಿಧನರಾದರು. ಟ್ರವರ್ ರವರು ಸಣ್ಣಕಥೆಗಳ ಮೂಲಕ ಓದುಗರ ಮನಗೆದ್ದಿದ್ದರು.

184. ಭಾರತದ ರಸ್ತೆ ಹೆದ್ದಾರಿಗಳ ಪೈಕಿ ಅತಿ ದೊಡ್ಡ ಎಕ್ಸ್‌ಪ್ರೆಸ್ ಹೆದ್ದಾರಿ ಯಾವುದು?

ಅ) ಆಗ್ರಾ –ಲಕ್ನೋ ಎಕ್ಸ್‌ಪ್ರೆಸ್ ಹೆದ್ದಾರಿ

ಆ) ಅಹಮದಾಬಾದ್-ವಡೋದರ ಎಕ್ಸ್‌ಪ್ರೆಸ್ ಹೆದ್ದಾರಿ

ಇ) ಮುಂಬೈ-ಅಹಮದಾಬಾದ್ ಎಕ್ಸ್‌ಪ್ರೆಸ್ ಹೆದ್ದಾರಿ

ಈ) ಕನ್ಯಾಕುಮಾರಿ ಎಕ್ಸ್‌ಪ್ರೆಸ್ ಹೆದ್ದಾರಿ

ಆಗ್ರಾ –ಲಕ್ನೋ ಎಕ್ಸ್‌ಪ್ರೆಸ್ ಹೆದ್ದಾರಿ

ದೇಶದ ಅತಿದೊಡ್ಡ ಎಕ್ಸ್‌ಪ್ರೆಸ್ ಹೆದ್ದಾರಿ ಆಗ್ರಾ-ಲಕ್ನೋ ಎಕ್ಸ್‌ಪ್ರೆಸ್ ಹೆದ್ದಾರಿಯನ್ನು ಉತ್ತರಪ್ರದೇಶ ಮುಖ್ಯಮಂತ್ರಿ ಅಖಿಲೇಶ್ ಯಾದವ್ ಉದ್ಘಾಟಿಸಿದರು. ಇದರ ಉದ್ದ 302 ಕಿ.ಮೀ ಇದ್ದು, ಆರು ಪಥವನ್ನು ಹೊಂದಿದೆ. ಈ ಹಸಿರು ಹೆದ್ದಾರಿಯಿಂದ ಎರಡು ನಗರಗಳ ನಡುವಿನ ಸಂಚಾರ ಸಮಯ 3 ಗಂಟೆ 30 ನಿಮಿಷ ಕಡಿಮೆಯಾಗಲಿದೆ. ಅಷ್ಟೇ ಅಲ್ಲದೇ ಐಎಎಫ್ ಯುದ್ಧ ವಿಮಾನ ಇಳಿಯುವ ಸೌಲಭ್ಯವನ್ನು ಈ ರಸ್ತೆ ಹೊಂದಿದೆ.

www.karunaduexams.com

185. ಐಸಿಸಿ ಕ್ರಿಕೆಟ್ ಹಾಲ್ ಆಫ್ ಫೇಮ್ ಸೇರ್ಪಡೆಗೊಂಡ "ಕರೆನ್ ರೋಲ್ಟನ್ (Karen Rolton)" ಯಾವ ದೇಶದ ಮಹಿಳಾ ಕ್ರಿಕೆಟ್ ಆಟಗಾರ್ತಿ?

ಅ) ಇಂಗ್ಲೆಂಡ್

ಆ) ದಕ್ಷಿಣ ಆಫ್ರಿಕಾ

ಇ) ಆಸ್ಟ್ರೇಲಿಯಾ

ಈ) ನ್ಯೂಜಿಲ್ಯಾಂಡ್

ಆಸ್ಟ್ರೇಲಿಯಾ

ಆಸ್ಟ್ರೇಲಿಯಾ ಮಹಿಳಾ ಕ್ರಿಕೆಟ್ ತಂಡದ ಮಾಜಿ ನಾಯಕಿ ಕರೆನ್ ರೋಲ್ಟನ್ ಅವರನ್ನು ಐಸಿಸಿ ಕ್ರಿಕೆಟ್ ಹಾಲ್ ಆಫ್ ಫೇಮ್ ಗೆ ಅಧಿಕೃತವಾಗಿ ಸೇರ್ಪಡೆಗೊಂಡರು. ರೋಲ್ಟನ್ ಐಸಿಸಿ ಕ್ರಿಕೆಟ್ ಹಾಲ್ ಆಫ್ ಫೇಮ್ ಸೇರ್ಪಡೆಗೊಂಡ 81 ನೇಯವರು ಹಾಗೂ 6ನೇ ಮಹಿಳಾ ಆಟಗಾರ್ತಿ.

186. ಈ ಕೆಳಗಿನವರುಗಳಲ್ಲಿ ಯಾರು ವಿಶ್ವಸಂಸ್ಥೆಯ ಮಕ್ಕಳ ನಿಧಿ (UNICEF)ಯ ಈಗಿನ ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದಾರೆ?

ಅ) ಅಂಥೋನಿ ಲೇಕ್

ಆ) ಸ್ವೆನ್ ಜುರ್ಗೆನ್ಸನ್

ಇ) ಇರಿನಾ ಬೊಕೊವ

ಈ) ಜೋಸೆಟ್ ಸಿರಿನ್

ಅಂಥೋನಿ ಲೇಕ್

ಯುನಿಸೆಫ್ ದೇಶದ ಅತಿ ದೊಡ್ಡ ಯು.ಎನ್.ಸಂಸ್ಥೆ. ಅಭಿವೃದ್ದಿಶೀಲ ದೇಶಗಳಲ್ಲಿ ಮಕ್ಕಳ ಮತ್ತು ತಾಯಂದಿರ ಧೀರ್ಘಕಾಲದ ಲೋಕೋಪಕಾರಿ ಮತ್ತು ಅಭಿವೃದ್ದಿಯ ನೆರವು ಒದಗಿಸುವ ನಿಟ್ಟಿನಲ್ಲಿ ವಿಶ್ವಸಂಸ್ಥೆಯ ಮಕ್ಕಳ ನಿಧಿ 1946 ರಂದು ನ್ಯೂಯಾರ್ಕ್ ನಗರದಲ್ಲಿ ಸ್ಥಾಪನೆಯಾಯಿತು. 1949ರಂದು ಭಾರತದಲ್ಲಿ ತನ್ನ ಚಟುವಟಿಕೆಗಳನ್ನು ಪ್ರಾರಂಭಿಸಿತು. ಎರಡನೆ ಮಹಾಯುದ್ದದ ನಂತರ ತೊಂದರೆಗೀಡಾದ ಮಕ್ಕಳಿಗೆ ಸಹಾಯಮಾಡುವುದು ಇದರ ಮೂಲ ಉದ್ದೇಶವಾಗಿತ್ತು.ನಂತರ 1953ರಲ್ಲಿ ಯುನಿಸೆಫ್ ವಿಶ್ವಸಂಸ್ಥೆಯ ಶಾಶ್ವತ ಭಾಗವಾಯಿತು..1965 ರಲ್ಲಿ,ಉತ್ತಮ ಸೇವೆಗಾಗಿ ನೊಬೆಲ್ ಶಾಂತಿ ಪುರಸ್ಕಾರವನ್ನು ಪಡೆದುಕೊಂಡಿದೆ. ಅಂಥೋನಿ ಲೇಕ್ ಯುನೆಸೆಫ್ ನ ಈಗಿನ ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದಾರೆ. ಸ್ವೆನ್ ಜುರ್ಗೆನ್ಸನ್ ಯುನೆಸೆಫ್ ನ ಪ್ರಸ್ತುತ ಅಧ್ಯಕ್ಷರು.

187. ಕೇಂದ್ರ ಗಾಜು ಮತ್ತು ಸೆರಾಮಿಕ್ ಸಂಶೋಧನಾ ಸಂಸ್ಥೆ ಯಾವ ನಗರದಲ್ಲಿದೆ?

ಅ) ಹೈದ್ರಾಬಾದ್

www.karunaduexams.com

ಆ) ಫರಿದಬಾದ್

ಇ) ಕೊಲ್ಕತ್ತಾ

ಈ) ಲಕ್ನೋ

ಕೊಲ್ಕತ್ತಾ

ಕೇಂದ್ರ ಗಾಜು ಮತ್ತು ಸೆರಾಮಿಕ್ ಸಂಶೋಧನಾ ಸಂಸ್ಥೆ (Central Glass and Ceramic Research Centre) ಕೊಲ್ಕತ್ತಾದಲ್ಲಿದೆ.

188. ಪ್ರಪ್ರಥಮ ಸಂಸ್ಕೃತ ಪ್ರಶಸ್ತಿ ಪಡೆದ "ಮಹಾ ಚಾಕ್ರಿ ಸಿರಿನ್ದೋರ್ನ್" ಯಾವ ದೇಶದವರು?

ಅ) ಥಾಯ್ಲೆಂಡ್

ಆ) ಸಿರಿಯಾ

ಇ) ಇರಾನ್

ಈ) ಮಲೇಷಿಯಾ

ಥಾಯ್ಲೆಂಡ್

ಥಾಯ್ಲೆಂಡ್ ರಾಣಿ ಮಹಾ ಚಾಕ್ರಿ ಸಿರಿನ್ದೋರ್ನ್ ರವರಿಗೆ ಪ್ರಪ್ರಥಮ ಸಂಸ್ಕೃತ ಪ್ರಶಸ್ತಿಯನ್ನು ನೀಡಲಾಗಿದೆ. ಸಂಸ್ಕೃತ ಭಾಷೆಗೆ ಅವರು ನೀಡಿರುವ ಕೊಡುಗೆ ಗಮನಿಸಿ ಪ್ರಶಸ್ತಿಯನ್ನು ನೀಡಲಾಗಿದೆ. ಭಾರತದ ಉಪರಾಷ್ಟ್ರಪತಿ ಮಹಮ್ಮದ್ ಹಮೀದ್ ಅನ್ಸಾರಿ ರವರು ಪ್ರಶಸ್ತಿಯನ್ನು ಪ್ರವಾಸಿ ಭಾರತೀಯ ಕೇಂದ್ರ, ನವದೆಹಲಿಯಲ್ಲಿ ಪ್ರಶಸ್ತಿಯನ್ನು ನೀಡಿದ್ದರು. ಪ್ರಶಸ್ತಿಯನ್ನು ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಷನ್ಸ್ ಈ ಪ್ರಶಸ್ತಿಯನ್ನು ಸ್ಥಾಪಿಸಿದ್ದು, ಪ್ರಖ್ಯಾತ ಸಂಸ್ಕೃತ ವಿದ್ವಾಂಸರಿಗೆ ಈ ಪ್ರಶಸ್ತಿಯನ್ನು ನೀಡಲಾಗುವುದು.

189. 2011ರ ಜನಗಣತಿ ಪ್ರಕಾರ ಅತಿ ಕಡಿಮೆ ಜನಸಂಖ್ಯೆ ಸಾಂದ್ರತೆಯನ್ನು ಹೊಂದಿರುವ ರಾಜ್ಯ ಯಾವುದು?

ಅ) ಕೇರಳ

ಆ) ಗೋವಾ

ಇ) ಅರುಣಾಚಲ ಪ್ರದೇಶ

ಈ) ಸಿಕ್ಕಿಂ

ಅರುಣಾಚಲ ಪ್ರದೇಶ

ಅರುಣಾಚಲ ಪ್ರದೇಶ ಜನಸಾಂದ್ರತೆ 2011 ರ ಜನಗಣತಿ ಪ್ರಕಾರ ಪ್ರತಿ ಚದರ ಕಿ.ಮೀ 17 ರಷ್ಟಿದ್ದು, ದೇಶದಲ್ಲಿ ಅತಿ ಕಡಿಮೆ ಜನಸಾಂದ್ರತೆ ಹೊಂದಿದೆ. ನಂತರದ ಸ್ಥಾನದಲ್ಲಿದೆ ಮಿಜೋರಾಂ (52), ಜಮ್ಮು ಮತ್ತು ಕಾಶ್ಮೀರ (56) ಹಾಗೂ ಸಿಕ್ಕಿಂ (86) ಇದೆ.

www.karunaduexams.com

190. ಭಾರತೀಯ ವಾಣಿಜೋದ್ಯಮ ಮಹಾಸಂಘಗಳ ಒಕ್ಕೂಟ (FICCI)ಯ ನೂತನ ಅಧ್ಯಕ್ಷರಾಗಿ 2017ನೇ ಸಾಲಿಗೆ ಯಾರು ಆಯ್ಕೆಯಾಗಿದ್ದಾರೆ?

ಅ) ಪಂಕಜ್ ಪಟೇಲ್

ಆ) ಅಮೃತ ಪಾಟೀಲ

ಇ) ನಿರಂಜನ್ ಜೈನ್

ಈ) ಆರುಂಧತಿ ಸಿಂಗ್

ಪಂಕಜ್ ಪಟೇಲ್

ಪಂಕಜ್ ಪಟೇಲ್ ರವರು ಭಾರತೀಯ ವಾಣಿಜೋದ್ಯಮ ಮಹಾಸಂಘಗಳ ಒಕ್ಕೂಟ (Federation of Indian Chamber of Commerce and Industry)ಯ 2017ನೇ ಸಾಲಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಹರ್ಷವರ್ದನ್ ನಿಯೊಟಿಯ ರವರಿಂದ ತೆರವಾದ ಸ್ಥಾನವನ್ನು ಇವರು ತುಂಬಲಿದ್ದಾರೆ. ಪಟೇಲ್ ರವರು ಕ್ಯಾಡಿಲ ಹೆಲ್ತ್ಕೇರ್ ಲಿಮಿಟೆಡ್ ನ ಚೇರಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದಾರೆ.

191. ಈ ಕೆಳಗಿನ ಯಾವುದು ದೇಶದ ಮೊದಲ ಇ-ವಿಧಾನಸಭಾ ಕ್ಷೇತ್ರ ಎಂಬ ಖ್ಯಾತಿಗೆ ಪಾತ್ರವಾಗಿದೆ?

ಅ) ಧರ್ಮಶಾಲಾ ವಿಧಾನಸಭಾ ಕ್ಷೇತ್ರ

ಆ) ಪಾಲಂಪುರ ವಿಧಾನಸಭಾ ಕ್ಷೇತ್ರ

ಇ) ಚಿಂತಾಮಣಿ ವಿಧಾನಸಭಾ ಕ್ಷೇತ್ರ

ಈ) ಮೈಸೂರು ವಿಧಾನಸಭಾ ಕ್ಷೇತ್ರ

ಪಾಲಂಪುರ ವಿಧಾನಸಭಾ ಕ್ಷೇತ್ರ

ಹಿಮಾಚಲ ಪ್ರದೇಶದ ಪಾಲಂಪುರ ವಿಧಾನಸಭಾ ಕ್ಷೇತ್ರ ದೇಶದ ಮೊದಲ ಇ-ವಿಧಾನಸಭಾ ಕ್ಷೇತ್ರವೆಂಬ ಗೌರವಕ್ಕೆ ಪಾತ್ರವಾಗಿದೆ. ಈ ವಿಧಾನಸಭಾ ಕ್ಷೇತ್ರದ ಜನರು ಈಗ ಈ ಕ್ಷೇತ್ರದಲ್ಲಾಗುವ ಅಭಿವೃದ್ದಿ ಕಾಮಗಾರಿಗಳನ್ನು ಕಂಪ್ಯೂಟರ್ ಮೂಲಕ ನೋಡಬಹುದು. ಅಲ್ಲದೇ ಆನ್ ಲೈನ್ ಮೂಲಕ ವಿವಿಧ ಯೋಜನೆಗಳಿಗೆ ಬೇಡಿಕೆಯನ್ನು ಇಡಬಹುದು. ಈ ವ್ಯವಸ್ಥೆಯನ್ನು ಉಳಿದ 67 ಕ್ಷೇತ್ರಗಳಿಗೆ ಮುಂದಿನ ಆರು ತಿಂಗಳೊಳಗೆ ವಿಸ್ತರಿಸಲಾಗುವುದು.

**192.** ಸಿಪಿಜೆ 2016 ಅಂತಾರಾಷ್ಟ್ರೀಯ ಪತ್ರಿಕಾ ಸ್ವಾತ್ರಂತ್ರ್ಯ ಪ್ರಶಸ್ತಿಯನ್ನು ಪಡೆದ ಭಾರತೀಯ ಪತ್ರಕರ್ತೆ ಯಾರು?

www.karunaduexams.com

ಅ) ಮಾಲಿನಿ ಸುಬ್ರಮಣ್ಯಂ

ಆ) ಕಮಲಾ ಚಂದ್ರಶೇಖರ್

ಇ) ದೀಪಾ ಚಾಂದಿನಿ

ಈ) ಸುರೇಖಾ ಸಿಂಗ್

ಮಾಲಿನಿ ಸುಬ್ರಮಣ್ಯಂ

ಭಾರತೀಯ ಪತ್ರಕರ್ತೆ ಮಾಲಿನಿ ಸುಬ್ರಮಣ್ಯಂ ರವರಿಗೆ ಸಿಪಿಜೆ 2016 ಅಂತಾರಾಷ್ಟ್ರೀಯ ಪತ್ರಿಕಾ ಸ್ವಾತಂತ್ರ್ಯ ಪ್ರಶಸ್ತಿ ಲಭಿಸಿದೆ. ನಕ್ಸಲ್ ಪೀಡಿತ ಬಸ್ತಾರ್ ಪ್ರದೇಶದಿಂದ ನಿರ್ಭೀತವಾಗಿ ವರದಿ ನೀಡಿದಕ್ಕಾಗಿ ಪ್ರಶಸ್ತಿ ಲಭಿಸಿದೆ. ಅಮೆರಿಕದ ಎಲ್ ಸಾಲ್ವಡರ್ ಪತ್ರಕರ್ತ ಆಸ್ಕರ್ ಮಾರ್ಟಿನೆಜ್, ಟರ್ಕಿಯ ಕ್ಯಾನ್ ದುಂಡರ್ ಮತ್ತು ಈಜಿಪ್ಟ್ ನ ಛಾಯಾಗ್ರಾಹಕ ಅಬು ಜೈದ್ ರವರಿಗೆ ಪ್ರಶಸ್ತಿ ಲಭಿಸಿದೆ.

193. ನಕ್ಷತ್ರಗಳ ಬಣ್ಣವು ಅವುಗಳ _____ ಅನ್ನು ಸೂಚಿಸುತ್ತದೆ?

ಅ) ದೂರ

ಆ) ದ್ರವ್ಯರಾಶಿ

ಇ) ತಾಪಮಾನ

ಈ) ಪ್ರಕಾಶ ಮಾನತೆ

ತಾಪಮಾನ

194. ಈ ಕೆಳಗಿನ ಯಾರನ್ನು ಹಾಕಿ ಇಂಡಿಯಾದ ನೂತನ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ?

ಅ) ಮರಿಯಮ್ಮ ಜೋಶಿ

ಆ) ಮೊಹಮ್ಮದ್ ಮುಸ್ತಾಕ್ ಅಹ್ಮದ್

ಇ) ಜಗನ್ನಾಥ್ ಕಾಳೆ

ಈ) ಪ್ರಭಾಕರ್ ಜಿಂದಾಲೆ

ಮರಿಯಮ್ಮ ಜೋಶಿ

ಹಿರಿಯ ಕ್ರೀಡಾಡಳಿತಗಾರ್ತಿ ಮರಿಯಮ್ಮ ಕೋಶಿ ಅವರು ಹಾಕಿ ಇಂಡಿಯಾದ (ಎಚ್ಐ) ನೂತನ ಅಧ್ಯಕ್ಷರಾಗಿ ನೇಮಕವಾಗಿದ್ದಾರೆ. ಈ ಮೊದಲು ಅಧ್ಯಕ್ಷ ಸ್ಥಾನದಲ್ಲಿದ್ದ ನರಿಂದರ್ ಬಾತ್ರಾ ಅವರು ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ನ (ಎಫ್ಐಎಚ್) ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಹೀಗಾಗಿ ಅವರು ಎಚ್ಐ ಅಧ್ಯಕ್ಷ ಹಾಗೂ ಹಾಕಿ ಇಂಡಿಯಾ ಲೀಗ್ ಆಡಳಿತ ಮಂಡಳಿಯ ಮುಖ್ಯಸ್ಥ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದಾರೆ.

www.karunaduexams.com

195. ಇತ್ತೀಚೆಗೆ ಸುದ್ದಿಯಲ್ಲಿದ್ದ "ಪೃಥ್ವಿ-2" ಜೋಡಿ ಕ್ಷಿಪಣಿ ಸಂಬಂಧಿಸಿದಂತೆ ಹೇಳಿಕೆ ಗಮನಿಸಿ:

I) ಇದು ನೆಲದಿಂದ ನೆಲಕ್ಕೆ ಜಿಗಿಯುವ, ಮಧ್ಯಮ ಶ್ರೇಣಿ ಕ್ಷಿಪಣಿ

II) 450 ಕಿ.ಮೀ ದೂರವನ್ನು ಕ್ರಮಿಸಬಲ್ಲ ಸಾಮರ್ಥ್ಯವನ್ನು ಈ ಕ್ಷಿಪಣಿ ಹೊಂದಿದೆ

III) ಈ ಕ್ಷಿಪಣಿ 500 ರಿಂದ 1000 ಕೆಜಿ ಭಾರದ ಶಸ್ತ್ರಾಸ್ತ್ರಗಳನ್ನು ಹೊತ್ತೊಯ್ಯುವ ಸಾಮರ್ಥ್ಯವನ್ನು ಹೊಂದಿದೆ.

ಈ ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

ಅ) I & II

ಆ) II & III

ಇ) I & III

ಈ) ಮೇಲಿನ ಎಲ್ಲವೂ

I & III

ಸ್ವದೇಶಿ ನಿರ್ಮಿತ "ಪೃಥ್ವಿ-2" ಜೋಡಿ ಕ್ಷಿಪಣಿಯನ್ನು ಯಶಸ್ವಿಯಾಗಿ ಪರೀಕ್ಷಿಸಲಾಯಿತು. ಪೃಥ್ವಿ ಕ್ಷಿಪಣಿ ನೆಲದಿಂದ ನೆಲಕ್ಕೆ ಜಿಗಿಯುವ, ಮಧ್ಯಮ ಶ್ರೇಣಿ ಕ್ಷಿಪಣಿ. 350 ಕಿ.ಮೀ ದೂರದ ಗುರಿಯನ್ನು ತಲುಪಬಲ್ಲ, ಈ ಕ್ಷಿಪಣಿಗಳು 500 ರಿಂದ 1000 ಕೆಜಿ ಭಾರದ ಶಸ್ತ್ರಾಸ್ತ್ರಗಳನ್ನು ಹೊತ್ತೊಯ್ಯುವ ಸಾಮರ್ಥ್ಯವನ್ನು ಹೊಂದಿದೆ.

196. ಈ ಕೆಳಗಿನವುಗಳನ್ನು ಗಮನಿಸಿ

I) ಅಲಿಪ್ತ ನೀತಿ

II) ಕೊಲೊಂಬೊ ಪ್ಲಾನ್

III) ಆಗ್ನೇಯ ಏಷ್ಯಾ ಒಪ್ಪಂದ ಒಕ್ಕೂಟ

ಈ ಮೇಲಿನ ಯಾವುದಕ್ಕೆ ಭಾರತ ಸದಸ್ಯ ರಾಷ್ಟ್ರವಾಗಿದೆ?

ಅ) I & II

ಆ) II & III

ಇ) I & III

ಈ) ಮೇಲಿನ ಎಲ್ಲವೂ

I & II

197. ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (National Highway Authority of India)ದ ಅಧ್ಯಕ್ಷರಾಗಿ ಯಾರು ನೇಮಕಗೊಂಡಿದ್ದಾರೆ?

ಅ) ಯಧುವೀರ್ ಸಿಂಗ್ ಮಲ್ಲಿಕ್

ಆ) ರಾಘವೇಂದ್ರು ಖಪೂರ್

www.karunaduexams.com

ಇ) ಮಹೇಶ್ಚಂದ್ರ ರಾಥೋಡ್

ಈ) ಸುಧೀಂದ್ರ ಪಣಿಕರ್

ಯಧುವೀರ್ ಸಿಂಗ್ ಮಲ್ಲಿಕ್

ಯಧುವೀರ್ ಸಿಂಗ್ ಮಲ್ಲಿಕ್, 1983 ಬ್ಯಾಚ್ ಐಎಎಸ್ ಅಧಿಕಾರಿ ರವರು ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ನೂತನ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ರಾಘವ ಚಂದ್ರ ರವರಿಂದ ತೆರವಾದ ಸ್ಥಾನವನ್ನು ಇವರು ತುಂಬಲಿದ್ದಾರೆ. ಇದಕ್ಕೂ ಮುಂಚೆ ಮಲ್ಲಿಕ್ ಅವರು ನೀತಿ ಆಯೋಗ ವಿಶೇಷ ಕಾರ್ಯದರ್ಶಿಯಾಗಿದ್ದರು.

198. ಪ್ರೊಫೆಸರ್ ಹೆಚ್ ಆರ್ ನಾಗೇಂದ್ರ ಸಮಿತಿ ಯಾವುದಕ್ಕೆ ಸಂಬಂಧಿಸಿದೆ?

ಅ) ಹಕ್ಕಿಜ್ವರ ನಿಯಂತ್ರಣ

ಆ) ಯೋಗ ಶಿಕ್ಷಣ

ಇ) ಆರ್ಥಿಕ ಸೇರ್ಪಡೆ

ಈ) ಕೃಷಿ ಆದಾಯ ಹೆಚ್ಚಳ

ಯೋಗ ಶಿಕ್ಷಣ

ವಿಶ್ವವಿದ್ಯಾಲಯಗಳಲ್ಲಿ ಯೋಗ ಶಿಕ್ಷಣವನ್ನು ಅಳವಡಿಸಿಕೊಳ್ಳುವ ಸಲುವಾಗಿ ಕೇಂದ್ರ ಸರ್ಕಾರ ಪ್ರೊಫೆಸರ್ ಹೆಚ್ ಆರ್ ನಾಗೇಂದ್ರ ನೇತೃತ್ವದ 12 ಸದಸ್ಯರನ್ನು ಒಳಗೊಂಡ ಸಮಿತಿಯನ್ನು ರಚಿಸಿತ್ತು. ಸಮಿತಿಯು ವರದಿಯನ್ನು ಸಲ್ಲಿಸಿದ್ದು ಯೋಗ ಶಿಕ್ಷಣ ಪಠ್ಯಕ್ರಮ ಹಾಗೂ ತರಭೇತುದಾರ ಆಯ್ಕೆಗೆ ಬೇಕಾಗಿರುವ ಮಾನದಂಡವನ್ನು ಶಿಫಾರಸ್ಸು ಮಾಡಿದೆ.

199. ವಿಶ್ವಸಂಸ್ತೆಯಲ್ಲಿನ ಅಮೆರಿಕದ ರಾಯಭಾರಿ ಹುದ್ದೆಗೆ ಆಯ್ಕೆಯಾಗಿರುವ ನಿಕಿ ಹ್ಯಾಲೆ ರವರು ಯಾವ ರಾಜ್ಯದ ಗವರ್ನರ್ ಆಗಿದ್ದಾರೆ?

ಅ) ಫ್ಲೋರಿಡಾ

ಆ) ಕ್ಯಾಲಿಫೋರ್ನಿಯಾ

ಇ) ಸೌತ್ ಕೆರೊಲಿನಾ

ಈ) ನ್ಯೂಜೆರ್ಸಿ

ಸೌತ್ ಕೆರೊಲಿನಾ

ವಿಶ್ವಸಂಸ್ಥೆಯಲ್ಲಿನ ಅಮೆರಿಕದ ರಾಯಭಾರಿ ಹುದ್ದೆಗೆ ದಕ್ಷಿಣ ಕೆರೊಲಿನಾದ ಗವರ್ನರ್, ಭಾರತ ಮೂಲದ ನಿಕಿ ಹ್ಯಾಲೆ ಅವರನ್ನು ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಆಯ್ಕೆ ಮಾಡಿದ್ದಾರೆ. ಭಾರತ ಮೂಲದ ದಂಪತಿಯ ಮಗಳಾದ ನಿಕಿ ಹ್ಯಾಲೆ (44) ಅವರು, ಟ್ರಂಪ್ ಅವರ ಸಂಪುಟದಲ್ಲಿ ಉನ್ನತ ಸ್ಥಾನ ಪಡೆಯುತ್ತಿರುವ ಮೊದಲ ಮಹಿಳೆ ಮತ್ತು ಅಲ್ಪಸಂಖ್ಯಾತ ಸಮುದಾಯದ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಲಿದ್ದಾರೆ.

www.karunaduexams.com

200. ಬೆಂಗಳೂರಿನಲ್ಲಿ ನಡೆಯಲಿರುವ 14ನೇ ಪ್ರವಾಸಿ ಭಾರತೀಯ ದಿವಸ್ ನ ಮುಖ್ಯ ಅತಿಥಿಯಾಗಿ ಯಾರು ಭಾಗವಹಿಸಲಿದ್ದಾರೆ?

ಅ) ಶಿಂಜೊ ಅಬೆ

ಆ) ಅಂಟೊನಿಯೊ ಕೊಸ್ಟ

ಇ) ಥೆರೆಸಾ ಮೇ

ಈ) ವ್ಲಾದಿಮಿರ್ ಪುಟಿನ್

ಅಂಟೊನಿಯೊ ಕೊಸ್ಟ

ಭಾರತೀಯ ಮೂಲದ ಪೋರ್ಚುಗಲ್ ಪ್ರಧಾನ ಮಂತ್ರಿ ಅಂಟೊನಿಯೊ ಕೊಸ್ಟ ರವರು 14ನೇ ಭಾರತೀಯ ಪ್ರವಾಸಿ ದಿವಸ್ ನ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಅಲ್ಲದೇ ರಿಪಬ್ಲಿಕ್ ಆಫ್ ಸುರಿನೇಮ್ ನ ಉಪಾಧ್ಯಕ್ಷ ಮೈಕಲ್ ಅಶ್ವಿನ್ ಸತ್ಯಂದ್ರ ಅಧಿನ್ ರವರು ಯುವ ಪ್ರವಾಸಿ ಭಾರತೀಯ ದಿವಸ್ ನ ವಿಶೇಷ ಅತಿಥಿಯಾಗಿ ಭಾಗವಹಿಸಲಿದ್ದಾರೆ.

201. ಇತ್ತೀಚೆಗೆ ನಿಧನರಾದ ಎಂ. ಬಾಲಮುರಳಿಕೃಷ್ಣ, ಯಾವ ಕ್ಷೇತ್ರಕ್ಕೆ ಸಂಬಂಧಿಸಿದ್ದಾರೆ?

ಅ) ಸಂಗೀತ

ಆ) ಸಾಹಿತ್ಯ

ಇ) ಕಲೆ

ಈ) ವಿಜ್ಞಾನ

ಸಂಗೀತ

ಕರ್ನಾಟಕ ಸಂಗೀತ ದಿಗ್ಗಜ ಎಂ. ಬಾಲಮುರಳಿಕೃಷ್ಣ ನಿಧನರಾದರು. ಬಾಲಮುರಳಿಕೃಷ್ಣ ರವರು ಗಾಯನ, ಸಂಗೀತ ಸಂಯೋಜನೆ, ನಟನೆ, ವಯಲಿನ್ ವಾದನ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಅನುಪಮ ಸಾಧನೆಗೈದಿದ್ದರು. ಮಾತೃಭಾಷೆ ತೆಲುಗಾದರೂ ಕನ್ನಡ, ಸಂಸ್ಕೃತ, ತಮಿಳು, ಮಲಯಾಳ, ಹಿಂದಿ, ಬಂಗಾಲಿ ಮತ್ತು ಪಂಜಾಬಿ ಭಾಷೆಗಳಲ್ಲಿ ಗಾನಸುಧೆ ಹರಿಸಿದ್ದ ಬಾಲಮುರಳಿಕೃಷ್ಣ ಅವರಿಗೆ ಸಿಕ್ಕ 2 ರಾಷ್ಟ್ರ ಪ್ರಶಸ್ತಿಗಳು ಕನ್ನಡದ ಮೂಲಕವೇ ಬಂದಿದ್ದವು. ಉಳಿದಂತೆ ಪದ್ಮಶ್ರೀ, ಪದ್ಮಭೂಷಣ, ಪದ್ಮವಿಭೂಷಣ ಸಹಿತ ಹಲವು ರಾಷ್ಟ್ರೀಯ, ಅಂತಾರಾಷ್ಟ್ರೀಯ ಪ್ರಶಸ್ತಿಗಳು ಅವರನ್ನು ಅರಸಿ ಬಂದಿದ್ದವು. 1988ರಲ್ಲಿ ಬಿಡುಗಡೆಯಾಗಿ ದೂರದರ್ಶನದಲ್ಲಿ ಇಂದಿಗೂ ಪ್ರಸಾರವಾಗುತ್ತಿರುವ "ಮಿಲೇ ಸುರ್ ಮೇರಾ ತುಮ್ಹಾರಾ' ಎಂಬ ಐಕ್ಯತಾ ಗೀತೆಗೆ ಅವರ ಪ್ರಸ್ತುತಿ ವಿಶೇಷ ಮೆರುಗು ನೀಡಿತ್ತು.

202. ಅಂತಾರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆ ನೀಡುವ "ಲೆಜೆಂಡ್ಸ್ ಪ್ರಶಸ್ತಿ"ಯನ್ನು ಯಾರಿಗೆ ನೀಡಲಾಗುತ್ತಿದೆ?

ಅ) ಸುಶೀಲ್ ಕುಮಾರ್

ಆ) ಮೇರಿ ಕೋಮ್

ಇ) ಯೋಗೇಶ್ವರ್ ದತ್ತ್

ಈ) ವಿಕಾಸ್ ಸಿಂಗ್

ಮೇರಿ ಕೋಮ್

ಭಾರತದ ಎಮ್.ಸಿ ಮೇರಿ ಕೋಮ್ ಅವರಿಗೆ ಅಂತರರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆ (ಎಐಬಿಎ) ಡಿಸೆಂಬರ್ 20ರಂದು 'ಲೆಜೆಂಡ್ಸ್ ಪ್ರಶಸ್ತಿ' ನೀಡಲಿದೆ. ಲಂಡನ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿರುವ ಬಾಕ್ಸರ್ ಮೇರಿ ಕೋಮ್ ಅವರಿಗೆ ಎಐಬಿಎ ತನ್ನ 70ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪ್ರಶಸ್ತಿ ನೀಡಿ ಗೌರವಿಸು ವುದಾಗಿ ಹೇಳಿದೆ.

203. ಇತ್ತೀಚೆಗೆ ನಿಧನರಾದ ಪ್ರೊ. ಜಿ ಕೆ ಮೆನನ್ ರವರು ಈ ಕೆಳಗಿನ ಯಾವ ಸಂಸ್ಥೆಯ ಮುಖ್ಯಸ್ಥರಾಗಿದ್ದರು?

ಅ) ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆ

ಆ) ಬಾಬಾ ಪರಮಾಣು ಸಂಶೋಧನಾ ಸಂಸ್ಥೆ

ಇ) ವಿಕ್ರಮ್ ಸಾರಾಬಾಯಿ ಬಾಹ್ಯಕಾಶ ಸಂಸ್ಥೆ

ಈ) ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ದಿ ಸಂಸ್ಥೆ

ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆ

ಖ್ಯಾತ ವಿಜ್ಞಾನಿ ಹಾಗೂ ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆಯ ಮಾಜಿ ಮುಖ್ಯಸ್ಥ ಜಿ.ಕೆ.ಮೆನನ್ ರವರು ನಿಧನರಾದರು. ದೇಶದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಬೆಳವಣಿಗೆಗೆ ಅವರು ಅಪಾರ ಕೊಡುಗೆ ನೀಡಿದ್ದರು.

204. 2016 ವಿಶ್ವ ರೊಬೊಟ್ ಒಲಂಪಿಯಡ್ (World Robot Olympiad) ಯಾವ ದೇಶದಲ್ಲಿ ನಡೆಯಲಿದೆ?

ಅ) ಜಪಾನ್

ಆ) ಭಾರತ

ಇ) ರಷ್ಯಾ

ಈ) ಚೀನಾ

ಭಾರತ

13ನೇ ವಿಶ್ವ ರೊಬೊಟ್ ಒಲಂಪಿಯಡ್ ಗ್ರೇಟರ್ ನೊಯ್ಡಾ, ಉತ್ತರಪ್ರದೇಶದಲ್ಲಿ ನಡೆಯಲಿದೆ. ರೊಬೊಟ್ ತಂತ್ರಜ್ಞಾನ ಬಳಸಿ ತ್ಯಾಜ್ಯ ನಿರ್ವಹಣೆ ಮತ್ತು ಮರುಬಳಕೆ ತಂತ್ರಜ್ಞಾನವನ್ನು ವಿದ್ಯಾರ್ಥಿಗಳು ಪ್ರದರ್ಶಿಸಲಿದ್ದಾರೆ. ಪ್ರತಿ ವರ್ಷ ಈ ಒಲಂಪಿಯಡ್ ಅನ್ನು ಆಯೋಜಿಸುತ್ತಿದ್ದು, ರೊಬೊಟ್ ಬಳಕೆ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಇದು ವೇದಿಕೆಯಾಗಲಿದೆ.

www.karunaduexams.com

205. "ವಂಗಲ ಸುಗ್ಗಿ ಹಬ್ಬ (Wangala)"ವನ್ನು ಯಾವ ಬುಡಕಟ್ಟು ಜನರ ಪ್ರಮುಖ ಹಬ್ಬವಾಗಿದೆ?

ಅ) ಖಾಸಿ ಬುಡಕಟ್ಟು ಜನರು

ಆ) ಗಾರೊ ಬುಡಕಟ್ಟು ಜನರು

ಇ) ದಿಯೊರಿ ಬುಡಕಟ್ಟು ಜನರು

ಈ) ಕೊಂಗ ಬುಡಕಟ್ಟು ಜನರು

ಗಾರೊ ಬುಡಕಟ್ಟು ಜನರು

ವಂಗಲ ಸುಗ್ಗಿ ಹಬ್ಬ ಮೇಘಾಲಯದ ಗಾರೊ ಬುಡಕಟ್ಟು ಜನರ ಪ್ರಸಿದ್ದ ಹಬ್ಬವಾಗಿದೆ. ಪ್ರತಿ ವರ್ಷ ಈ ಹಬ್ಬವನ್ನು ನವೆಂಬರ್ ತಿಂಗಳಲ್ಲಿ ಆಚರಿಸಲಾಗುತ್ತದೆ. ಈ ಹಬ್ಬವನ್ನು "100 ಡ್ರಮ್" ಹಬ್ಬವೆಂತಲೂ ಕರೆಯಲಾಗುತ್ತದೆ.

206. "ಮಿಡ್ನೈಟ್ಸ್ ಫ್ಯೂರಿಸ್: ದಿ ಡೆಡ್ಲಿ ಲಿಗೆಸ್ಸಿ ಆಫ್ ಇಂಡಿಯಾಸ್ ಪಾರ್ಟಿಷನ್ (Midnight's Furies: The Deadly Legacy of India's Partition)"ಪುಸ್ತಕದ ಲೇಖಕರು ಯಾರು?

ಅ) ಗೋಪಿ ಶ್ರೀಕಾಂತ್

ಆ) ಜಾವೇದ್ ರಾಜಾ

ಇ) ನಿಸಿದ್ ಹಜಾರಿ

ಈ) ಮಿಲನ್ ವೈಷ್ಣವ್

ನಿಸಿದ್ ಹಜಾರಿ

ಮಿಡ್ನೈಟ್ಸ್ ಫ್ಯೂರಿಸ್: ದಿ ಡೆಡ್ಲಿ ಲಿಗೆಸ್ಸಿ ಆಫ್ ಇಂಡಿಯಾಸ್ ಪಾರ್ಟಿಷನ್" ಪುಸ್ತಕವನ್ನು ಬರೆದಿದ್ದಾರೆ. ಪುಸ್ತಕದಲ್ಲಿ ಭಾರತ ಪಾಕಿಸ್ತಾನ ವಿಭಜನೆ ವೇಳೆಯಾದ ಹಿಂಸೆಯ ಬಗ್ಗೆ ಸಮಗ್ರವಾಗಿ ಬರೆಯಲಾಗಿದೆ.

207. ವಿಶ್ವದ ಅತ್ಯಂತ ಸ್ಫುರದ್ರೂಪಿ ಪುರುಷರ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿರುವ ಭಾರತೀಯ ನಟ ಯಾರು?

ಅ) ಹೃತಿಕ್ ರೋಷನ್

ಆ) ಸಲ್ಮಾನ್ ಖಾನ್

ಇ) ರಣವೀರ್ ಸಿಂಗ್

ಈ) ಅಕ್ಷಯ್ ಕುಮಾರ್

ಹೃತಿಕ್ ರೋಷನ್

ವಿಶ್ವದ ಅತ್ಯಂತ ಸ್ಫುರದ್ರೂಪಿ ಪುರುಷರ ಪಟ್ಟಿಯಲ್ಲಿ 'ಗ್ರೀಕ್ ಗಾಡ್ ಆಫ್ ಬಾಲಿವುಡ್ ಖ್ಯಾತಿಯ ನಟ ಹೃತಿಕ್ ರೋಷನ್ ಮೂರನೇ ಸ್ಥಾನ ಪಡೆದಿದ್ದಾರೆ. Worldstopmost.com. ವೆಬ್

www.karunaduexams.com

ಸೈಟ್ ನಡೆಸಿದ ಸಮೀಕ್ಷೆಯಲ್ಲಿ ಹಾಲಿವುಡ್‌ನ ತಾರೆಗಳಾದ ಜಾನಿ ಡೆಪ್ ಮತ್ತು ಬ್ರಾಡ್ ಪಿಟ್ ಇವರನ್ನು ಮೀರಿಸಿ ಹೃತಿಕ್ ಈ ಸ್ಥಾನ ಗಳಿಸಿದ್ದಾರೆ. ನಟ ಸಲ್ಮಾನ್ ಖಾನ್ ಅವರು 7ನೇ ಸ್ಥಾನ ಪಡೆದಿದ್ದಾರೆ.ಟಾಮ್ ಕ್ರೂಸ್, ರಾಬರ್ಟ್ ಪ್ಯಾಟಿನ್‌ಸನ್, ಜಾನಿ ಡೆಪ್, ಟಾಮ್ ಹಿಡ್ಲಿಸ್ಟನ್, ಒಮರ್ ಬೊರ್ಕಾನ್ ಅಲ್ ಗಲ, ಬ್ರಾಡ್ ಪಿಟ್, ಹಗ್ ಜಾಕ್ಮನ್, ಮತ್ತು ಬಿಲ್ಲಿ ಉಂಗರ್ ಕ್ರಮವಾಗಿ ಟಾಪ್ 10ರಲ್ಲಿ ಆಯ್ಕೆಯಾದವರು.

208. ಇತ್ತೀಚೆಗೆ ನಿಧನರಾದ "ದಿಲೀಪ್ ಪಡಗಾಂವ್ಕರ್" ಯಾವ ಪತ್ರಿಕೆಯ ಸಂಪಾದಕರಾಗಿದ್ದರು?

ಅ) ಟೈಮ್ಸ್ ಆಫ್ ಇಂಡಿಯಾ

ಆ) ಇಂಡಿಯನ್ ಎಕ್ಸ್ ಪ್ರೆಸ್

ಇ) ದಿ ಹಿಂದೂ

ಈ) ಮಾತೃಭೂಮಿ

ಟೈಮ್ಸ್ ಆಫ್ ಇಂಡಿಯಾ

ಹಿರಿಯ ಪತ್ರಕರ್ತ ಹಾಗೂ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಮಾಜಿ ಸಂಪಾದಕರಾಗಿದ್ದ ದಿಲೀಪ್ ಪಡಗಾಂವ್ಕರ್ ನಿಧನರಾದರು. 1968ರಲ್ಲಿ ಮಾನವಿಕ ಶಾಸ್ತ್ರದಲ್ಲಿ ಡಾಕ್ಟರೇಟ್ ಪಡೆದಿದ್ದ ಅವರು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ ಮೂಲಕ ಪತ್ರಿಕೋದ್ಯಮ ವೃತ್ತಿ ಆರಂಭಿಸಿದ್ದರು. 1988ರಿಂದ ಆರು ವರ್ಷಗಳ ಅವಧಿಗೆ ಅವರು ಟೈಮ್ಸ್ ಆಫ್ ಇಂಡಿಯಾ ಸಂಪಾದಕರಾಗಿದ್ದರು1978ರಿಂದ 1986ರವರೆಗೆ ಅವರು ಬ್ಯಾಂಕಾಕ್ ಹಾಗೂ ಪ್ಯಾರಿಸ್‌ನಲ್ಲಿ ಯುನೆಸ್ಕೊ ಜತೆ ಅವರು ಕಾರ್ಯನಿರ್ವಹಿಸಿದ್ದರು. 2008ರಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಸತತವಾಗಿ ಉದ್ವಿಗ್ನ ವಾತಾವರಣ ಉಂಟಾದ ಬಳಿಕ ಕೇಂದ್ರ ಸರ್ಕಾರ ಮಾತುಕತೆಗೆ ಮೂವರು ಸದಸ್ಯರ ಗುಂಪೊಂದನ್ನು ರಚಿಸಿತ್ತು. ಪಡಗಾಂವ್ಕರ್ ಇದರಲ್ಲಿ ಒಬ್ಬರಾಗಿದ್ದರು.

209. ಬೆಸ್ಮರ್ ವಿಧಾನ (Bessmer Process) ಅನ್ನು ಈ ಕೆಳಗಿನ ಯಾವ ಕೈಗಾರಿಕೆಯಲ್ಲಿ ಬಳಸಲಾಗುತ್ತದೆ?

ಅ) ಕಲ್ಲಿದ್ದಲು

ಆ) ಉಕ್ಕು

ಇ) ಅಲ್ಯೂಮಿನಿಯಂ

ಈ) ಕಬ್ಬಿಣ

ಉಕ್ಕು

210. ದೇಶದ ಮೊದಲ ಪೇಮೆಂಟ್ ಬ್ಯಾಂಕ್ ಅನ್ನು ಇತ್ತೀಚೆಗೆ ಈ ಕೆಳಗಿನ ಯಾವ ಸಂಸ್ಥೆ ಆರಂಭಿಸಿತು?

ಅ) ಏರ್‌ಟೆಲ್

www.karunaduexams.com

ಆ) ಮಹೀಂದ್ರ ಅಂಡ್ ಮಹೀಂದ್ರ

ಇ) ರಿಲಾಯನ್ಸ್

ಈ) ಫಿನ್ ಕಾರ್ಪ್

ಏರ್‌ಟೆಲ್

ದೇಶದ ಮೊದಲ ಪೇಮೆಂಟ್ ಬ್ಯಾಂಕ್ ಅನ್ನು ಏರ್‌ಟೆಲ್ ದೇಶದ ಪ್ರಥಮ ಪೇಮೆಂಟ್ ಬ್ಯಾಂಕ್ ಪ್ರಾರಂಭಿಸಿದೆ. ರಾಜಸ್ತಾನದಲ್ಲಿ ಪ್ರಾಯೋಗಿಕವಾಗಿ ಭಾರ್ತಿ ಏರ್‌ಟೆಲ್ ಸಂಸ್ಥೆಯು 'ಏರ್‌ಟೆಲ್ ಪೇಮೆಂಟ್ ಬ್ಯಾಂಕ್'ಗೆ ಚಾಲನೆ ನೀಡಿದೆ. ಆಧಾರ್ ಕಾರ್ಡ್ ಬಳಸಿ ಪೇಮೆಂಟ್ ಬ್ಯಾಂಕ್ ಖಾತೆ ತೆರೆಯಬಹುದಾಗಿದೆ ಹಾಗೂ ಗ್ರಾಹಕರ ಏರ್‌ಟೆಲ್ ಮೊಬೈಲ್ ಸಂಖ್ಯೆಯೇ ಖಾತೆ ಸಂಖ್ಯೆಯೂ ಆಗಿರಲಿದೆ. ಉಳಿತಾಯ ಖಾತೆಯಲ್ಲಿ ಇಡುವ ಠೇವಣಿಗೆ ವಾರ್ಷಿಕ ಶೇ.7.25ರಷ್ಟು ಬಡ್ಡಿ ಸಿಗಲಿದೆ. ಪ್ರಾರಂಭಿಕವಾಗಿ ರಾಜಸ್ತಾನದ ಪಟ್ಟಣ ಮತ್ತು ಗ್ರಾಮೀಣ ಭಾಗದ ಗ್ರಾಹಕರು ಏರ್‌ಟೆಲ್ ಮಳಿಗೆಗಳಲ್ಲಿ ಬ್ಯಾಂಕ್ ಖಾತೆ ತೆರೆಯಬಹುದಾಗಿದೆ. ನಗದು ರಹಿತ ವಹಿವಾಟು, ಹಣ ವರ್ಗಾವಣೆ ಸೇರಿದಂತೆ ಇತರೆ ಸೌಲಭ್ಯವನ್ನು ಪೇಮೆಂಟ್ ಬ್ಯಾಂಕ್ ಒಳಗೊಂಡಿದೆ.

211. ಇತ್ತೀಚೆಗೆ ನಿಧನರಾದ ಕೆ.ಸುಭಾಷ್ ರವರು ಯಾವ ಭಾಷೆಯ ಪ್ರಸಿದ್ಧ ಸಿನಿಮಾ ನಿರ್ದೇಶಕರು?

ಅ) ತಮಿಳು

ಆ) ತೆಲುಗು

ಇ) ಮರಾಠಿ

ಈ) ಗುಜರಾತಿ

ತಮಿಳು

ಖ್ಯಾತ ಚಿತ್ರ ಸಾಹಿತಿ, ನಿರ್ದೇಶಕ ಕೆ. ಸುಭಾಷ್ ನಿಧನಹೊಂದಿದರು. ಅವರು ಮೂತ್ರಪಿಂಡ ಸಮಸ್ಯೆಯಿಂದ ಬಳಲುತ್ತಿದ್ದರು. ಇಲ್ಲಿನ ತಮಿಳು ಮತ್ತು ಹಿಂದಿ ಭಾಷೆಗಳಲ್ಲಿ ಹಲವು ಚಿತ್ರಗಳನ್ನು ಇವರು ನಿರ್ದೇಶಿಸಿದ್ದು, ಇವರ ನಿರ್ದೇಶನದ ತಮಿಳು ಚಿತ್ರ 'ಛತ್ರಿಯನ್' ಭಾರಿ ಯಶಸ್ಸು ಗಳಿಸಿತ್ತು. ಶಾರುಖ್ ಖಾನ್ ನಟಿಸಿರುವ 'ಚೆನ್ನೈ ಎಕ್ಸ್‌ಪ್ರೆಸ್' ಹಿಂದಿ ಸಿನಿಮಾಗೆ ಇವರೇ ಕಥೆ ಬರೆದಿದ್ದರು.

212. 2016 ಏಪ್ಯಾ ಪೆಸಿಫಿಕ್ ಸ್ಕ್ರೀನ್ ಆವಾರ್ಡ್ಸ್ ನಲ್ಲಿ ಅತ್ಯುತ್ತಮ ನಟನೆಗಾಗಿ ಪ್ರಶಸ್ತಿ ಪಡೆದ ನಟ ಯಾರು?

ಅ) ಅಮಿತಾಬ್ ಬಚ್ಚನ್

ಆ) ಜಾಕಿ ಚಾನ್

ಇ) ಮನೋಜ್ ಬಾಜ್ಪೇಯಿ

ಈ) ರಜನಿಕಾಂತ್

ಮನೋಜ್ ಬಾಜ್ಪೇಯಿ

ಬಾಲಿವುಡ್ ನಟ ಮನೋಜ್ ಬಾಜ್ಪೇಯಿ ರವರು 10ನೇ ಏಷ್ಯಾ ಪೆಸಿಫಿಕ್ ಸ್ಕ್ರೀನ್ ಆವಾರ್ಡ್ಸ್ ನಲ್ಲಿ ಅತ್ಯುತ್ತಮ ನಟನೆಗಾಗಿ ನೀಡುವ ನಟ ಪ್ರಶಸ್ತಿಯನ್ನು ಪಡೆದುಕೊಂಡರು. ಅಲಿಗರ್ ಚಿತ್ರದಲ್ಲಿನ ನಟನೆಗಾಗಿ ಈ ಪ್ರಶಸ್ತಿ ಅವರಿಗೆ ಲಭಿಸಿದೆ.

213. ಯಾವ ದಿನದಂದು ಸಂವಿಧಾನ ದಿನವನ್ನು ಆಚರಿಸಲಾಗುತ್ತದೆ?

ಅ) ನವೆಂಬರ್ 25

ಆ) ನವೆಂಬರ್ 26

ಇ) ನವೆಂಬರ್ 27

ಈ) ನವೆಂಬರ್ 24

ನವೆಂಬರ್ 26

ಸಂವಿಧಾನ ದಿನವನ್ನು ಪ್ರತಿ ವರ್ಷ ನವೆಂಬರ್ 26 ರಂದು ಆಚರಿಸಲಾಗುತ್ತದೆ. ನವೆಂಬರ್ 26, 1949 ರಲ್ಲಿ ಸಂವಿಧಾನವನ್ನು ಅಳವಡಿಸಿಕೊಂಡ ಕಾರಣ ಈ ದಿನವನ್ನು ಸಂವಿಧಾನ ದಿನವನ್ನಾಗಿ ಆಚರಿಸಲಾಗುತ್ತಿದೆ. ಭಾರತ ಸಂವಿಧಾನ ಜನವರಿ 26, 1950 ರಿಂದ ಜಾರಿಗೆ ಬಂದಿದೆ.

214. ವಿಶ್ವದ ಅತಿ ಹೆಚ್ಚು ಯುರೇನಿಯಂ ಉತ್ಪಾದಿಸುವ ರಾಷ್ಟ್ರ ______?

ಅ) ಆಸ್ಟ್ರೇಲಿಯಾ

ಆ) ಕೆನಡಾ

ಇ) ರಷ್ಯಾ

ಈ) ಫ್ರಾನ್ಸ್

ಕೆನಡಾ

215. ರಾಷ್ಟ್ರೀಯ ಕ್ಷೀರ ದಿನ (National Milk Day)_______?

ಅ) ನವೆಂಬರ್ 19

ಆ) ನವೆಂಬರ್ 24

ಇ) ನವೆಂಬರ್ 26

ಈ) ನವೆಂಬರ್ 27

ನವೆಂಬರ್ 26

www.karunaduexams.com

ರಾಷ್ಟ್ರೀಯ ಕ್ಷೀರ ದಿನವನ್ನು ನವೆಂಬರ್ 26 ರಂದು ಆಚರಿಸಲಾಗುತ್ತದೆ. ಕ್ಷೀರ ಬ್ರಹ್ಮ ಅಥವಾ ಬಿಳಿ ಕಾಂತಿ ಹರಿಕಾರ ಎಂದೇ ಖ್ಯಾತಿ ಹೊಂದಿದ್ದ ಡಾ. ವರ್ಗೀಸ್ ಕುರಿಯನ್ ರವರ ಜನ್ಮದಿನವನ್ನು ರಾಷ್ಟ್ರೀಯ ಕ್ಷೀರ ದಿನವನ್ನು ಆಚರಿಸಲಾಗುತ್ತದೆ.

216. "ಇಂಡೋ-ಅಮೆರಿಕನ್ ಚೇಂಬರ್ ಆಫ್ ಕಾಮರ್ಸ್ ನ (IACC)" ಅಧ್ಯಕ್ಷರಾಗಿ 2016-17 ನೇ ಸಾಲಿಗೆ ಯಾರು ಆಯ್ಕೆಯಾಗಿದ್ದಾರೆ?

ಅ) ಎನ್ ವಿ ಶ್ರೀನಿವಾಸನ್

ಆ) ಕುಮಾರ್ ಮುಖರ್ಜಿ

ಇ) ಕೆ ಕೆ ಕಮಲ್

ಈ) ಮನೋಜ್ ಕುಮಾರ್

ಎನ್ ವಿ ಶ್ರೀನಿವಾಸನ್

ಎನ್ ವಿ ಶ್ರೀನಿವಾಸನ್ ರವರು "ಇಂಡೋ-ಅಮೆರಿಕನ್ ಚೇಂಬರ್ ಆಫ್ ಕಾಮರ್ಸ್ ನ (IACC)" ಅಧ್ಯಕ್ಷರಾಗಿ 2016-17 ನೇ ಸಾಲಿಗೆ ಆಯ್ಕೆಯಾಗಿದ್ದಾರೆ.

217. ಇತ್ತೀಚೆಗೆ ನಿಧನರಾದ "ಫಿಡೆಲ್ ಕ್ಯಾಸ್ಟ್ರೋ" ರವರು ಯಾವ ದೇಶದ ಕ್ರಾಂತಿಕಾರಿ ಅಧ್ಯಕ್ಷ?

ಅ) ಕಾಂಬೋಡಿಯಾ

ಆ) ನೈಜೀರಿಯಾ

ಇ) ಕ್ಯೂಬಾ

ಈ) ರಷ್ಯಾ

ಕ್ಯೂಬಾ

ಕ್ಯೂಬಾದ ಕ್ರಾಂತಿಕಾರಿ ಅಧ್ಯಕ್ಷ ಫಿಡೆಲ್ ಕ್ಯಾಸ್ಟ್ರೋ ರವರು ನಿಧನರಾದರು. ಕ್ಯಾಸ್ರೋ ರವರು ಐವತ್ತು ವರ್ಷ ಕ್ಯೂಬಾದ ಅಧ್ಯಕ್ಷರಾಗಿ ಆಡಳಿತ ನಡೆಸಿದ್ದರು.

218. ಈ ಕೆಳಗಿನ ಸ್ಥಳಗಳ ಪೈಕಿ ಯಾವ ಸ್ಥಳದಲ್ಲಿ ನೀರು ಕನಿಷ್ಠ ತಾಪಮಾನದಲ್ಲಿ ಕುದಿಯುತ್ತದೆ?

ಅ) ಮುಂಬೈ

ಆ) ಊಟಿ

ಇ) ಮೌಂಟ್ ಅಬು

ಈ) ಶಿಮ್ಲಾ

ಊಟಿ

www.karunaduexams.com

219. ಯಾವ ರಾಜ್ಯ ಹಿಂದುಳಿದ ವರ್ಗ ಮತ್ತು ಕಾರ್ಮಿಕರಿಗೆ ಅಗ್ಗದ ಹಾಗೂ ಕೈಗೆಟುಕವ ದರದಲ್ಲಿ ಗುಣಮಟ್ಟದ ಆಹಾರ ಒದಗಿಸಲು "ಅನ್ನಪೂರ್ಣ ರಸೋಯಿ ಕಾರ್ಯಕ್ರಮ" ಜಾರಿಗೊಳಿಸಲಿದೆ?

ಅ) ರಾಜಸ್ತಾನ

ಆ) ಗುಜರಾತ್

ಇ) ಮಹಾರಾಷ್ಟ್ರ

ಈ) ತೆಲಂಗಣ

ರಾಜಸ್ತಾನ

ರಾಜಸ್ತಾನ ಸರ್ಕಾರ ಹಿಂದುಳಿದ ವರ್ಗ ಮತ್ತು ಕಾರ್ಮಿಕರಿಗೆ ಅಗ್ಗದ ಹಾಗೂ ಕೈಗೆಟುಕವ ದರದಲ್ಲಿ ಗುಣಮಟ್ಟದ ಆಹಾರ ಒದಗಿಸಲು "ಅನ್ನಪೂರ್ಣ ರಸೋಯಿ ಕಾರ್ಯಕ್ರಮ" ಜಾರಿಗೊಳಿಸಲಿದೆ. ರಿಕ್ಷಾ ಎಳೆಯುವವರು, ಕಾರ್ಮಿಕರು, ಆಟೋ ಚಾಲಕರು, ವಿದ್ಯಾರ್ಥಿಗಳು, ಮಹಿಳಾ ಕಾರ್ಮಿಕರು, ಹಿರಿಯರು ಹಾಗೂ ಇತರೆ ದುರ್ಬಲ ವರ್ಗದವರು ಈ ಕಾರ್ಯಕ್ರಮದ ಫಲಾನುಭವಿಗಳು.

220. ಭಾರತೀಯ ರಿಸರ್ವ್ ಬ್ಯಾಂಕ್ ಇಸ್ಲಾಂ ಧರ್ಮದ ಶರಿಯಾ ಬ್ಯಾಂಕಿಂಗ್ ತೆರೆಯಲು ಆಸಕ್ತಿ ತೋರಿದೆ. ಶರಿಯಾ ಬ್ಯಾಂಕಿಂಗ್ ಎಂದರೆ _______?

ಅ) ಬಡ್ಡಿ ಇಲ್ಲದೆ ಹಣ ನೀಡುವುದು

ಆ) ಬಡವರಿಗೆ ಮಾತ್ರ ಆರ್ಥಿಕ ನೆರವು ನೀಡುವುದು

ಇ) ಅಧಿಕ ಬಡ್ಡಿ ಆದರೆ ಅಲ್ಪಾವದಿ ಸಾಲ ನೀಡುವುದು

ಈ) ಅಲ್ಪ ಬಡ್ಡಿ ಆದರೆ ದೀರ್ಘಾವದಿ ಸಾಲ ನೀಡುವುದು

ಬಡ್ಡಿ ಇಲ್ಲದೆ ಹಣ ನೀಡುವುದು

ಶರಿಯಾ ಬ್ಯಾಂಕಿಂಗ್ ಎಂದರೆ ಇಸ್ಲಾಂ ಹಣಕಾಸು ನೀತಿಗಳ ಮೇಲೆ ಕಾರ್ಯನಿರ್ವಹಿಸುವ ಬ್ಯಾಂಕಿಂಗ್ ವ್ಯವಸ್ಥೆ ಅಂದರೆ ಬಡ್ಡಿ ಇಲ್ಲದೆ ಹಣ ನೀಡುವುದು ಎಂದರ್ಥ. ಹಾಗೆ ಇಟ್ಟ ಹಣವನ್ನು ಜೂಜು, ಬೆಟ್ಟಿಂಗ್, ನಿಷೇದಿತ ಮದ್ಯ ಸಂಬಂಧಿತ ವ್ಯವಹಾರಗಳಲ್ಲಿ ತೊಡಗಿಸುವಂತಿಲ್ಲ.

221. ದೇಶದ ಮೊದಲ ಡಿಜಿಟಲ್ ಹಳ್ಳಿ "ಅಕೊಡರ (Akodara)" ಯಾವ ರಾಜ್ಯದಲ್ಲಿದೆ?

ಅ) ರಾಜಸ್ತಾನ

ಆ) ಗುಜರಾತ್

ಇ) ಮಧ್ಯ ಪ್ರದೇಶ

ಈ) ಕೇರಳ

ಗುಜರಾತ್

www.karunaduexams.com

ಗುಜರಾತ್‌ನ ಸಬರ್‌ಕಾಂತಾ ಜಿಲ್ಲೆಯ ಅಕೋಡರಾ ಗ್ರಾಮ ದೇಶದ ಮೊದಲ ಡಿಜಿಟಲ್ ಗ್ರಾಮವಾಗಿದೆ. ನರೇಂದ್ರ ಮೋದಿ ರವರ ಸೂಚನೆ ಮೇರೆಗೆ ಐಸಿಐಸಿಐ ಬ್ಯಾಂಕ್ ಈ ಗ್ರಾಮವನ್ನು ಡಿಜಿಟಲ್ ಗ್ರಾಮವನ್ನಾಗಿ ಪರಿವರ್ತಿಸಿದೆ. ಈ ಗ್ರಾಮದಲ್ಲಿ ಬ್ಯಾಂಕಿಂಗ್ ಸಂಬಂಧಿಸಿದ ಎಲ್ಲಾ ವ್ಯವಹಾರಗಳನ್ನು ನಗದು ರಹಿತ ರೂಪದಲ್ಲಿ ಅಂದರೆ ಚೆಕ್, ಡಿಡಿ ಮತ್ತು ನೆಟ್ ಬ್ಯಾಂಕಿಂಗ್ ಮೂಲಕ ನಡೆಸಲಾಗುತ್ತಿದೆ.

222. 2016 ಯುನೆಸ್ಕೊ ಸಲೊನ್ ಯೂಥ್ ವಿಡಿಯೋ ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆದ ಭಾರತ ಕಿರು ಸಿನಿಮಾ ಯಾವುದು?

ಅ) ಮ್ಯಾಜಿಕಲ್ ಪಿಯಾನೊ

ಆ) ಮುರ್ಗ

ಇ) ಅಂಬಾನಿ ದಿ ಇನ್ವೆಸ್ಟರ್

ಈ) ಬೇರು

ಮ್ಯಾಜಿಕಲ್ ಪಿಯಾನೊ

ಟೂನ್ಜ್ ಮೀಡಿಯಾ ಗ್ರೂಫ್ ನ "ಮ್ಯಾಜಿಕಲ್ ಪಿಯಾನೊ" ಕಿರು ಚಿತ್ರವು 2016 ಯುನೆಸ್ಕೊ ಸಲೊನ್ ಯೂಥ್ ವಿಡಿಯೋ (UNESCO Salon Youth Video) ಸ್ಪರ್ಧೆಯಲ್ಲಿ ಪ್ರಶಸ್ತಿಯನ್ನು ಪಡೆದುಕೊಂಡಿತು. ಮಗುವೊಂದರ ಹುಟ್ಟುಹಬ್ಬಕ್ಕೆ ಮ್ಯಾಜಿಕಲ್ ಪಿಯಾನೊವನ್ನು ಉಡುಗೊರೆಯಾಗಿ ಪಡೆಯುವುದು ಚಿತ್ರದ ಕಥೆ ಸಾರಾಂಶ. ಈ ಮ್ಯಾಜಿಕಲ್ ಪಿಯಾನೊ ಬಳಸಿ ಮಗು ಇಡೀ ವಿಶ್ವವನ್ನೇ ಸ್ವಚ್ಚಗೊಳಿಸುವ ಕಥೆಯನ್ನು ಇದು ಒಳಗೊಂಡಿದೆ. ಈ ವಿಶಿಷ್ಟ ಕಥೆಯನ್ನು ಉತ್ತರಪ್ರದೇಶದ ಆಗ್ರಾ ಮೂಲದ ವಿದ್ಯಾರ್ಥಿ ಮಯುಲ್ ವರ್ಮಾ ಬರೆದಿದ್ದಾರೆ.

223. ಭಾರತದ "ಸಚಿನ್ ಸಿಂಗ್" ಯಾವ ಕ್ರೀಡೆಗೆ ಸಂಬಂಧಿಸಿದ್ದಾರೆ?

ಅ) ಕ್ರಿಕೆಟ್

ಆ) ಹಾಕಿ

ಇ) ಬಾಕ್ಸಿಂಗ್

ಈ) ಫುಟ್ಬಾಲ್

ಬಾಕ್ಸಿಂಗ್

ಸಚಿನ್ ಸಿಂಗ್ ಭಾರತದ ಉದಯೋನ್ಮುಖ ಬಾಕ್ಸರ್. ಇತ್ತೀಚೆಗೆ ಇವರು ಎಐಬಿಎ ಯೂಥ್ ವರ್ಲ್ಡ್ ಚಾಂಪಿಯನ್ ಷಿಪ್ ನಲ್ಲಿ ಚಿನ್ನ ಗೆಲ್ಲುವ ಮೂಲಕ ಈ ಚಾಂಪಿಯನ್ ಷಿಪ್ ನಲ್ಲಿ ಚಿನ್ನ ಗೆದ್ದ ಭಾರತದ ಮೂರನೇಯವರು ಎಂಬ ಗೌರವಕ್ಕೆ ಪಾತ್ರರಾದರು. ರಷ್ಯಾದ ಪೀಟರ್ಸಬರ್ಗ್ ನಲ್ಲಿ ನಡೆದ ಚಾಂಪಿಯನ್ ಷಿಪ್ ನ ಫೈನಲ್ ಪಂದ್ಯದಲ್ಲಿ ಸಚಿನ್ ರವರು

www.karunaduexams.com

ಕ್ಯೂಬಾದ ರಾಷ್ಟ್ರೀಯ ಚಾಂಪಿಯನ್ ಜಾರ್ಜ್ ಗ್ರಿನನ್ ರವರನ್ನು ಸೋಲಿಸಿ ಪ್ರಶಸ್ತಿ ಗೆದ್ದುಕೊಂಡರು.

224. ಇತ್ತೀಚೆಗೆ ನಿಧನರಾದ ಆನಂದ್ ರಾವ್ ಯಾವ ಭಾಷೆಯ ಪ್ರಸಿದ್ದ ಸಾಹಿತಿ?

ಅ) ಹಿಂದಿ

ಆ) ಮರಾಠಿ

ಇ) ಗುಜರಾತಿ

ಈ) ತೆಲುಗು

ಮರಾಠಿ

ಪ್ರಸಿದ್ದ ಮರಾಠಿ ಸಾಹಿತಿ ಹಾಗೂ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಆನಂದ್ ರಾವ್ ನಿಧನರಾದರು. ಅವರ ಆತ್ಮಚರಿತ್ರ "ಝೊಂಬಿ (Zombi)"ಗೆ 1991 ರಲ್ಲಿ ಸಾಹಿತ್ಯ ಪ್ರಶಸ್ತಿ ಲಭಿಸಿತ್ತು. ರಾವ್ ರವರು ಸುಮಾರು 40ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದರು.

225. ಪಾಕಿಸ್ತಾನ ಸೇನಾ ಪಡೆಯ ಮುಖ್ಯಸ್ಥರಾಗಿ ಈ ಕೆಳಗಿನ ಯಾರು ನೇಮಕಗೊಂಡಿದ್ದಾರೆ?

ಅ) ಜಾವೇದ್ ಬಾಜ್ವ

ಆ) ರಫೀಕ್ ಅಹಮ್ಮದ್

ಇ) ಜುಬೈರ್ ಹಯಾತ್

ಈ) ಮುಹಮ್ಮದ್ ಖರೇಷಿ

ಜಾವೇದ್ ಬಾಜ್ವ

ಪಾಕಿಸ್ತಾನ ಆಕ್ರಮಿತ ಕಾಶ್ಮೀರ ವ್ಯವಹಾರಗಳ ತಜ್ಞರಾಗಿರುವ ಜನರಲ್ ಖಮರ್ ಜಾವೇದ್ ಬಜ್ವಾ ಅವರು ಪಾಕಿಸ್ತಾನ ಸೇನಾ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.

ಪಾಕ್ ಸೇನಾ ಮುಖ್ಯಸ್ಥರಾಗಿದ್ದ ಜನರಲ್ ರಹೀಲ್ ಷರೀಫ್ ಅವರ ಸೇವಾವಧಿ ಇಂದು ಅಂತ್ಯಗೊಂಡಿದ್ದು, ವಿಶ್ವದ ಆರನೇ ಅತಿ ದೊಡ್ಡ ಸೇನಾಪಡೆಯ ನೂತನ ಸಾರಥಿಯಾಗಿ ನೇಮಕಗೊಂಡಿರುವ 57 ವರ್ಷದ ಬಜ್ವಾ ಅವರಿಗೆ ಅಧಿಕಾರ ಹಸ್ತಾಂತರಿಸಿದರು.

226. ಲಾಲ್ ಬಹದ್ದೂರ್ ಶಾಸ್ತ್ರಿ ನ್ಯಾಷನಲ್ ಅಕಾಡೆಮಿ ಆಫ್ ಅಡ್ಮಿನಿಸ್ಟ್ರೇಷನ್ (LBSNAA)ದ ನೂತನ ನಿರ್ದೇಶಕರಾಗಿ ಯಾರು ನೇಮಕಗೊಂಡಿದ್ದಾರೆ?

ಅ) ಶ್ರೀನಿವಾಸ್ ಠಾಗೂರ್

ಆ) ಉಪ್ಮ ಚೌಧರಿ

ಇ) ರಾಜೀವ್ ಕಪೂರ್

ಈ) ಶಾಂತಿ ಭೂಷಣ್

ಉಪ್ಮ ಚೌಧರಿ

ಉಪ್ಮ ಚೌಧರಿ, 1983 ಬ್ಯಾಚ್ ನ ಹಿರಿಯ ಐಎಎಸ್ ಅಧಿಕಾರಿ ರವರನ್ನು ಲಾಲ್ ಬಹದ್ದೂರ್ ಶಾಸ್ತ್ರಿ ನ್ಯಾಷನಲ್ ಅಕಾಡೆಮಿ ಆಫ್ ಅಡ್ಮಿನಿಸ್ಟ್ರೇಷನ್ ನ ನೂತನ ನಿರ್ದೇಶಕರಾಗಿ ನೇಮಕಮಾಡಲಾಗಿದೆ. ಆ ಮೂಲಕ ಚೌಧರಿ ರವರು LBSNAA ದ ಮೊದಲ ಮಹಿಳಾ ನಿರ್ದೇಶಕಿಯಾಗಿದ್ದಾರೆ. ರಾಜೀವ್ ಕಪೂರ್ ರವರ ಉತ್ತರಾಧಿಕಾರಿಯಾಗಿ ಇವರನ್ನು ನೇಮಕಮಾಡಲಾಗಿದೆ.

227. ಈ ಕೆಳಗಿನವುಗಳನ್ನು ಗಮನಿಸಿ:

I) ಕಡಲೇಕಾಯಿ

II) ಹತ್ತಿ

III) ಭತ್ತ

IV) ಗೋಧಿ

ಈ ಮೇಲಿನ ಯಾವುವು ಖಾರೀಫ್ ಬೆಳೆ ಆಗಿವೆ?

ಅ) I, II & III

ಆ) I, II & IV

ಇ) II, III & IV

ಈ) I, II, III & IV

I, II & III

228. ಈ ಕೆಳಗಿನ ಯಾವ ರಾಜ್ಯ ದೇಶದ ಮೊದಲ ನಗದು ರಹಿತ ಪಾವತಿ ರಾಜ್ಯ ಎಂಬ ಗೌರವಕ್ಕೆ ಶೀಘ್ರದಲ್ಲೇ ಪಾತ್ರವಾಗಲಿದೆ?

ಅ) ಸಿಕ್ಕಿಂ

ಆ) ಗೋವಾ

ಇ) ತ್ರಿಪುರ

ಈ) ಅರುಣಾಚಲ ಪ್ರದೇಶ

ಗೋವಾ

ಡಿ.31ರಿಂದ ಗೋವಾ ರಾಜ್ಯ ದೇಶದ ಮೊದಲ ನಗದು ರಹಿತ ಪಾವತಿ ರಾಜ್ಯವಾಗಲಿದೆ. ಆ ಮೂಲಕ ಗೋವಾದಲ್ಲಿ ಮೀನು, ತರಕಾರಿ ಹಾಗೂ ಇನ್ನಿತರೆ ವಸ್ತುಗಳನ್ನು ಕೊಳ್ಳಲು ಮೊಬೈಲ್ ಬಟನ್ ಒತ್ತಿದರೆ ಸಾಕು ವ್ಯಾಪಾರ ಮಾಡಿ ಮುಗಿಸಬಹುದು. ವ್ಯಾಪಾರ ಮಾಡಿದ ಹಣ ನೇರವಾಗಿ ವ್ಯಾಪಾರಿಯ ಖಾತೆಗೆ ಜಮೆಯಾಗುವಂತೆ ವ್ಯವಸ್ಥೆ ಮಾಡಲಾಗುತ್ತಿದೆ. ನಗದು

www.karunaduexams.com

ರಹಿತ ವ್ಯಾಪಾರದ ಬಗ್ಗೆ ನಾಗರಿಕರು ಹಾಗೂ ಸಣ್ಣ ಪುಟ್ಟ ವ್ಯಾಪಾರಿಗಳಲ್ಲಿ ಅರಿವು ಮೂಡಿಸುವ ಜಾಗೃತಿ ಕಾರ್ಯಕ್ರಮ ಮಾಡಲು ಸರ್ಕಾರ ಪ್ಲಾನ್ ಮಾಡಿಕೊಂಡಿದೆ.

229. ಯುನೈಟೆಡ್ ನೇಷನ್ಸ್ ಕಮೀಷನ್ ಆನ್ ಇಂಟರ್ನ್ಯಾಷನಲ್ ಟ್ರೇಡ್ ಲಾ (UNCITRAL) 50ನೇ ವಾರ್ಷಿಕೋತ್ಸವ ಆತಿಥ್ಯವನ್ನು ವಹಿಸಿದ್ದ ರಾಷ್ಟ್ರ ಯಾವುದು?

ಅ) ಚೀನಾ

ಆ) ಭಾರತ

ಇ) ಅಮೆರಿಕ

ಈ) ಪಾಕಿಸ್ತಾನ

ಭಾರತ

ಯುನೈಟೆಡ್ ನೇಷನ್ಸ್ ಕಮೀಷನ್ ಆನ್ ಇಂಟರ್ನ್ಯಾಷನಲ್ ಟ್ರೇಡ್ ಲಾ (UNCITRAL) 50ನೇ ವಾರ್ಷಿಕೋತ್ಸವ ನವದೆಹಲಿಯಲ್ಲಿ ಆಯೋಜಿಸಲಾಗಿತ್ತು. UNCITRAL ನ ಎಂಟು ಸದಸ್ಯ ರಾಷ್ಟ್ರಗಳ ಪೈಕಿ ಭಾರತ ಒಂದಾಗಿದ್ದು, ಇತ್ತೀಚೆಗೆ ಆರು ವರ್ಷದ ಅವಧಿಗೆ ಮರು ಆಯ್ಕೆಯಾಗಿದೆ.

230. ಗೋವಾದಲ್ಲಿ ಮುಕ್ತಾಯಗೊಂಡ 47ನೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರತಿಷ್ಠಿತ ಸ್ವರ್ಣ ಮಯೂರ ಪ್ರಶಸ್ತಿ ಗೆದ್ದುಕೊಂಡ ಸಿನಿಮಾ ಯಾವುದು?

ಅ) ಅಲ್ಲಮ

ಆ) ಡಾಟರ್

ಇ) ಕೋರ್ಟ್

ಈ) ರೌಫ್

ಡಾಟರ್

ಇರಾನ್‌ನ ಸಿನಿಮಾ ನಿರ್ದೇಶಕ ರೆಜಾ ಮೀರ್‌ಕರೀಮಿ ಅವರ 'ಡಾಟರ್' ಚಲನಚಿತ್ರಕ್ಕೆ 47ನೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರತಿಷ್ಠಿತ ಸ್ವರ್ಣ ಮಯೂರ ಪ್ರಶಸ್ತಿ ಲಭಿಸಿದೆ. ಈ ವರ್ಷದ ಆರಂಭದಲ್ಲಿ ನಡೆದ ಮಾಸ್ಕೊ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿಯೂ 'ಡಾಟರ್'ಗೆ ಅತ್ಯುತ್ತಮ ಸಿನಿಮಾ ಪ್ರಶಸ್ತಿ ದೊರೆತಿದೆ.ಈ ಸಿನಿಮಾದ ನಿರ್ದೇಶಕ ಮತ್ತು ನಿರ್ಮಾಪಕರಿಗೆ ₹ 40 ಲಕ್ಷ ನಗದು, ಪಾರಿತೋಷಿಕ ಮತ್ತು ಪ್ರಮಾಣಪತ್ರ ನೀಡಲಾಗುವುದು. 'ಡಾಟರ್' ದಕ್ಷಿಣ ಇರಾನ್‌ನಲ್ಲಿ ನಡೆಯುವ ಕುಟುಂಬವೊಂದರ ಕತೆ. ಆತ್ಮೀಯ ಗೆಳತಿಯ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಾಲಕಿಯೊಬ್ಬಳು ತನ್ನ ಕಟ್ಟುನಿಟ್ಟಿನ ತಂದೆಯ ಅನುಮತಿ ಪಡೆಯದೆ ಟೆಹರಾನ್‌ಗೆ ಹೋಗುವುದರ ಸುತ್ತ ಸಿನಿಮಾ ಸಾಗುತ್ತದೆ. ಅರ್ಧ ದಿನದಲ್ಲಿ ವಾಪಸ್ ಮನೆಗೆ ಬರಬಹುದೆಂದು ಯೋಚಿಸಿ ಅವಳು ಹೋಗುತ್ತಾಳೆ. ಆದರೆ

www.karunaduexams.com

ಹಿಂದಿರುಗುವಾಗ ವಾತಾವರಣ ಸಂಪೂರ್ಣವಾಗಿ ಮಂಜು ಮುಸುಕುತ್ತದೆ. ಆಕೆಯ ಎಲ್ಲ ಯೋಜನೆಗಳೂ ತಲೆಕೆಳಗಾಗುತ್ತವೆ. 'ಡಾಟರ್'ನಲ್ಲಿ ಕಟ್ಟುನಿಟ್ಟು ತಂದೆಯ ಪಾತ್ರ ಮಾಡಿದ ಇರಾನ್‌ನ ನಟ ಫರ್ಹದ್ ಅಸ್ಲಾನಿ ಅವರಿಗೆ ಅತ್ಯುತ್ತಮ ನಟ ಪ್ರಶಸ್ತಿ ನೀಡಲಾಗಿದೆ. ಈ ಪ್ರಶಸ್ತಿಗೆ ರಜತ ಮಯೂರ ಮತ್ತು ₹ 10 ಲಕ್ಷ ನಗದು ಬಹುಮಾನ ಇದೆ.

231. ಅಬುಧಾಬಿ ಫಾರ್ಮೂಲಾ-1 ರೇಸ್ ನಲ್ಲಿ ಪ್ರಶಸ್ತಿ ಗೆದ್ದುಕೊಂಡವರು _________?

ಅ) ಸೆಬಾಸ್ಟಿಯನ್ ವೆಟಲ್

ಆ) ಲೇವಿಸ್ ಹ್ಯಾಮಿಲ್ಟನ್

ಇ) ನಿಕೊ ರೊಸ್ಬರ್ಗ್

ಈ) ಕ್ರಿಸ್ಟೋಫರ್ ಜಾನ್

ಲೇವಿಸ್ ಹ್ಯಾಮಿಲ್ಟನ್

ಅಬುಧಾಬಿ ಗ್ರ್ಯಾನ್‌ಪ್ರಿ ಫಾರ್ಮುಲಾ–1 ಮರ್ಸಿಡೀಸ್ ತಂಡದ ಲೇವಿಸ್ ಹ್ಯಾಮಿಲ್ಟನ್ ರವರು ಚಾಂಪಿಯನ್ ಆಗಿ ಹೊರಹೊಮ್ಮಿದರು.

232. ಅಂತಾರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆ 'ಅತ್ಯುತ್ತಮ ಬಾಕ್ಸರ್' ಪ್ರಶಸ್ತಿ"ಗೆ ಆಯ್ಕೆಯಾಗಿರುವ ಭಾರತದ ಬಾಕ್ಸರ್ ಯಾರು?

ಅ) ವಿಕಾಸ್ ಕೃಷ್ಣ

ಆ) ದೇವೆಂದ್ರೊ ಸಿಂಗ್

ಇ) ಮನೋಜ್ ಕುಮಾರ್

ಈ) ಜಿತೇಂದ್ರ ಕುಮಾರ್

ವಿಕಾಸ್ ಕೃಷ್ಣ

ಭಾರತದ ಪ್ರಸಿದ್ಧ ಬಾಕ್ಸರ್ ವಿಕಾಸ್ ಕೃಷ್ಣ ಅವರನ್ನು ಅಂತಾರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆ ಅತ್ಯುತ್ತಮ ಬಾಕ್ಸರ್ ಪ್ರಶಸ್ತಿಗೆ ಆಯ್ಕೆ ಮಾಡಿದೆ. ವಿಕಾಸ್ ಅವರು ಏಷ್ಯನ್ ಕ್ರೀಡಾ ಕೂಟದಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದರು. ಡಿಸೆಂಬರ್ 20 ರಂದು ನಡೆಯುವ ಎಐಬಿಎ 70ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪ್ರಶಸ್ತಿ ನೀಡುವುದಾಗಿ ಬಾಕ್ಸಿಂಗ್ ಸಂಸ್ಥೆ ಹೇಳಿದೆ.

233. ಹಾಂಕಾಂಗ್ ಓಪನ್ ಸೂಪರ್ ಸರಣಿ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಮಹಿಳೆಯರ ಮತ್ತು ಪರುಷರ ಸಿಂಗಲ್ಸ್ ನಲ್ಲಿ ಪ್ರಶಸ್ತಿ ಗೆದ್ದವರು ಯಾರು?

ಅ) ತೈ ಜು ಯಿಂಗ್ ಮತ್ತು ಸಮೀರ್ ವರ್ಮಾ

ಆ) ಪಿ ವಿ ಸಿಂಧೂ ಮತ್ತು ಸಮೀರ್ ವರ್ಮಾ

ಇ) ತೈ ಜು ಯಿಂಗ್ ಮತ್ತು ಕಾ ಲಾಂಗ್ ಆಂಗಸ್

ಈ) ಪಿ ವಿ ಸಿಂಧೂ ಮತ್ತು ಕಾ ಲಾಂಗ್ ಆಂಗಸ್

ತೈ ಜು ಯಿಂಗ್ ಮತ್ತು ಕಾ ಲಾಂಗ್ ಆಂಗಸ್

ಹಾಂಕಾಂಗ್ ಓಪನ್ ಸೂಪರ್ ಸರಣಿ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಮಹಿಳೆಯರ ವಿಭಾಗದದಲ್ಲಿ ಚೀನಾದ ತೈ ಜು ಯಿಂಗ್ ರವರು ಭಾರತದ ಪಿ ವಿ ಸಿಂಧೂ ರವರನ್ನು ಸೋಲಿಸಿ ಪ್ರಶಸ್ತಿ ಗೆದ್ದುಕೊಂಡರು. ಪುರುಷರ ವಿಭಾಗದಲ್ಲಿ ಭಾರತದ ಸಮೀರ್ ವರ್ಮಾ ಅವರು 14–21, 21–10, 11–21ರಲ್ಲಿ ಸ್ಥಳೀಯ ಆಟಗಾರ ಕಾ ಲಾಂಗ್ ಆಂಗಸ್‌ಗೆ ಶರಣಾದರು.

234. ಈ ಕೆಳಗಿನ ಯಾರನ್ನು ಮಿಲಿಟರಿ ಕಾರ್ಯಾಚರಣೆಯ ಮಹಾ ನಿರ್ದೇಶಕರಾಗಿ ಇತ್ತೀಚೆಗೆ ನೇಮಿಸಲಾಗಿದೆ?

ಅ) ಸಮೀರ್ ಆಚಾರ್ಯ

ಆ) ಸುಧೀರ್ ರಾವ್ರೋತ್

ಇ) ಎ. ಕೆ. ಭಟ್

ಈ) ಸುದರ್ಶನ್ ಜೈನ್

ಎ. ಕೆ. ಭಟ್

ಮಿಲಿಟರಿ ಕಾರ್ಯಾಚರಣೆಯ ಮಹಾ ನಿರ್ದೇಶಕರಾಗಿ ಲೆಫ್ಟಿನೆಂಟ್ ಜನರಲ್ ಎ.ಕೆ.ಭಟ್ ಅವರನ್ನು ನೂತನವಾಗಿ ನೇಮಿಸಲಾಗಿದೆ. ಗೂರ್ಖಾ ರೆಜಿಮೆಂಟ್ ಅಧಿಕಾರಿಯಾಗಿರುವ ಭಟ್ ಅವರು ಪ್ರಸ್ತುತ ಸೇನಾ ಮುಖ್ಯ ಕಚೇರಿಯಲ್ಲಿ ದೂರುಗಳು ಮತ್ತು ಸಲಹಾ ಮಂಡಳಿಯಲ್ಲಿ ಮುಖ್ಯಸ್ಥರಾಗಿದ್ದಾರೆ.

235. ವಿಶ್ವದ ಮೊದಲ ಉಪ್ಪು ಸಹಿಷ್ಣುತೆ ಸಸ್ಯ (Hypophytes) ತೋಟವನ್ನು ಯಾವ ರಾಜ್ಯದಲ್ಲಿ ಇತ್ತೀಚೆಗೆ ಉದ್ಘಾಟಿಸಲಾಯಿತು?

ಅ) ತಮಿಳುನಾಡು

ಆ) ಗುಜರಾತ್

ಇ) ರಾಜಸ್ತಾನ

ಈ) ಮಹಾರಾಷ್ಟ್ರ

ತಮಿಳುನಾಡು

ವಿಶ್ವದ ಮೊದಲ ಉಪ್ಪು ಸಹಿಷ್ಣುತೆ ಸಸ್ಯ (Hypophytes) ತೋಟವನ್ನು ತಮಿಳುನಾಡಿನ ಕರಾವಳಿ ತೀರದ ವೇದಾರಣ್ಯಂ ಬಳಿ ಉದ್ಘಾಟಿಸಲಾಯಿತು. ವಿಶ್ವದಲ್ಲೆ ಇದೇ ಮೊದಲ ಬಾರಿಗೆ ಇಂತಹ ವಿಶಿಷ್ಟ ತೋಟ ನಿರ್ಮಿಸಲಾಗಿದ್ದು, ಮಾರಿಷಸ್ ಅಧ್ಯಕ್ಷ ಅಮಿನ ಗರಿಭ್ ಫಕಿಂ ಈ ತೋಟವನ್ನು ವಿಡಿಯೋ ಸಂವಾದ ಮೂಲಕ ಉದ್ಘಾಟಿಸಿದರು.

www.karunaduexams.com

236. ಏಷ್ಯಾದ ಮೊದಲ ಮತ್ತು ಅತಿ ಉದ್ದದ ಸೈಕಲ್ ಹೆದ್ದಾರಿ ಯಾವ ರಾಜ್ಯದಲ್ಲಿದೆ?

ಅ) ಕರ್ನಾಟಕ

ಆ) ಉತ್ತರ ಪ್ರದೇಶ

ಇ) ತಮಿಳುನಾಡು

ಈ) ಆಂಧ್ರ ಪ್ರದೇಶ

ಉತ್ತರ ಪ್ರದೇಶ

ಏಷ್ಯಾದ ಮೊದಲ ಮತ್ತು ಉದ್ದದ ಸೈಕಲ್ ಹೆದ್ದಾರಿಯನ್ನು ಉತ್ತರ ಪ್ರದೇಶದಲ್ಲಿ ಉದ್ಘಾಟಿಸಲಾಯಿತು. ಉತ್ತರ ಪ್ರದೇಶದ ಮುಖ್ಯಮಂತ್ರಿ ಅಖಿಲೇಶ್ ಯಾದವ್ ರವರು ಸೈಕಲ್ ಹೆದ್ದಾರಿಯನ್ನು ಉದ್ಘಾಟಿಸಿದ್ದಾರೆ. ಇದು ಭಾರತದ ಮೊದಲ ಸೈಕಲ್ ಹೆದ್ದಾರಿ ಸಹ ಆಗಿದೆ. 207 ಕಿ.ಮೀ ಉದ್ದದ ಸೈಕಲ್ ಹೆದ್ದಾರಿ ಆಗ್ರಾ ಮತ್ತು ಇಟಾವದ ಸಿಂಹ ಸಫಾರಿಯನ್ನು ಸಂಪರ್ಕಿಸಲಿದೆ.

237. ಫಾರ್ಮೂಲಾ -1 ರೇಸ್ ನಲ್ಲಿ ವಿಶ್ವಚಾಂಪಿಯನ್ ಪಟ್ಟವನ್ನು ಮುಡಿಗೇರಿಸಿಕೊಂಡವರು ಯಾರು?

ಅ) ನಿಕೊ ರೊಸ್ಬರ್ಗ್

ಆ) ಸರ್ಜಿಯೊ ಪೆರೆಜ್

ಇ) ಲೇವಿಸ್ ಹ್ಯಾಮಿಲ್ಟನ್

ಈ) ಸೆಬಾಸ್ಟಿಯನ್ ವೆಟಲ್

ನಿಕೊ ರೊಸ್ಬರ್ಗ್

ಮರ್ಸಿಡೀಸ್ ತಂಡದ ಚಾಲಕ ನಿಕೊ ರೋಸ್ ಬರ್ಗ್ ಅವರು ಚೊಚ್ಚಲ ಬಾರಿಗೆ ವಿಶ್ವ ಚಾಂಪಿಯನ್ ಪಟ್ಟ ಮುಡಿಗೇರಿಸಿ ಕೊಂಡಿದ್ದಾರೆ. ಅಬುದಾಬಿನಲ್ಲಿ ನಡೆದ ಋತುವಿನ ಕೊನೆಯ ರೇಸ್ ಅಬುಧಾಬಿ ಗ್ರ್ಯಾನ್‌ಪ್ರಿ ಫಾರ್ಮುಲಾ–1 ರೇಸ್‌ನಲ್ಲಿ ಎರಡನೇ ಸ್ಥಾನ ಗಳಿಸುವ ಮೂಲಕ ಜರ್ಮನಿಯ ಚಾಲಕ ಈ ಸಾಧನೆ ಮಾಡಿದರು. ಇಲ್ಲಿ ಪ್ರಶಸ್ತಿ ಗೆದ್ದರೂ ಕೂಡಾ ಮರ್ಸಿಡೀಸ್ ತಂಡದ ಲೇವಿಸ್ ಹ್ಯಾಮಿಲ್ಟನ್ ಅವರಿಗೆ ವಿಶ್ವ ಚಾಂಪಿಯನ್ ಪಟ್ಟ ಉಳಿಸಿಕೊಳ್ಳಲು ಆಗಲಿಲ್ಲ.

238. ಈ ಕೆಳಗಿನ ನೋಟು ಮುದ್ರಣ ಸಂಸ್ಥೆಗಳನ್ನು ಗಮನಿಸಿ:

I) ಮೈಸೂರು

II) ಸಲ್ಬೋನಿ

III) ನಾಸಿಕ್

IV) ದೇವಸ್

ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಮುದ್ರಣ ಸಂಸ್ಥೆಗಳು ಯಾವುವು?

www.karunaduexams.com

ಅ) I & II

ಆ) III & IV

ಇ) I, II & III

ಈ) I, II, III & IV

III & IV

ದೇಶದ ನಾಲ್ಕು ನೋಟು ಮುದ್ರಣ ಸಂಸ್ಥೆಗಳ ಪೈಕಿ ಮೈಸೂರು ಮತ್ತು ಸಲ್ಬೊನಿ ಸಂಸ್ಥೆಗಳ ಭಾರತೀಯ ರಿಸರ್ವ್ ಬ್ಯಾಂಕ್ ಒಡೆತನದಲ್ಲಿವೆ. ನಾಸಿಕ್ ಮತ್ತು ದೇವಸ್ ಮುದ್ರಣ ಸಂಸ್ಥೆಗಳು ಕೇಂದ್ರ ಸರ್ಕಾರದ ಒಡೆತನದಲ್ಲಿವೆ.

239. ಇತ್ತೀಚೆಗೆ ಕುಡಿಯುವ ನೀರಿನಲ್ಲಿ ಸಾಮಾನ್ಯವಾಗಿ ಕಂಡುಬರುವ ಮಾಲಿನ್ಯಕಾರಕಗಳನ್ನು ಗುರುತಿಸಿ:

I) ಅರ್ಸೆನಿಕ್

II) ಫ್ಲೂರೈಡ್

III) ಯುರೇನಿಯಂ

IV) ಸಾರ್ಬಿಟಲ್

ಸರಿಯಾದ ಉತ್ತರಗಳನ್ನು ಈ ಕೆಳಗೆ ನೀಡಿರುವ ಕೋಡ್ ಮೂಲಕ ಆಯ್ಕೆಮಾಡಿ:

ಅ) I & II

ಆ) I, II & III

ಇ) II & IIII

ಈ) I, II, III & IV

I & II

ಅರ್ಸೆನಿಕ್ ಮತ್ತು ಫ್ಲೂರೈಡ್ ಕುಡಿಯುವ ನೀರಿನಲ್ಲಿ ಸಾಮಾನ್ಯವಾಗಿ ಕಂಡುಬರುವ ಹಾನಿಕಾರಕ ರಾಸಾಯನಿಕಗಳಾಗಿವೆ. ಹಣ್ಣಿನ ತೋಟಗಳಿಂದ ಹರಿದು ಬರುವ ನೀರು ಅರ್ಸೆನಿಕ್ ನ ಪ್ರಮುಖ ಮೂಲವಾದರೆ, ರಸಗೊಬ್ಬರ ಮತ್ತು ಅಲ್ಯೂಮಿನಿಯಂ ಕಾರ್ಖಾನೆಗಳಿಂದ ಹೊರಬರುವ ತ್ಯಾಜ್ಯ ನೀರು ಫ್ಲೂರೈಡ್ ಗೆ ಕಾರಣವಾಗಿದೆ.

www.karunaduexams.com